೫. ದೇಶಭಕ್ತರು ಯಾರು? ದೇಶದ್ರೋಹಿಗಳು ಯಾರು [illegible] ಸಿದ್ಧಾಪುರದ [illegible] ತಿಳಿಯಬಲ್ಲರು. ಹಗಲಿರುಳೂ ಸಾಹಸ ಮಾಡಿ ಮಡಿದ ಸ್ವಾರ್ಥತ್ಯಾಗಿಗಳೂ, ಸ್ವಾತಂತ್ರ್ಯ [illegible] ದೇಶಭಕ್ತರನ್ನು ಅವರು ಗುರ್ತಿಸಬಲ್ಲರು. ಪರಕೀಯರಿಗೆ ದೇಶವನ್ನು ಮಾರಿ ಅವರು ನೀಡಿದ ಎಂಜಲಿಗೆ ಕೈಯೊಡ್ಡುವ [illegible] ಗುರ್ತಿಸಬಲ್ಲರು. [illegible] ಮೃತ್ಯುವಾದ ಕೊಡಲಿಯ [illegible] ಚನ್ನಾಗಿ ಗುರ್ತಿಸಬಲ್ಲರು. ಹೈನಾಮೃಗವೇ! ಕಾಂಗ್ರೆಸ ಕೆಲಸಗಾರರು ಲಕ್ಷ್ಯ ಸತ್ರಸಿಡುವದಿಲ್ಲವೆಂದು ಹೇಳುವೆ. ಅದನ್ನು [illegible] ಕಾಂಗ್ರೆಸದ ಸಂಘಟನೆಯೂ, ಅದರ ಶಿಸ್ತೂ, ಅದರ ಸತ್ಯಸಂಧತೆಯೂ ನಿನಗೇನು ತಿಳಿಯುವುದು! ಇರಲಿ. ನಿನ್ನ [illegible] ಪರೀಕ್ಷಿಸೋಣ. ಈ ಹಸ್ತಪತ್ರಿಕೆಯ [illegible] ನಿನಗೆ ಯಾರು ಕೊಟ್ಟರು ಹೇಳು. [illegible] ನಿನ್ನ ಇತರ [illegible] ಖರ್ಚನ್ನು ಪ್ರಸಿದ್ಧಗೊಳಿಸು. ಆಗ ನಿನ್ನ ಬಣ್ಣವು ಹೊರಬೀಳುವುದು.

೬. ಇದು ಈ ಮೃಗದ ಮೂರ್ಖತೆಯ [illegible] ಸರಕಾರ ವಿರುದ್ಧ ಚಳವಳಿಯು ಪಾಶ್ಚಿಮಾತ್ಯರಾಷ್ಟ್ರಗಳಿಂದ ಹಿಂದೂಸ್ಥಾನಕ್ಕೆ ಒಳನುಗ್ಗಿದ ಒಂದು ಬೆಣ್ಣೆಯಂತೆ. ಇಡೀ ಪ್ರಪಂಚವೇ ಸತ್ಯಾಗ್ರಹವು [illegible] ಪ್ರಪಂಚಕ್ಕೆಲ್ಲಾ ತೋರಿಸಿಕೊಟ್ಟ ಉತ್ಕೃಷ್ಟ ಮಾರ್ಗವೆಂದು ಸಾರುತ್ತಿದೆ. ಈ ಪ್ರಾಣಿ ಮಾತ್ರ ಇದು ಪಾಶ್ಚಾತ್ಯ ದೇಶದಿಂದ ಬಂದ ಬೆಣ್ಣೆಯೆಂದು ಹೇಳುತ್ತದೆ. ಒಳ್ಳೇದು, ಬ್ರಿಟಿಷರು ಯಾರು? ಅವರು ಪಾಶ್ಚಾತ್ಯರಲ್ಲ, ಇವರ ಚಿಕ್ಕಪ್ಪ ದೊಡ್ಡಪ್ಪ [illegible] ಬ್ರಿಟಿಷ ಸರಕಾರವು ಇವನ [illegible] ಚಳವಳಿಯು ದೂರ ಇರುವ ಹಾಗೆ ಮಂತ್ರ [illegible] 'ಆ ಮಂತ್ರಕ್ಕೆ ಸಪ್ತಾಕ್ಷರೀ ಮಂತ್ರವೆಂದು ಹೆಸರು. ಆ ಮಂತ್ರದ ಸಿದ್ಧಿಗೆ [illegible] ಸರ್ಕಾಸ್ ಮೃಗಂ [illegible] ಗೊಂಡನಂತವರಿನ [illegible] ಆ ಮಂತ್ರಕ್ಕೆ ಋಷಿ [illegible] ದೇವತೆ [illegible]' ಅದರ ಮೂಲಂ ಗುಲಾಮನಾಗಿ ಬಾಳು' ಇದುವೆ ಗುಲಾಮಗಿರಿಯ ಪೆರ್ಮೆಯ ಸಪ್ತಾಕ್ಷರೀ ಮಂತ್ರಂ" ಇನ್ನು [illegible] 'ನನ ತಿನ್ನುವವನಿಗೆ ನಗಣಿ [illegible]! ರಾಜಾ ಪ್ರತ್ಯಕ್ಷ ದೇವತಾ' ಅಂತೆ ರಾಜನಿಗೆ ಇದು ಅನ್ವಯಿಸುತ್ತದೆ? ರಾಮನೂ ರಾಜನೇ—ರಾವಣನೂ ರಾಜನೇ, ಕೃಷ್ಣನೂ ರಾಜನೇ—ಕಂಸನೂ ರಾಜನೇ. ಧರ್ಮರಾಜನೇ—ದುರ್ಯೋಧನನೂ ರಾಜನೇ. ಇವರ [illegible] ಬ್ರಿಟಿಷ ಕೌರವನಿಗೆ ಯಾವ ಗತಿಯೋ ಅದನ್ನು ನಾನೇಕೆ ಹೇಳಲಿ! ಎಲ್ಲರಿಗೂ [illegible] "ಬಾಂಧವರೇ, ಇಂಥ ಕಠಿಣ ಪ್ರಸಂಗದಲ್ಲಿ ನಿಕಾರವಸರಾಗದೆ ಪೂರ್ಣ ವಿಚಾರಮಾಡಿರಿ" ಯಾರಿಗೆ ಯಾವ [illegible] ವಿಚಾರ ಮಾಡಿ, ಕೌರವನ ಪಕ್ಷವೋ ಧರ್ಮರಾಯನ ಪಕ್ಷವೋ ಹೇಳಿರಿ.

A3

"ಅಶಾಂತಸ್ಯ ಕುತಃ ಸುಖಂ"! ದೇವರೇ ಗತಿ! ಭಗವದ್ಗೀತೆ ಜೋರ! ಶಾಂತಿ ಎಂದರೆ ಬೇರೆ ಶಾಂತಿಯಲ್ಲವಯ್ಯಾ ಹುಚ್ಚ ಮುಂದೆ ನೋಡು ಭಗವದ್ಗೀತೆಯ

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"

'ಹತೋವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾವಾ ಭೋಕ್ಷ್ಯಸೇ ಮಹೀಂ ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ'

ಗುಲಾಮನಿಗೆ ತಲೆಯೊಡ್ಡಿ ಚಿನ್ನದ ಪಂಜರದೊಳಕ್ಕೆ ಹೋಗುತ್ತಿರುವಾಗ ಮಾರಿಗೆ ಬಲಿಕೊಡಲು ತಂದ ಕುರಿಯು ಕೆಂಪಕ್ಕೆ ಕಟ್ಟಿದ ಸೊಪ್ಪನ್ನು ತಿನ್ನಲು ಆಶಿಸುವಂತೆಯೂ ತಡಿ ಲಗಾಮುಗಳು ತನ್ನ ಅಲಂಕಾರಕ್ಕಾಗಿಯೇ ಮಾಡಲ್ಪಟ್ಟಿವೆಯೆಂದು ತಿಳಿದು ಮುಂದೆ ಲಗಾಮು ಜಗ್ಗಿ ಚಾಬೂಕ ಹೊಡೆದು ಕಾಲು ಮುಳ್ಳು ಒತ್ತುವುದನ್ನು ಅರಿಯದ ಕುದುರೆಯು ಹಿಗ್ಗುವಂತೆಯೂ ಈಗಿನ ಕೆಲವು ದೊಡ್ಡ ಜನರುಗಳಿಗೂ, ಸಣ್ಣ ಅಧಿಕಾರಕ್ಕೂ ಮೋಹಿತನಾಗಿ ಗುಲಾಮಗಿರಿಯೇ ಆನಂದವೆಂದು ನಿನ್ನ ನಗುವನ್ನು ನೋಡಿ ನಿನ್ನ ತಲೆ ಬರಹವೇ ಇಷ್ಟೆಂದು ನನಗೂ ನಗೆಯು ಬರುತ್ತದೆ ಅವರ ಸಿದ್ಧಾಪುರದ ದೃತರು ರಾತ್ರಿ ಕಂಡ ಬಾವಿಗೆ ಹಗಲು ಬೀಳುವವರಲ್ಲ ಬ್ರಿಟಿಷರ ಮೈತ್ರಿಯು ಕಂಕಳಲ್ಲಿ ಕುಂಬಳ ಬಿಟ್ಟುಕೊಂಡಂತೆ ಎಂದು ಅವರು ತಿಳಿದಿದ್ದಾರೆ ಅವರಿಗೆ ನೀನು ಬುದ್ಧಿ ಹೇಳುವುದು ಬೇಡ ನಿನ್ನ ಪಾಡಿಗೆ ನೀನು ನಗು ಹುಚ್ಚಾ, ನಗು, ನಿನ್ನನ್ನು ನೋಡಿ ಜಗತ್ತೇ ನಗುತ್ತಿದೆ

ಮತ್ತೊಬ್ಬ ಭಾರತೀಯ

ಕರನಿರಾಕರಣೆ ಕರಪತ್ರ
ನಂ. ೨೨

ಸಿರ್ಸಿ, ಸಿದ್ದಾಪುರ, (ಕರ್ನಾಟಕ)
ತಾ|| ೨೭—೨—೧೯೩೨.

ಸರಕಾರದ ಹಿಂದೀ ನೌಕರರಿಗೆ

೧. ಹಗೆಗಳಿಗೆ ತಂಪಾಗಿ ಬದುಕುವ ಮುಗುದರುಂಟೆ?

ಆಹಾ ಏನೆಂಬೆನೇನೆಂಬೆನೀ ಕಾಲ! ಧನದಾಸೆಗೆ ಜೀವನವನು ಮಾರಿ, ಸ್ವಾತಂತ್ರ್ಯದಾಸೆಯನುಳಿದು, ದೇಶಬಾಂಧವರ ನೆತ್ತರ ಕುಡಿದು, ಸತಿ ಸಾಧ್ವಿಯರ ಬಡಿದು, ಸ್ವದೇಶದುನ್ನತಿಗೆ ಶತ್ರುವಾಗಿ, ದೇಶಮಾತೆಯ ಕೊರಳಿಗೆ ಶೃಂಖಲದ ಬಿಗಿಯಾಗಿ, ಹಗೆಗಳಿಗೆ ತಂಪಾಗಿ ಮೆರೆವರಲಾಪಲರು ಭಾರತೀಯರು! ಇವರಿಗೆಂದು ದಾರಿಯ ತೋರುವನು ದೇವನು?

೨. ಆರೊಡನೆ ಕಾದುವಿರಯ್ಯ ನೀವು?

ಸರಕೀಯ ಆಳರಸರ ಹಿಡಿಯೊಳಗತ್ತಣಿಂದ ಪಾರಾಗಬೇಕೆನುವ ಸೋದರರೊಡನೆಯೋ? ಸ್ವಾತಂತ್ರ್ಯ ಸಂಗ್ರಾಮದೊಳಗೆ ಜೀವಿತವನರ್ಪಿಸಿದ ಸೋದರಿಯರೊಡನೆಯೋ? ಒಂದೇ ದೇಶದೊಳಗೆ ಹುಟ್ಟಿ, ಒಂದೇ ನೀರ ಕುಡಿದು ಒಂದೇ ಮನೆಯೊಳಗೆ ಬೆಳೆದ ಬಂಧು ಬಾಂಧವರೊಡನೆಯೋ? ಆವ ಶತ್ರುಗಳಯ್ಯ ಭಾರತೀಯ ಬಂಧು ಭಗಿನಿಯರು ನಿಮಗೆ? ಯಾರ ಧನದಿಂದ ಮೋಜು ನಿಮಗೆ, ಯಾರ ಧಾನ್ಯ ಯಾರ ಬಟ್ಟೆ ನಿಮ್ಮ ಸತೀ-ಸುತರಿಗೆ—ಅವರಿಗೇನಯ್ಯಾ ನಿಮ್ಮ ಸಿಟ್ಟು? ಇದು ತರವೇನಯ್ಯಾ? ಇದು ಸರಿಯೇನಯ್ಯಾ?

ಆವ ಸಿಟ್ಟಯ್ಯ ನಿಮಗೆ?

ಸತ್ಯಾಗ್ರಹಿಗಳು ಸ್ವರಾಜ್ಯ ಬೇಕೆನುವರೆಂದೇ? ಸ್ವರಾಜ್ಯಕ್ಕಾಗಿ ಸತ್ಯಾಗ್ರಹ ಮಾಡುವರೆಂದೇ? ಅಹಿಂಸಾವ್ರತಿಗಳೆಂದೇ! ನಮ್ಮ ದೇಶ ನಮ್ಮದೆಂಬರೆಂದೇ? ನಮ್ಮವರು ನಾವೆಂಬರೆಂದೇ? ನಮ್ಮ ದೇಶದ ಧನ ನಮ್ಮ ದೇಶದ ಬಡವರ ಹೊಟ್ಟೆಗಿರಬೇಕೆಂಬರೆಂದೇ?

ಆಂಗ್ರೇಜರನು ಹೊಡೆಯಲಿಲ್ಲ, ಬಡಿಯಲಿಲ್ಲ; ನಿಮ್ಮ ತಂಟೆಗೇ ಬರಲಿಲ್ಲ. ಆಂಗ್ರೇಜರಿಗಾವ ಹಿಂಸೆಯಿಲ್ಲ; ನಿಮಗೂ ಇಲ್ಲ. ಮತ್ತೇಕಯ್ಯ ಸಿಟ್ಟು ನಿಮಗೆ?

ಸ್ವಾತಂತ್ರ್ಯಕ್ಕಾಗಿ ಮನೆಮಂದಿ-ಮಾರು ಬಿಟ್ಟು ದೇಶಭಕ್ತರು ಬಂದೀವಾಸಿಗಳಾದುದಕೆ ಸಿಟ್ಟೋ? ಮಹಾತ್ಮರ ನಂಬಿ, ಅಹಿಂಸಾ ಧರ್ಮಕೆ ಬಾಗಿ ಕೈಮಾಡದೆ ಹಿಂಸೆಯ ಸಹಿಸಿದುದಕೆ ಸಿಟ್ಟೋ? ಪತಿಯು ಬಂದಿವಾಸಿಯಾಗ, ಮನೆ-ಮಾರು ಮರುಳರ ಪಾಲಾಗೆ, ಕರೆವ ಕಾಮಧೇನು ಜಪ್ತಾಗೆ, ಹಾಲಿಲ್ಲದೆ ಅಳುವ ಶಿಶುವ ಮುಂದಿಟ್ಟು, ಬಂದಿವಾಸೀ ಪತಿಯ ಕ್ಲೇಶಗಳ ನೆನೆದು, ಮುಂದುಗಾಣದೆ, ಕಣ್ಣೀರಿಡುವ ಸಾಧ್ವೀಮಣಿಯರ ಮೇಲೆ ಸಿಟ್ಟೋ? ನಾನಾ ಕ್ಲೇಶವ ಸಹಿಸಿ, ಆತ್ಮವ ದಂಡಿಸಿ, **ದೇಶಸೇವಾವೃತ್ತಿಯು ಸಕಲರೊಳಗೂ ವ್ಯಾಪಿಸಲು** ಎಂದು ದೇವದೇವನ ಪ್ರಾರ್ಥಿಸುವ ಅನಸನವ್ರತಿಗಳಾದ ಸೇವಿಕೆಯರಮೇಲೆ ಸಿಟ್ಟೋ? ಆವ ಸಿಟ್ಟು ನಿಮಗೆ? ಆವ ಸಿಟ್ಟಿನಿಂದ ಕೈಮಾಡುವಿರಿ ನೀವು? ಆವ ಸಿಟ್ಟಿನಿಂದ ಅಬಲೆಯರನು ಸದೆಬಡಿಯುವಿರಿ ನೀವು? ಆವ ಸಿಟ್ಟಿನಿಂದ ನಿಶ್ಶಸ್ತ್ರ ದೇಶಸೇವಕರನು ದಂಡಿಸುವಿರಿ ನೀವು?

84
84

[illegible]

ಕರನಿರಾಕರಣೆ ಕರಪತ್ರ
ಸಂ. ೨೩

ಸಿರ್ಸಿ, ಸಿದ್ದಾಪುರ (ಕರ್ನಾಟಕ)
ತಾ|| ೧—೮—೧೯೩೦

ಎಚ್ಚರಿಕೆ! ಎಚ್ಚರಿಕೆ! ಎಚ್ಚರಿಕೆ!

(ಭಾರತೀಯ ಬಂಧುಭಗಿನಿಯರಿಗೆ)

ರಾಗ, ಮುಖಾರಿ (ಧಾಟಿ-ನೀಮಾಯೆಯೊಳಗೊ ನಿನ್ನೊಳು ಮಾಯೆಯೋ) ಝಂಪೆ ತಾಳ

ಎಚ್ಚರಿಕೆ! ಎಚ್ಚರಿಕೆ! ಎಚ್ಚರಿಕೆ ಮನುಜಾ || ಪಲ್ಲ ||
ಹುಚ್ಚನಾಗುತಲವರ| ಮುಚ್ಚುದಬ್ಬಾಳಿಕೆಯ| ನೆಚ್ಚಿನೀ ಕೆಡಬೇಡ ಪರದೇಶಿಯವರ
|| ಅನುಪಲ್ಲ ||

ವೀರಾನುಜಾಗ್ರಜರೆ ವಿನಯದಲಿ ಬೇಡುವೆನು ಅನುವಾಗಿ ದೇಶಸೇವೆಗಳನ್ನು ಮಾಡೀ ||
ವೀರಮಾತೆಯರಲ್ಲಿ ಜನಿಸಿರುವ ತನುಜಾತರೆಂದೆನಿಪ ಕೀರುತಿಯ ಹರಡಿ ಭೂತಗಳಲ್ಲೀ || ೧ ||

ಅಕ್ಕತಂಗಿಯರೆ ನಿಮ್ಮಕ್ಕರದಿ ಬೇಡುವೆನು ಅರ್ಥಿಯಲಿ ನಿಮ್ಮ ಪತ್ನಿಗಳಿಗೆ ನೀವೂ ||
ಉಕ್ಕ್ಯಾನಂದದಲಿ ಸೇವೆಯೊಳು ನೆರವಾಗಿ ಧೀರಮಹಿಳೆಯರೆಂಬ ನಾಮವನು ಧರಿಸೀ || ೨ ||

ಮುದ್ದು ಭಾರತಿಯ ಬಾಲಕರೆ ನೋಡಿರಿ ಇತ್ತ ಪರದೇಶಿಯವರೆಂಬ ಕರಿವೆಗಳು ಬಂದು ||
ನಿಮ್ಮ ಸಕ್ಕರೆಯ ತಾವ್ಸದ್ದು ಮಾಡದಹಾಗೆ ಕದ್ದೊಯ್ಯುವವರ ನೊದ್ದೋಡಿಸಿರಿ ನೀವೂ ಬೇಗಾ || ೩ ||

ಅಂಚೆಪೆಟ್ಟಿಗೆಗಳಿಲ್ಲದಂತೆ ಕಳುಹಿಸುತಿಹರು * ಸಪ್ತಾಕ್ಷರಿಯ ಬೀಜಮಂತ್ರಗಳ ನಮಗೇ ||
ಮಿಂಚಿನಂತೆಸೆವ ಪರಪಂಜರದ ಬಾಳುವೆ ಸಾಕು ಮುಂಚೆ ನೀನದ ಕಡಿದು ಹೊರಗೆ ಬಾರಯ್ಯಾ || ೪ ||

ಮಾತೆಯಳ ಪಾನಗಳು ಸೂರೆ ಹೋಗುತಲಿಹುದು ಪ್ರೀತಿಯಿಂದುಳಿಸಿ ಭೀತಿಯಬಿಟ್ಟು ಕಾದೀ ||
ನೋತಿನೆಂಬುವಸಲ್ಲ ಹಾಡಿಕುಣಿಯುವ ಕಾಡು ಕೋತಿಗಳು ತಾವು ಓಡಿ ಪೋಪಂತೆ ಮಾಡೀ || ೫ ||

ಶೀಲೆಯರ ಮಾನಗಳ ಸೂರೆ ಮಾಡುತಲಿರುವ ಪೊಳೆ ಪೋಲೀಸೆಂಬ ಮೂಢಮಂಗಗಳಾ ||
ಕೀಳತನದ ಚೇಷ್ಟೆಗಳ ನೋಡಿ ಅವುಗಳಹಿಂದೆ ದೂಡಿ ಸ್ವಾತಂತ್ರ್ಯ ಸಂಪಾದಿಸುತಲಿಹರೂ || ೬ ||

ಅಗಲಿ ಪತಿಸುತರುಗಳ ಅನ್ನಪಾನವ ತೊರೆದು ಹಗಲಿರುಳು ದೇಶಸೇವೆಯ ಗೈಯ್ಯುತಿರುವಾ ||
ಸುಗುಣೆಯರ ದಂಡಿಸಿದ ಮತಿವಿರಳ ಅಧಿಕಾರಿ, ನಿಗಡರಾಮುದ ಮುಳಿದ ರಾಕ್ಷಸರು ಕೇಳೀ || ೭ ||

---

* ಸಪ್ತಾಕ್ಷರೀ ಮಂತ್ರ—"ಭವತಿ ಭಿಕ್ಷಾಂದೇಹಿ"

೪. ಆರಿಗಾಗಿ ಕಾದುವಿರಯ್ಯಾ ನೀವು?

ಅಣ್ಣ-ತಮ್ಮಂದಿರಿಗಾಗಿಯೋ? ಅಕ್ಕ-ತಂಗಿಯರಿಗಾಗಿಯೋ? ತಾಯಿ-ತಂದೆಯರಿಗಾಗಿಯೋ? ನೆಂಟರಿಷ್ಟರಿಗಾಗಿಯೋ? ಮಿತ್ರಬಾಂಧವರಿಗಾಗಿಯೋ? ಆರಯ್ಯ ಅಂಗ್ರೇಜರು ನಿಮಗೆ? ಜರ್ಮನಿಯೊಡನೆ ಹೋರಾಡಿ ಅಂಗ್ರೇಜರ ಕೊರಳಿಗೆ ತುತ್ತಾದ ಮೃತ್ಯುವ ತಪ್ಪಿಸಲು ಹದಿನಾಲ್ಕು ಲಕ್ಷ ಭಾರತೀಯರು ಕಾದಿದರು. ಲಕ್ಷ ಭಾರತೀಯರು ರಣಾಂಗಣದೊಳಗೆ ತಲೆಯನಿಳುಹಿ ಮಡಿದರು. ಜರ್ಮನಿಗೂ, ಭಾರತಿಗೂ ಆವ ಜಗಳವಿಲ್ಲ, ಆವ ದ್ವೇಷವಿಲ್ಲ ಆದರೂ ಅಂಗ್ರೇಜರಿಗೆ ನೆರವಾದರು ಭಾರತೀಯರು. ಅಂಗ್ರೇಜರು ಮಾಡಿದುದೇನಯ್ಯಾ? ಮುಸ್ಲಿಮರಿಗೂ ದ್ರೋಹ; ಹಿಂದೂಗಳಿಗೂ ದ್ರೋಹ. ಮುಸ್ಲಿಮ ರಾಜ್ಯಗಳ ಬೆನ್ನ ಮುರಿದರು; ಹಿಂದೂಗಳನ್ನು ಹಿಮ್ಮೆಟ್ಟಿಸಿದರು. ಅಂಗ್ರೇಜರು ಆರ ಮಿತ್ರರಯ್ಯಾ? ಸೂಳೆ ಯಾರಿಗೆ ತಾಯಿಯಯ್ಯಾ? ದುಡ್ಡಿದ್ದವನೇ ದೊಡ್ಡಪ್ಪನವರಿಗೆ ಹಣದ ಸೂರೆಗಾಗಿ ಮಿತ್ರರು, ಸೂರೆಗೆ ನೆರವಾಗದವರೆ ಶತ್ರುಗಳು ನೀವವರ ಕೈಯೊಳಗಿಹ ಮೂಕ ಬಾಣಗಳು. ಬಾಣ ತಗಲುವುದು ಬಡವನಿಗೆ. ಬಡವರನು ಆರಿಗಾಗಿ ಕೊಲುವಿರಯ್ಯಾ!

೫ ಆವ ಉತ್ಸಾಹವಯ್ಯಾ ನಿಮಗೆ?

ನೆಲನನು ಗೆದ್ದು ಅರಸರಾಗುವಿರೆಂದೆ? ನೆಲನ ಒಡೆತನವ ಸಾಧಿಸುವಿರೆಂದೇ? ಗೆಲುವು ನಿಮ್ಮ, ಗೆದ್ದ ಬಳಿಕ ಅರಸನು ಬೇರೆ. ಒಡೆತನ ಪರಕೀಯರಿಗೆ. ಆಳಿಕಾರತನ ತಪ್ಪದು ನಿಮಗೆ ಬಾಯ್ದಂಬುಲಕೆ ಕೈಯಾನುವ ಹೀನವೃತ್ತಿ ಕಾದಿಹುದು ಆಳಿಕಾರನಿಗೆ ಒದುಕಿದರೂ ಬೇಡಾದ ಬಾಳು ದೇಶಭಕ್ತರಿಗೆ. ಹೊರಲಾರದ ಸಂಕೋಲೆ ಭಾರತಮಾತೆಗೆ. ಮಾತೆಯ ಪಾರತಂತ್ರ್ಯದ ದುಃಖವೂ, ಸೋದರರ ಸಂಕಟವೂ, ಸತೀಮಣಿಯರ ರೋದನವೂ ಬಿಳಿಯರ ಬಾಯ್ದಂಬುಲ ನಿಮಗೆ ಇಹದೊಳಗೆ ನರಕವು ಸಿದ್ಧ ಪರದೊಳಗೆ. ನಿರುತ್ತರದು ನೀವು ಯಮನ ಮುಂದೆ ಆಯ ತಪ್ಪಿದರೆ ತಲೆಯೆತ್ತಲು ನಾಚುವಿರಿ ನೀವು. ಜನ್ಮಾಂತ 'ದೇಶದ್ರೋಹಿ' ಎಂಬ ತಲೆ ಬರಹ ನಿಮ್ಮ ಹಣೆಯೊಳಗೆ

೬. ಇದು ಸತ್ಯಸಂಗ್ರಾಮವಯ್ಯಾ

ಇದು ಸಂಗ್ರಾಮ ಪರರನು ನೋಯಿಸದ, ಅನ್ಯಾಯಕೆ ಅಂಜದ ಆತ್ಮನ ದಂಡಿಸಿ, ಆತ್ಮಶೋಧಬಲದ, ಅನುಪಮ ತಪೋಬಲದ, ಅಹಿಂಸಾ ಸಂಗ್ರಾಮ. ಇದು ಅಹಿಂಸಾ ಸಂಗ್ರಾಮ ಆಜನ್ಮಸಿದ್ಧ ಸ್ವಾತಂತ್ರ್ಯೋಪಾಸನೆಯ ಘನ ಸಂಗ್ರಾಮ.

ಸತ್ಯಕೆ ಮಣಿದು, ಅಹಿಂಸಾ ಧರ್ಮವ ಹಿಡಿದು, ಭೇದಭಾವವ ಮುರಿದು, ಸ್ವರಾಜ್ಯನ ಪಡೆದು, ಭಾರತೀಯರೆಲ್ಲಾ ಒಂದೇ, ನಾವೆಲ್ಲಾ ಒಂದೇ ಎಂದು ಸಾರುವ, ಸಮಾನ ಸೋದರತೆಯ ಸಾಧಿಸುವ, ಸ್ವಾತಂತ್ರ್ಯ ಸಂಗ್ರಾಮ ಇದು ಘನ ಸ್ವಾತಂತ್ರ್ಯ ಸಂಗ್ರಾಮ

೭. ಗಾಂಧಿ ಗುರುವಿಗೆ ಶರಣಾಗಯ್ಯಾ

ಈ ಸತ್ಯಸಂಗ್ರಾಮದೊಳಗೆ ನಮ್ಮ ಸೋಲಿಸಲು, ನಮ್ಮ ತುಳಿಯಲು, ನಮ್ಮ ಕೊಲ್ಲಲು, ಬಿಳಿಯರು ಮುಂದೆ ಬಂದರೆ ಬರಲಿ. ನಮ್ಮ ಪರರ ನಮ್ಮನೆದುರಿಸುವುದು ಸಲ್ಲದಯ್ಯಾ. ನಮನಿಮಗಾವ ವೈರವಿಲ್ಲ. ನೀವು ನಾವು ಒಂದೇ ತಾಯಿಮಕ್ಕಳು. ಎಂತಾದರೂ ನಾವೆಲ್ಲಾ ಒಂದೇ. ಎಂದೆಂದಿಗೂ ಬಿಳಿಯರು ಬೇರೆಯೇ; ನಮ್ಮವರಲ್ಲ. ಜನ್ಮಾಂತ ಇವರ ಸೇವಿಸುವುದು ಬಿಟ್ಟು ಗಳಿಗೆ ಮಾತ್ರ ಪುರಂಧರವಿಠಲನ ನೆನೆದು ಸುಮ್ಮನಿದ್ದರೂ ಜನುಮಜನುಮಕೆ ನಿಲುಕದ ಮುಕ್ತಿ ಸಿಗುವುದಯ್ಯಾ ಪರರ ಸೇವೆ ಸಲ್ಲದಯ್ಯಾ ಭಾರತಿಯ ದ್ರೋಹ ಸಲ್ಲದಯ್ಯಾ. ಗುಟ್ಟ ಗುರು ಗಾಂಧಿ ಬಲ್ಲನಯ್ಯಾ. ಮುಂದೆ ಸದ್ಭಾವದಲಿ ನಡೆವೆನೆಂದು ಹರಕೆತೊಟ್ಟು ಹಿಂದಿನ ಪಾಪವ ಕಳೆಯಲು ನಮ್ಮ ಕರುಣಾಕರ, ಜಗನ್ಮಾನ್ಯ, ಅಜಾತಶತ್ರು ಮುದ್ದುಮೋಹನ ಗಾಂಧಿ ಗುರುವಿಗೆ ಶರಣಾಗಯ್ಯಾ

"ಬಸ್ಸ ಸೇವಿಕ"

ತೊರೆದು ಮನೆಮಾರುಗಳನು ಮಡದಿ ಮಕ್ಕಳ ಮರೆದು ದೃಢದಿ ದೇಶೋದ್ಧಾರಗೈಯುತ್ತಿರುವಾ
ಪುರುಷರನು ಸೆರೆಯೊಳಗೆ ಇರಿಸಿರುವ ದುರುಳರನು ದೂರಓಡಿಸಿ ಧೀರತನದಿಂದ ಕಾದೀ ||೮||

ಸತಿಪತಿಯರಿರ್ವರೂ ಸತತ ದೇಶೋದ್ಧಾರ ವ್ರತವ ಕೈಕೊಂಡು ಸತ್ಯಾಗ್ರಹದೊಳಿದ್ದು ||
ಪತಿವ್ರತೆಯ ಸೆರೆಯೊಳಗೆ ಇರಿಸಿರುವ ಪಾಪಾತ್ಮ ಪತಿತಪಡೆಗಳ ಪೊಡೆದು ಓಡಿಸಿರಿ ಬೇಗಾ ||೯||

ಕಷ್ಟನಷ್ಟವ ಸಹಿಸಿ ಇಷ್ಟಮಿತ್ರರ ತೊರೆದು ದೇಶಮಾತೆಯ ಪರದಾಸ್ಯತ್ವವೆಂಬಾ ||
ಕಷ್ಟವಂಬಿಡಿಸಲೋಸುಗ ಪರಮ ಸಾಹಸವ ಪಡುತ್ತಿರುವ ಸಾಧ್ವಿಮಣಿಯರೇ ಧನ್ಯರೂ ||೧೦||

ಬೊಳ್ಳುಮಾತುಗಳಿಂದ ಸುಳ್ಳುಸುದ್ದಿಯ ಹರಡಿ ಅಲ್ಲಲ್ಲಿ ಬೆದರಿಸುತಲಿರುವ ಪರಕಿಯರ ||
ಸೊಲ್ಲಡಗಿಸಿ ಮುಂದೆ ಸ್ವಾತಂತ್ರ್ಯ ಪಡೆಯಲ್ಕೆ ಹೋರಟ ಸೋದರಿ ವಂದನೆಯು ನಿಮಗೆ ||೧೧||

ಹೆರಿಯೊಡನೆ ಕಾದಾಡುವಾಡಿನ ಗರಿಯಂತ ದುರುಳ ಅಧಿಕಾರಿಗಳ ಕುರುಡ ಬೆದರಿಕೆಯ ||
ಮುರಿದು ನಗುತಲಿ ತನ್ನ ಕರ್ತವ್ಯಗಳ ಮುಂದರಿದ ನಾರಿಮಣಿ ಗೌರಮ್ಮ ಧನ್ಯಳೀ ಜಗದೀ ||೧೨||

ಹಿಡಿದ ಪಂಥವ ಬಿಡದೆ ಧ್ವಜದಿಂದುವ ಘಟಿಕ ಕ್ರೂರ ಶಿಕ್ಷೆಗಳಿಂದ ಕೊಲ್ಲುತಿರುವ ||
ಜಡಗ ಅಧಿಕಾರಿಗಳ ಕೂಗುಗಳ ಲೆಕ್ಕಿಸದೆ ಹೋಗಿ ಸ್ವಾತಂತ್ರ್ಯದಡಿಗಲ್ಲಲದಿ ಇಡಿರಿ ||೧೩||

ಸತ್ಯಾಗ್ರಹಿಗಳ ಹೊಡೆದು ಮತ್ತೆ ಶಿಕ್ಷಿಸುತಿರುವ ಮತ್ತರಾದಧಿಕಾರಿ ಮೊತ್ತಗಳನು ||
ಎತ್ತನೋಡಿದರು ಅರಚುತ್ತಲಿರುವ ಅವರುಗಳ ಅತ್ತ ಓಡಿಸಿ ದೇಶಸೇವಕರೇ ಬೇಗ ||೧೪||

ಪತಿಯ ಸೆರೆಯೊಳಗಿರಿಸಿ ಸತಿಸುತರ ಗೋಳುಗಳ ಅತಿಶಯದಿ ನೋಡುತ್ತಲವರ ಮನೆಯ ||
ಆಸ್ತಿಗಳನಪಹರಿಸಿ ನಾಸ್ತಿಗೈಯುತಲಿಹರು ನಾಚಿಕೆಲ್ಲದ ನೀಚ ಅಧಿಕಾರಿಯವರು ||೧೫||

ಮೊಲೆಯ ಹಾಲನು ಕುಡಿವ ಮಗುವ ಮನೆಯೊಳು ಬಿಟ್ಟು ಮಾತೆ ಪೋಗಲು ದೇಶಸೇವೆಗಾಗೀ ||
ಬಾಕಳಿಗೆ ಬಲಿಲ್ಲದಂತೆ ಧೀರರುಗಳನ್ನು ಲೀಲಾವಿನೋದಗೆಟ್ಟಿ ಲೀಲೆನೋಡುವವರು ||೧೬||

ಸ್ಥಿರವನಿದಿ ದೇಶನಾಶವೆಂಬ ನಾಡಿ ಸ್ವಾತಂತ್ರ್ಯ ತಿರುಗಿ ಪಡೆಯುವ ಬುದ್ಧಿಯಿತ್ತು ||
ಉರುತರದ ಬೋಧೆಯಿಂ ಪರಿಯುನುದ್ಧರಿಸಲ್ಲ ಪತತ ಪಟ ವಡೆದ ಗಾಂಧಿಯ ಚರಣಕನಿಸುವೆ ||೧೭||

ಬಡಗಿಹೋಯಿತು ನಾವು ದುಡಿದ ವಿತ್ತಗಳವರ ಮಡಿಲೊಳಗೆ ನುಡಗಿದೆವು ಮಾನಪ್ರಾಣಗಳ ||
ಜೋಡೆದನು ಓಡಿಸಿ ಅವರಲಿದ್ದ ಧನಮಾನಗಳ ಪೊಂದಿ ನಾವು ಸುಖಿಯಾಗಬೇಕು ||೧೮||

ಉಡಿರಿ ಪೀತಾಂಬರವ ವಂದೇಶಿಯರ ಗೆಲ್ವ ತೊಡರಿ ಕೀರ್ತಿಗಳೆಂಬ ಕಂಕಣವ ಕರದಿ ||
ಸುಡಿರಿ ಭೀತಿಗಳೆಂಬ ಬಿಂಕದಾ ವಡವೆಗಳ ಮಾರಿಬಿಡಿ ಇವರಿಂಗೆ ಮೋಹವಾಸಗಳ ||೧೯||

ಎಷ್ಟು ಹೇಳಿದರೇನು ದುಷ್ಟರೊಳು ಅಂಜಿಕೆಯು ಹೊಂಚು ಹಾಕುತ ಅವರ ಹೊಟ್ಟೆ ಹೊಕ್ಕಿಹುದು ||
ಸೃಷ್ಟಿಕರ್ತನು ನಮ್ಮ ಸಿಷ್ಟರಾ ಪಕ್ಷದೊಳು ನಿಷ್ಠೆಯಿಂನಿಂದಿರಲು ನಮಗೆಲ್ಲ ಭಯವು ||೨೦||

ಈಶನನು ನಂಬಿನಾವ ದೇಶಸೇವೆಯ ಮಾಡಿ ದೋಷಗಳ ತ್ಯಜಿಸಿ ಸ್ವಾತಂತ್ರ್ಯ ನೆಲೆಗೊಳಿಸಿ ||
ಲೇಸು ಕಾಂಬೆವು ಮುಂದೆ ಕುಶಲಾಕ್ಷರೆಯಿಂದ ದಾಸತ್ವವನು ನೂಗಿಸಿ ಜಯದಿ ನಲಿಯುವನು ||೨೧||

ಒಬ್ಬ ಸೇವಿಕೆ

ಕರನಿರಾಕರಣೆ ಕರಪತ್ರ
ಸಂ. ೨೪

ಸಿರ್ಸಿ, ಸಿದ್ದಾಪುರ, (ಕರ್ನಾಟಕ)
ತಾ|| ೨—೮—೧೯೩೨

ಸಿಟ್ಟೇಕೆಯ್ಯ ನಿಮಗೆ

(ಹಿಂದೀ ನೌಕರರಿಗೆ)

ರಾಗ, ಮುಖಾರಿ (ಘಾಟಿ-ನೀಮಾಯೆಯೊಳಗೊ ನಿನ್ನೊಳು ಮಾಯೆಯೋ) ಎಂಬಂತೆ ಝಂಪೆ ತಾಳ

ಸಿಟ್ಟೇಕೆ ಹೇಳು ಎಮ್ಮೊಡನೀಗ ಮನುಜಾ || ಪಲ್ಲ ||
ಇಷ್ಟ ಬಾಂಧವರನ್ನು । ಇಷ್ಟು ಶಿಕ್ಷಿಸುತಿರುವ । ದುಷ್ಟ ನಿನ್ನಯ ಮನದ । ಗುಟ್ಟೇನು
ಹೇಳೂ || ಅನು ಪಲ್ಲ ||

ಸೃಷ್ಟಿಮಾತೆಯ ಉದರದಲ್ಲಿ ನಾವೆಲ್ಲರು ಒಟ್ಟಾಗಿ ಜನಿಸಿರಲು ಸಿಟ್ಟೇಕೆ ನಿನಗೇ ||
ಶಿಷ್ಟ ಸೋದರರ ಮೇಲಿಷ್ಟು ದಂಡನೆಯ ಇಷ್ಟು ದಯವಿಲ್ಲದಲೆ ವಿಧಿಸಿರುವೆ ಮೂಢ || ೧ ||

ನಮ್ಮ ದೇಶವ ನಾವು ಪಡೆವೆವೆಂಬುವ ಸಿಟ್ಟೋ ಹೆಮ್ಮೆ ಪರದೇಶಿಯರ ನಂಬದಿಹ ಸಿಟ್ಟೋ ||
ನಮ್ಮ ಮಾತೆಯ ಕಣ್ಣನೀರುಗಳ ಒರಸುತಿಹ ಅಣ್ಣತಂಗಿಯರಲ್ಲಿ ನಿನಗ್ಯಾಕೆ ಕ್ರೋಧ || ೨ ||

ಜಗನಿ ಸೋದರರ ಬಂಧನದ ಒಳಗಿರಿಸಿ ನಗುತಲಿವರಾಸ್ತಿಗಳ ನೀ ಕೊಳ್ಳುತಿರುವೇ ||
ಅಗಲಿ ಸುತಸತಿಪತಿಯ ಹಗಲಿರುಳು ದಂಡಿಸುತ ಆರ್ತನಾದವ ಕೇಳಿ ಅಳುಬರದೆ ನಿಮಗೇ || ೩ ||

ಮಾತೆ ಮಕ್ಕಳ ಮರೆದು ಪ್ರೀತಿ ಮಡದಿಯನಗಲಿ ಒಂತಿಗಳ ಬಿಟ್ಟು ದೇಶೋದ್ಧಾರಕ್ಕೊರಟಾ ||
ಪತಿಯ ಸೆರೆಯೊಳಗಿರಿಸಿ ಸತಿಯ ವ್ಯಥೆಯೊಳಗಿರಿಸಿ ಅತಿಶಯವ ನೋಡಿ ನಗುತಿರುವೆ ಏನೂ || ೪ ||

ಬುದ್ಧಿಯಿಲ್ಲದೆ ನಾವು ಮುದ್ದಿನಾ ಒಡವೆಗಳಿಗಿದ್ದ ಧನಗಳನೆಲ್ಲ ಸುರಿಯುತಿಹೆವೂ ||
ಸದ್ದುಮಾಡದಹಾಗೆ ಸಾಗಿಸುತಲಿರುವವರ ಕೃತ್ಯಗಳ ನೋಡಿ ನಾಚಿಕೆಯಪಡು ಮನುಜಾ || ೫ ||

ನಿನ್ನ ಸೋದರರ ಕಣ್ಣೀರು ರಕ್ತಗಳ ತಿಂದರದು ನಿನಗೆ ಜೀರ್ಣವಾಗುತಿಹುದೇ ||
ಶ್ವಾನನಂದದಿ ಪರರ ಸೇವೆಗಳ ಮಾಡುತ್ತ ಪರಮ ಆಪ್ತರೊಳೀಗ ದ್ವೇಷ ನಿಮಗೇಕೆ || ೬ ||

ಪತಿಸುತರ ದಂಡಿಸಿದ ವ್ಯಥೆ ಸಹಿಸಲಾರದೇ ಸತಿಯು ಕೊಡುತಿರೆ ಶಾಪಗಳ ನಿನಗೇ ||
ಗತಿಯ ಕಾಣದೆ ನಿನ್ನ ಪಿತೃಗಳು ನರಕದಲಿ ಮುಳುಗುತಿರೆ ನೋಡಿತ್ತ ನರರೂಪಿ ದೈತ್ಯ || ೭ ||

ನಿನ್ನ ಹಣಗಳ ಪರರ ಹಡಗಿನೊಳು ತುಂಬಿಸುತ ಸಣ್ಣ ಅಧಿಕಾರದಲಿ ಮೆರೆಯುತಿರುವೇ ||
ಬಣ್ಣಗಾರರು ನಿನ್ನ ಪೆಚ್ಚುತನವನು ನೋಡಿ ಕಣ್ಣ ಕೀಳಿಸಿ ಸುಣ್ಣ ತಿನಿಸುವರು ಜೋಕೇ || ೮ ||

ಮೆಚ್ಚು ನೀನಗೆ ಬೇಡ ತುಚ್ಛ ಪರಕೀಯರನು ನೆಚ್ಚಿ ಸೇವೆಯಲಿದ್ದ ನಿನ್ನ ನಾಮಾ ||
ತುಚ್ಛನೆಂದೆನುತ ಅಚ್ಚಾಗುತಿದೆ ಪತ್ರದಲಿ ಬಿಚ್ಚಿ ನೀನದ ಓದಿ ಬಿಟ್ಟುಬಿಡು ಸಿಟ್ಟಾ || ೯ ||

ಕತ್ತಿಗಳ ಕೊಟ್ಟು ನೀ ಕುತ್ತಿಗೆಯನೊಡ್ಡಿರುವೆ ಎಚ್ಚರಿಕೆ ಎಚ್ಚರಿಕೆ ಎಚ್ಚರಿಕೆ ಜೋಕೇ ||
ದುಷ್ಟ ಪರಕೀಯರ ಕಪಟಕೃತ್ಯಂಗಳನು ನೆಚ್ಚಿ ನೀ ಕೆಡಬೇಡ ಕೇಳು ಮನುಜಾ ||೧೦||

ದುಷ್ಟರಾ ಸೇವೆಗಳ ಬಿಟ್ಟು ನೀ ನೀಕ್ಷಣದಿ ಶಿಷ್ಟ ಸೋದರರ ಸೇರಿ ಸಿಟ್ಟುಗಳಾ ||
ಬಿಟ್ಟು ನೀ ನೀಗದನು ದೇಶಸೇವೆಯ ಮಾಡಿ ಶಿಷ್ಟನೆಂಬುವ ಹೆಸರ ಪಡೆಯೋ ನೀ ಬೇಗಾ ||೧೧||

ಒಬ್ಬ ಸೇವಿಕ

611

ಕರನಿರಾಕರಣೆ ಕರಪತ್ರ
ಸಂ. ೨೫

ತಾ. ಸಿದ್ದಾಪುರ, (ಕರ್ನಾಟಕ)
ತಾ|| ೪—೮—೧೯೩೨

"ಕುಲವನ್ನು ನಾಲಿಗೆ ಹೇಳುವುದು"

ಒಂದು ಜಾತಿಗೆ ವಿಷವು ಪುಚ್ಛದೊಳಗಿಹುದು।
ಮತ್ತೊಂದು ಜಾತಿಗೆ ದಂತದೊಳಗೆ ವಿಷವು॥
ಒಂದು ಜಾತಿಗೆ ಮೈ ಅಂಗವೆಲ್ಲವು ವಿಷವು।
ಹಿಂದೆ ಆಡುವ ನುಡಿಯು ಘೋರ ವಿಷ

—ಸರ್ವಜ್ಞ॥

"ಗೆದ್ದವರು ಯಾರು?" "ರಾವಣ ಸನ್ಯಾಸಿ" ಎಂಬೆರಡು ಹಸ್ತಪತ್ರಗಳು ಕಾನಡಾ ಜಿಲ್ಲೆಯಲ್ಲಿ ಹಂಚಲ್ಪಟ್ಟಿವೆ. ಇವುಗಳ ಪ್ರತಿಗಳು ಕಾರವಾರದ "ವಿಚಾರಿ" ಪತ್ರದ ಪ್ರತಿಗಳೊಂದಿಗೆ ಚಂದಾದಾರರಿಗೆ ಕಳುಹಿಸಲ್ಪಟ್ಟಿವೆಯೆಂದು ತಿಳಿದು ಬಂದಿದೆ. ಈ ಹಸ್ತಪತ್ರದ ಪ್ರತಿಗಳು ಕೆಲವು ದಿನಗಳ ಹಿಂದೆ ನನ್ನ ಕೈಸೇರಿದವು. ಅವುಗಳಲ್ಲಿರುವ ಅಶ್ಲೀಲ ವಾಕ್ಯಗಳನ್ನೂ, ಔಚಿತ್ಯರಹಿತವಾದ ಉಪಮೆಗಳನ್ನೂ ನೋಡಿ ಜಿಗುಪ್ಸೆಯಾಯಿತು. "ಕುಲವನ್ನು ನಾಲಿಗೆಯು ಹೇಳುವುದು" ಎಂಬಂತೆ ಆ ಹಸ್ತಪತ್ರಗಳ ಲೇಖಕನು ಯಾರೆಂಬುದನ್ನೂ, ಅವನೂ ಅವನ ಪತ್ರಿಕೆಗಳು ಎಷ್ಟು ವಿಶ್ವಾಸಯೋಗ್ಯಗಳೆಂಬುದನ್ನೂ ಆ ಹಸ್ತಪತ್ರಗಳೇ ಹೇಳುತ್ತವೆ. ದೇ. ಬ. ಕರಮರಕರರ ಮತ್ತು ಇತರ ದೇಶಭಕ್ತರ ವಿಷಯವಾಗಿ ಬರೆಯಲ್ಪಟ್ಟಿರುವ ಅಶ್ಲೀಲ ವಾಕ್ಯಗಳನ್ನು ನೋಡಿದರೆ ನನಗೆ ಬಹಳ ವಿಷಾದವಾಗುತ್ತದೆ. ಜೈಲಿನೊಳಗಿರುವ ಜನರ ಬೆನ್ನುಹಿಂದೆ ಬಯ್ಯುವ ಈ ಜನರ ದುಶ್ಶೀಲವನ್ನು ನೋಡಿ ಜಿಗುಪ್ಸೆಯಾಗುತ್ತದೆ, ಮನಸ್ಸಿಗೆ ಅಸಹ್ಯವಾಗುತ್ತದೆ. ಅರ್ಥರಹಿತವೂ, ಅಸಮಂಜಸವೂ, ಅನುಚಿತವೂ, ಅಶ್ಲೀಲವೂ ಆದ ಟೀಕಾಭಾಗದ ಕಡೆಗೆ ಗಮನ ಕೊಡುವುದು ತಗಣೆಯನ್ನು ಕೊಂದು ಬೆರಳು ದುರ್ವಾಸನೆ ಮಾಡಿಕೊಂಡಂತೆಯೇ ಸರಿ. ಹಸ್ತಪತ್ರಗಳ ಮುಖ್ಯ ಸಾರಾಂಶವೇನೆಂದರೆ

೧. “ಧಾರವಾಡ ಜಿಲ್ಲೆಯ ದ. ಪ. ಕರಮರಕರ ಎಂಬುವರು ಬಹು ದೊಡ್ಡ ದೇಶಭಕ್ತರೆಂದು ಎಲ್ಲೆಲ್ಲಿಯೂ ಖ್ಯಾತಿಗೊಂಡಿರುವರಷ್ಟೆ ? ಇವರು “ಕರ ಕೊಡಬೇಡಿರಿ, ಕಾಯಿದೆಭಂಗ ಮಾಡಿರಿ.” ಮೊದಲಾದ ಕಾತೀಕಾಂಡದ ಪುರಾಣಗಳನ್ನು ಹೇಳುತ್ತಾ ತಾವು ತಿಂದವರು ಮಣಗಟ್ಲೆ ಮುಸೀಕೆಂಡ. ಹುಬ್ಬಳ್ಳಿ ತಾಲೂಕಿನ ತಮ್ಮ ಜಮೀನಿನ ೨೦೦ ರೂಪಾಯಿಗಳ ಕರವನ್ನು ತೊಂದರೆಯಿಲ್ಲದೆ ಕೊಟ್ಟು ತಾವು ದೇಶಭಕ್ತರ ಸೋಗನ್ನು ಧರಿಸಿ, ಮೀನ ತಿಂದರೆ ಪಾಪ ಎಂಬ ಬಕಪಕ್ಷಿಯಂಥ ಮಂತ್ರವನ್ನು ಜಪಿಸತೊಡಗಿದರು. ಉತ್ತರ ಕಾನಡಾ ಜಿಲ್ಲೆಗೆ ಹೋಗಿ ಈ ಮಹಾಪುರುಷರ ಚರಿತ್ರೆಯನ್ನು ಓದಿ ಕೊನೆಗೆ ನೀವೇ ಹೇಳಬಹುದಂತೆ. ಇವನೇನು ಮಹಾಪುರುಷನೋ, ದೇಶಭಕ್ತನೋ, ಮೇಣ್ ರಾವಣಸನ್ಯಾಸಿಯೋ? ಯಾರು ?”

೨. “ಗೆದ್ದವರು ಯಾಕೆ ಅಜ್ಞಾತವಾಸದಲ್ಲಿರಬೇಕು ? ಮುಂದೆ ಬಂದು ಬಹಿರಂಗವಾಗಿ ನಿಮಗೆ ಏಕೆ ಬೋಧೆ ಮಾಡಬಾರದು ?”

ದೇ. ಭ. ಕರಮರಕರರು ಸರಕಾರಕ್ಕೆ ಆಹ್ವಾನವನ್ನಿತ್ತು ಸಡ್ಡು ಹೊಡೆದು ಸರಕಾರದ ವಿಪಕ್ಷಿಯಾಗಿ ಕೆಲಸಮಾಡುತ್ತಿದ್ದರು. ಇದು ಎಲ್ಲರಿಗೂ ತಿಳಿದ ವಿಷಯ. ಸರಕಾರಕ್ಕೆ ಸಹಾ ಗೊತ್ತು. ಅವರಾಗಲೀ, ಇತರ ಕಾಂಗ್ರೆಸ ಕಾರ್ಯ [illegible] ಕೆಲಸವಿರುವಂಥ ಸ್ಥಳಗಳಿಗೆ ಹೋಗಿ, ಆ ಕೆಲಸಕ್ಕೆ ಅನುಕೂಲವಿದ್ದ ಸ್ಥಳಗಳಲ್ಲಿ ನಿಂತು ತಮ್ಮ ಕರ್ತವ್ಯವನ್ನು ಮುಂದುವರಿಸುತ್ತಿರುವರು. ಶತ್ರುಗಳಿದ್ದೆಡೆಗೆ ಬರುವುದು ಕಾಂಗ್ರೆಸ ಕಾರ್ಯಕರ್ತರ ಕರ್ತವ್ಯವಲ್ಲ. ಸರಕಾರದ ಕೈಲಾದರೆ ಅವರನ್ನು ಹಿಡಿಯಲಿ. ಅವರು ರಣರಂಗಕ್ಕೆ ಜೀವದಾಸೆ ಬಿಟ್ಟು ಬಂದಿರುವರು. ಅವರಿಗೆ ಯಾವ ಅಂಜಿಕೆಯೂ ಇಲ್ಲ. ಇಂಗ್ಲೀಷರು ಜರ್ಮನರೊಡನೆ ಯುದ್ಧಮಾಡುತ್ತಿದ್ದಾಗ ಕಂದಕಗಳನ್ನು ತೋಡಿ ಅವುಗಳ ಮರೆಯಲ್ಲಿ ನಿಲ್ಲುತ್ತಿದ್ದುದೇಕೆ? ಅನುವು ನೋಡಿ ಬೀಡು ಬಿಡುತ್ತಿದ್ದುದೇಕೆ ? ಜರ್ಮನರ ಶಿಬಿರದಲ್ಲೇ ಏಕೆ ಹೋಗಿ ಇಳಿದುಕೊಳ್ಳಲಿಲ್ಲ ? ಕಾಂಗ್ರೆಸ ಕಾರ್ಯಕರ್ತರು ಮಾತ್ರ ಪೋಲೀಸ್ ಸ್ಟೇಷನ್ ಪಕ್ಕದಲ್ಲೇ ಕಚೇರಿ ಮಾಡಬೇಕೋ ? ಕಾಂಗ್ರೆಸದವರು ಪೋಲೀಸರಿಗೆ ಸಿಕ್ಕದೆ ಅಡಗಿಕೊಂಡಿರುವರೆಂದರೇನರ್ಥ ? ಏನು ನೆಲಮಾಳಿಗೆಗಳನ್ನು ಕಟ್ಟಿಸಿರುವರೋ ? ಕೋಟೆಗಳನ್ನು ಕಟ್ಟಿಸಿ ಒಳಗೆ ಅಡಗಿರುವರೋ ? ಜಲಸ್ತಂಭವನ್ನು ಮಾಡಿ ಕೊಳದೊಳಗೆ ಮುಳುಗಿರುವರೋ ಏನು ? ಯಾವುದೋ ಒಂದು ಊರಲ್ಲಿ ಒಬ್ಬ ಗಾಂಧೀ ಸೈನಿಕರ ಮನೆಯಲ್ಲಿ ಕಚೇರಿ ಮಾಡಿರುವರು. ಇದರಲ್ಲಿ ಅಜ್ಞಾತವೇನು ? ಸರಕಾರಕ್ಕೆ ಅಜ್ಞಾತವಾದರೆ, ಅವರು ಕರನಿರಾಕರಣೆ ಮಾಡಿದ ಯಾರಿಗೂ ಅಜ್ಞಾತರಲ್ಲ. ಅವರೆಲ್ಲರಿಗೂ ಅವರು ಎಲ್ಲಿರುವರು, ಏನು ಮಾಡುವರು ಎಂಬುದು ಗೊತ್ತಿರುತ್ತದೆ. ಅನೇಕರು ಅವರನ್ನು ಭೆಟ್ಟಿಯಾಗುತ್ತಾರೆ. ಹಿಂದೂಸ್ಥಾನದ ಎಲ್ಲ ಪ್ರಾಂತ್ಯ

613

ಗಳಿಂದ ಅವರಿಗೆ ಪತ್ರಗಳು ಮುಟ್ಟುತ್ತವೆ. ಎಲ್ಲೆಡೆಗಳಿಗೆ ಅವರ ಪತ್ರಗಳು ಹೋಗುತ್ತವೆ.

ಯಾರ ಕಾರ್ಯಸ್ಥಾನವು ಗುಪ್ತವೂ, ಅಜ್ಞಾತವೂ ಆಗಿದೆ ಎಂಬುವನ್ನು ಹೊಸದಾಗಿ ಹೇಳಬೇಕಾದ್ದಿಲ್ಲ. "ಸತ್ಯಪ್ರಿಯ ಭಾರತೀಯ," "ಒಬ್ಬ ಭಾರತೀಯ," "ದೇಶಬಂಧು," "ಒಬ್ಬ ಖರೇ ಭಾರತ ಪುತ್ರ" ಮುಂತಾದ ಅಜ್ಞಾತ ನಾಮಧೇಯಗಳು ಯಾರವು? ಈ ಅಜ್ಞಾತ ಅಭಿದಾನಗಳ ಮಾಲಿಕನು ಯಾರು? ಅವನು ಏಕೆ "ಮುಂದೆ ಬಂದು ಬಹಿರಂಗವಾಗಿ ಜನರಿಗೆ ಬೋಧ ಕೊಡುವುದಿಲ್ಲ?" ಕಂಡ ಕಂಡವರನ್ನು "ನೀನು ಸುದ್ದಿ ಒಯ್ಯುವುದಕ್ಕೆ ಬಂದಿದ್ದೀಯೋ?" ಎಂದು ಧಳಿಸುವುದೇಕೆ? ವೃತ್ತಪತ್ರಗಳ ಸುದ್ದಿಗಾರರನ್ನು ಸ್ವಚ್ಛಂದವಾಗಿ ತಿರುಗಾಡಲು ಕೊಡುವುದಿಲ್ಲವೇಕೆ? ವೃತ್ತಪತ್ರಗಳಲ್ಲಿ ಕಾಂಗ್ರೆಸದ ಸುದ್ದಿಗಳನ್ನು ಕೊಡಬಾರದೆಂಬ ಕಾಯಿದೆ ಏಕೆ? ವರ್ತನವು 'ಸತ್ಯಪ್ರಿಯ ಭಾರತೀಯ' ನದಾಗಿದ್ದರೆ ಆ ವರ್ತನದ ಸುದ್ದಿಯು ಜಗತ್ತಿಗೆ ತಿಳಿಯಬಾರದೇಕೆ? ಆ ವರ್ತನವು ಅಜ್ಞಾತವಾಗಿರಬೇಕೇಕೆ? ಇದು ಗೆದ್ದವರ ವರ್ತನವೋ? ಅಥವಾ ತನ್ನ ನೆಳಲಿಗೇ ಅಂಜುವ ಹಗಲುಗಳ್ಳನ ವರ್ತನವೋ? ಮರ್ಯಾದಸ್ಥರ ಸೋಗು ಹಾಕಿಕೊಂಡು ಒಳಗೊಳಗೇ ಸಿಕ್ಕಿದ್ದನ್ನು ಕದಿಯುತ್ತಾ, ಕಂಡವರನ್ನು ಜೈಲಿಗೆ ಹಾಕಿ, ಕಂಡು ಸಾಕ್ಷಿ ಹೇಳಿದವರನ್ನು, "ಕದ್ದವರು ಅವರೇ, ನಾನಲ್ಲ" ಎಂದು ಬೊಟ್ಟು ಮಾಡುತ್ತಾ ಅಡ್ಡಾಡುವವರ ಅಜ್ಞಾತವರ್ತನವಲ್ಲವೇ ಇದು!

ದೇ. ಭ. ಕರಮರಕರರನ್ನು ಜೈಲಿಗೆ ಹಾಕಿದ ಬಳಿಕ ಅವರ ಬೆನ್ನ ಹಿಂದೆ ಅವರ ಬಗ್ಗೆ ಅಶ್ಲೀಲವಾದ ಮಾತುಗಳನ್ನಾಡುವುದು ಎಂಥ ವೀರವರ್ತನ? ಅವರ ಬಗ್ಗೆ ಹೊರಟ ಈ ಬೈಗಳು ಅವರ ಕಿವಿಗೆ ಮುಟ್ಟುವ ಸಂಭವವಿಲ್ಲ ಅದಕ್ಕೆ ಉತ್ತರಕೊಡುವ ಅವಕಾಶವು ಅವರಿಗಿಲ್ಲ. ಹೀಗಿದ್ದು ಅವರನ್ನು ಹಿಂದೆಯಾಡುವುದು ಗೆದ್ದವನ ಕುರುಹೋ? ಸೋಲಿನ ಭಯವುಳ್ಳ ಹೇಡಿಯ ಕುರುಹೋ? ಇದು ಹಿಂದಿನಿಂದ ಹಾರಿಬಂದು ಬಾಕಿನಿಂದ ತಿವಿದಂತೆಯೇ ಸರಿ. ವೀರ ಅಭಿಮನ್ಯುವಿನ ಹಿಂದಿನಿಂದ ಕಳ್ಳನಂತೆ ಬಂದು ಕರ್ಣನು ಕೈಕಾಲುಗಳನ್ನು ಕತ್ತರಿಸಿದನು. ಅಭಿಮನ್ಯುವು ಯುದ್ಧದಲ್ಲಿ ಸತ್ತನು. ಆದರೆ ಗೆದ್ದವನು ಕರ್ಣನೋ, ಅಭಿಮನ್ಯುವೋ? ಗೆದ್ದವರು ಯಾರು? ಅಭಿಮನ್ಯುವು ಸತ್ತನು ನಿಜ. ಆದರೆ ಕರ್ಣನು ಗೆಲ್ಲಲಿಲ್ಲ. ಅಂತೆಯೇ ಈ ಯುದ್ಧದಲ್ಲಿ ನಾವು ಸಾಯಬಹುದು. ಆದರೆ ರಾಜ್ಯವು ಮಾತ್ರ ಅಂಗ್ರೇಜರಿಗೆ ಉಳಿಯುವುದಿಲ್ಲ. ನಮ್ಮ ರಕ್ತ ಸಿಂಚಿತನಾದ ಭಾರತಭೂಮಿಯು ಸ್ವತಂತ್ರವಾಗುವುದು ಖಂಡಿತ; ಇದು ಖಂಡಿತ.

ಕರಮರಕರರು ರಾವಣಸನ್ಯಾಸಿಯಂತೆ. ಅವರು ಸನ್ಯಾಸಿಯ ಸೋಗಿನಲ್ಲಿ ಬಂದು ಯಾವ ಲಾಭವನ್ನು ಪಡೆದರು? ಅಂಕೋಲಾ ತಾಲೂಕಿನ ಜನಾನಸ್ನೆಲ್ಲಾ

೧. "ಧಾರವಾಡ ಜಿಲ್ಲೆಯ ದ. ಪ. ಕರಮರಕರ ಎಂಬುವರು ಬಹು ದೊಡ್ಡ ದೇಶಭಕ್ತರೆಂದು ಎಲ್ಲೆಲ್ಲಿಯೂ ಖ್ಯಾತಿಗೊಂಡಿರುವರಷ್ಟೆ? ಇವರು "ಕರ ಕೊಡಬೇಡಿರಿ, ಕಾಯಿದೆಭಂಗ ಮಾಡಿರಿ" ಮೊದಲಾದ ಕಾಶೀಕಾಂಡದ ಪುರಾಣಗಳನ್ನು ಹೇಳುತ್ತಾ ತಾವು ತಿಂದವರು ಮಣಗಟ್ಲೆ ಮುಸಿಕೆಂಡ. ಹುಬ್ಬಳ್ಳಿ ತಾಲೂಕಿನ ತಮ್ಮ ಜಮೀನಿನ ೨೦೦ ರೂಪಾಯಿಗಳ ಕರವನ್ನು ತೊಂದರೆಯಿಲ್ಲದೆ ಕೊಟ್ಟು ತಾವು ದೇಶಭಕ್ತರ ಸೋಗನ್ನು ಧರಿಸಿ, ಮೀನ ತಿಂದರೆ ಪಾಪ ಎಂಬ ಬಕಪಕ್ಷಿಯಂಥ ಮಂತ್ರವನ್ನು ಜಪಿಸತೊಡಗಿದರು. ಉತ್ತರ ಕಾನಡಾ ಜಿಲ್ಲೆಗೆ ಹೋಗಿ ಈ ಮಹಾಪುರುಷರ ಚರಿತ್ರೆಯನ್ನು ಓದಿ ಕೊನೆಗೆ ನೀವೇ ಹೇಳಬಹುದಂತೆ. ಇವನೇನು ಮಹಾಪುರುಷನೋ, ದೇಶಭಕ್ತನೋ, ಮೇಣ್ ರಾವಣಸನ್ಯಾಸಿಯೋ? ಯಾರು?"

೨. "ಗೆದ್ದವರು ಯಾಕೆ ಅಜ್ಞಾತವಾಸದಲ್ಲಿರಬೇಕು? ಮುಂದೆ ಬಂದು ಬಹಿರಂಗವಾಗಿ ನಿಮಗೆ ಏಕೆ ಬೋಧೆ ಮಾಡಬಾರದು?"

ದೇ. ಭ. ಕರಮರಕರರು ಸರಕಾರಕ್ಕೆ ಆಹ್ವಾನವನ್ನಿತ್ತು ಸೆಡ್ಡು ಹೊಡೆದು ಸರಕಾರದ ವಿಪಕ್ಷೀಯರಾಗಿ ಕೆಲಸಮಾಡುತ್ತಿದ್ದರು. ಇದು ಎಲ್ಲರಿಗೂ ತಿಳಿದ ವಿಷಯ. ಸರಕಾರಕ್ಕೂ ಸಹಾ ಗೊತ್ತು. ಅವರಾಗಲೀ, ಇತರ ಕಾಂಗ್ರೆಸ ಕರ್ತರಾಗಲೀ ಅಜ್ಞಾತವಾಸದಲ್ಲಿಲ್ಲ. ಅವರು ತಮಗೆ ಆಗಾಗ್ಗೆ ಕೆಲಸವೊದಗಿದ ಸ್ಥಳಗಳಿಗೆ ಹೋಗಿ, ಆ ಕೆಲಸಕ್ಕೆ ಅನುಕೂಲವಿದ್ದ ಸ್ಥಳಗಳಲ್ಲಿ ನಿಂತು ತಮ್ಮ ಕರ್ತವ್ಯವನ್ನು ಮುಂದುವರಿಸುತ್ತಿರುವರು. ಶತ್ರುಗಳಿದ್ದೆಡೆಗೆ ಬರುವದು ಕಾಂಗ್ರೆಸ ಕಾರ್ಯಕರ್ತರ ಕರ್ತವ್ಯವಲ್ಲ. ಸರಕಾರದ ಕೈಲಾದರೆ ಅವರನ್ನು ಹಿಡಿಯಲಿ. ಅವರು ರಣರಂಗಕ್ಕೆ ಜೀವದಾಸೆ ಬಿಟ್ಟು ಬಂದಿಳಿದಿರುವರು. ಅವರಿಗೆ ಯಾವ ಅಂಜಿಕೆಯೂ ಇಲ್ಲ. ಇಂಗ್ಲೀಷರು ಜರ್ಮನರೊಡನೆ ಯುದ್ಧ ಮಾಡುತ್ತಿದ್ದಾಗ ಕಂದಕಗಳನ್ನು ತೋಡಿ ಅವುಗಳ ಮರೆಯಲ್ಲಿ ನಿಲ್ಲುತ್ತಿದ್ದುದೇಕೆ? ಅನುವು ನೋಡಿ ಬೀಡು ಬಿಡುತ್ತಿದ್ದುದೇಕೆ? ಜರ್ಮನರ ಶಿಬಿರದಲ್ಲೇ ಏಕೆ ಹೋಗಿ ಇಳಿದುಕೊಳ್ಳಲಿಲ್ಲ? ಕಾಂಗ್ರೆಸ ಕಾರ್ಯಕರ್ತರು ಮಾತ್ರ ಪೋಲೀಸ್ ಸ್ಟೇಷನ್ ಪಕ್ಕದಲ್ಲೇ ಕಚೇರಿ ಮಾಡಬೇಕೋ? ಕಾಂಗ್ರೆಸದವರು ಪೋಲೀಸರಿಗೆ ಸಿಕ್ಕದೆ ಅಡಗಿಕೊಂಡಿರುವರೆಂದರೇನರ್ಥ? ಏನು ನೆಲಮಾಳಿಗೆಗಳನ್ನು ಕಟ್ಟಿಸಿರುವರೋ? ಕೋಟೆಗಳನ್ನು ಕಟ್ಟಿಸಿ ಒಳಗೆ ಅಡಗಿರುವರೋ? ಜಲಸ್ತಂಭವನ್ನು ಮಾಡಿ ಕೊಳದೊಳಗೆ ಮುಳುಗಿರುವರೋ ಏನು? ಯಾವುದೋ ಒಂದು ಊರಲ್ಲಿ ಒಬ್ಬ ಗಾಂಧೀ ಸೈನಿಕರ ಮನೆಯಲ್ಲಿ ಕಚೇರಿ ಮಾಡಿರುವರು. ಇದರಲ್ಲಿ ಅಜ್ಞಾತವೇನು? ಸರಕಾರಕ್ಕೆ ಅಜ್ಞಾತರಾದರೆ, ಅವರು ಕರನಿರಾಕರಣೆ ಮಾಡಿದ ಯಾರಿಗೂ ಅಜ್ಞಾತರಲ್ಲ. ಅವರೆಲ್ಲರಿಗೂ ಅವರು ಎಲ್ಲಿರುವರು, ಏನು ಮಾಡುವರು ಎಂಬುದು ಗೊತ್ತಿರುತ್ತದೆ. ಅನೇಕರು ಅವರನ್ನು ಭೆಟ್ಟಿಯಾಗುತ್ತಾರೆ. ಹಿಂದೂಸ್ಥಾನದ ಎಲ್ಲ ಪ್ರಾಂತ್ಯ

ಗಳಿಂದ ಅವರಿಗೆ ಪತ್ರಗಳು ಮುಟ್ಟುತ್ತವೆ. ಎಲ್ಲೆಡೆಗಳಿಗೆ ಅವರ ಪತ್ರಗಳು ಹೋಗುತ್ತವೆ.

ಯಾರ ಕಾರ್ಯಸ್ಥಾನವು ಗುಪ್ತವೂ, ಅಜ್ಞಾತವೂ ಆಗಿದೆ ಎಂಬುವನ್ನು ಹೊಸದಾಗಿ ಹೇಳಬೇಕಾದ್ದಿಲ್ಲ. "ಸತ್ಯಪ್ರಿಯ ಭಾರತೀಯ," "ಒಬ್ಬ ಭಾರತೀಯ," "ದೇಶಬಂಧು," "ಒಬ್ಬ ಖರೇ ಭಾರತ ಪುತ್ರ" ಮುಂತಾದ ಅಜ್ಞಾತ ನಾಮಧೇಯಗಳು ಯಾರವು? ಈ ಅಜ್ಞಾತ ಅಭಿದಾನಗಳ ಮಾಲಿಕನು ಯಾರು? ಅವನು ಏಕೆ "ಮುಂದೆ ಬಂದು ಬಹಿರಂಗವಾಗಿ ಜನರಿಗೆ ಬೋಧ ಕೊಡುವುದಿಲ್ಲ?" ಕಂಡ ಕಂಡವರನ್ನು "ನೀನು ಸುದ್ದಿ ಒಯ್ಯುವುದಕ್ಕೆ ಬಂದಿದ್ದೀಯೋ?" ಎಂದು ಧಳಿಸುವುದೇಕೆ? ವೃತ್ತಪತ್ರಗಳ ಸುದ್ದಿಗಾರರನ್ನು ಸ್ವಚ್ಛಂದವಾಗಿ ತಿರುಗಾಡಲು ಕೊಡುವುದಿಲ್ಲವೇಕೆ? ವೃತ್ತಪತ್ರಗಳಲ್ಲಿ ಕಾಂಗ್ರೆಸದ ಸುದ್ದಿಗಳನ್ನು ಕೊಡಬಾರದೆಂಬ ಕಾಯಿದೆ ಏಕೆ? ವರ್ತನವು 'ಸತ್ಯಪ್ರಿಯಭಾರತೀಯ'ನದಾಗಿದ್ದರೆ ಆ ವರ್ತನದ ಸುದ್ದಿಯು ಜಗತ್ತಿಗೆ ತಿಳಿಯಬಾರದೇಕೆ? ಆ ವರ್ತನವು ಅಜ್ಞಾತವಾಗಿರಬೇಕೇಕೆ? ಇದು ಗೆದ್ದವರ ವರ್ತನವೋ? ಅಥವಾ ತನ್ನ ನೆಳಲಿಗೇ ಅಂಜುವ ಹಗಲುಗಳ್ಳನ ವರ್ತನವೋ? ಮರ್ಯಾದಸ್ಥರ ಸೋಗು ಹಾಕಿಕೊಂಡು ಒಳಗೊಳಗೇ ಸಿಕ್ಕಿದ್ದನ್ನು ಕದಿಯುತ್ತಾ, ಕಂಡವರನ್ನು ಜೈಲಿಗೆ ಹಾಕಿ, ಕಂಡು ಸಾಕ್ಷಿ ಹೇಳಿದವರನ್ನು, "ಕದ್ದವರು ಅವರೇ, ನಾನಲ್ಲ" ಎಂದು ಬೊಟ್ಟು ಮಾಡುತ್ತಾ ಅಡ್ಡಾಡುವವರ ಅಜ್ಞಾತವರ್ತನವಲ್ಲವೇ ಇದು!

ದೇ. ಭ. ಕರಮರಕರರನ್ನು ಜೈಲಿಗೆ ಹಾಕಿದ ಬಳಿಕ ಅವರ ಬೆನ್ನ ಹಿಂದೆ ಅವರ ಬಗ್ಗೆ ಅಶ್ಲೀಲವಾದ ಮಾತುಗಳನ್ನಾಡುವುದು ಎಂಥ ವೀರವರ್ತನ? ಅವರ ಬಗ್ಗೆ ಹೊರಟ ಈ ಬೈಗಳು ಅವರ ಕಿವಿಗೆ ಮುಟ್ಟುವ ಸಂಭವವಿಲ್ಲ. ಅದಕ್ಕೆ ಉತ್ತರಕೊಡುವ ಅವಕಾಶವು ಅವರಿಗಿಲ್ಲ. ಹೀಗಿದ್ದು ಅವರನ್ನು ಹಿಂದೆಯಾಡುವುದು ಗೆದ್ದವನ ಕುರುಹೋ? ಸೋಲಿನ ಭಯವುಳ್ಳ ಹೇಡಿಯ ಕುರುಹೋ? ಇದು ಹಿಂದಿನಿಂದ ಹಾರಿಬಂದು ಬಾಕಿನಿಂದ ತಿವಿದಂತೆಯೇ ಸರಿ. ವೀರ ಅಭಿಮನ್ಯುವಿನ ಹಿಂದಿನಿಂದ ಕಳ್ಳನಂತೆ ಬಂದು ಕರ್ಣನು ಕೈಕಾಲುಗಳನ್ನು ಕತ್ತರಿಸಿದನು. ಅಭಿಮನ್ಯುವು ಯುದ್ಧದಲ್ಲಿ ಸತ್ತನು. ಆದರೆ ಗೆದ್ದವನು ಕರ್ಣನೋ, ಅಭಿಮನ್ಯುವೋ? ಗೆದ್ದವನು ಯಾರು? ಅಭಿಮನ್ಯುವು ಸತ್ತನು ನಿಜ. ಆದರೆ ಕರ್ಣನು ಗೆಲ್ಲಲಿಲ್ಲ. ಅಂತೆಯೇ ಈ ಯುದ್ಧದಲ್ಲಿ ನಾವು ಸಾಯಬಹುದು. ಆದರೆ ರಾಜ್ಯವು ಮಾತ್ರ ಅಂಗ್ರೇಜರಿಗೆ ಉಳಿಯುವುದಿಲ್ಲ. ನಮ್ಮ ರಕ್ತ ಸಿಂಚಿತವಾದ ಭಾರತಭೂಮಿಯು ಸ್ವತಂತ್ರವಾಗುವುದು ಖಂಡಿತ, ಇದು ಖಂಡಿತ.

ಕರಮರಕರರು ರಾವಣಸನ್ಯಾಸಿಯಂತೆ. ಅವರು ಸನ್ಯಾಸಿಯ ಸೋಗಿನಲ್ಲಿ ಬಂದು ಯಾವ ಲಾಭವನ್ನು ಪಡೆದರು? ಅಂಕೋಲಾ ತಾಲೂಕಿನ ಜಮೀನನ್ನೆಲ್ಲಾ

ಕರಮರಕರರು ಅಪಹರಿಸಿಕೊಂಡು ಹೋದರೇನು? ಜನರಿಗೆ ಗುಪ್ತ ಅಭಿಮಾನದಿಂದ "ನಾನೂ ಒಬ್ಬ ಭಾರತೀಯನು, ನಾನು 'ಸತ್ಯಪ್ರಿಯ ಭಾರತೀಯ' ನು; ನಾನೂ ದೇಶಾಭಿಮಾನವುಳ್ಳವನೇ, ನನಗೆ ದೇಶಾಭಿಮಾನವಿಲ್ಲನೆಂತಲ್ಲ." ವಗೈರೆ ಸವಿಮಾತುಗಳನ್ನಾಡುತ್ತಾ ರಾಜ್ಯವನ್ನು ನುಂಗಿಕೊಳ್ಳಲು ಬಂದಿರುವ ರಾವಣ-ಸನ್ಯಾಸಿಯನ್ನು ಅಂಕೋಲೆಯ ರೈತರು ಗುರ್ತಿಸಲಾರರೋ?

ಅಂಕೋಲೆಯು ಒಂದು ರಣಕ್ಷೇತ್ರವೆಂದು ತಿಳಿಯಿರಿ. ಅಲ್ಲಿ ಉಭಯ ಪಕ್ಷಗಳ ಸೈನ್ಯವೂ ಒಟ್ಟುಗೂಡಿದೆಯೆಂದು ತಿಳಿಯಿರಿ. ನಮ್ಮ ಸೈನ್ಯದಲ್ಲಿ ನಮ್ಮ ದೇಶದ ನಾನಾ ಭಾಗಗಳಿಂದ ಸೈನಿಕರು ಮಾತೃಭೂಮಿಯ ಮಾನಸಂರಕ್ಷಣೆಗಾಗಿ ತಮ್ಮ ರಕ್ತಧಾರೆಯನ್ನೆರೆಯಲು ಅಂಕೋಲೆಯಲ್ಲಿ ನೆರೆದಿರುವರೆಂದು ತಿಳಿಯಿರಿ. ಆಗ ಬಂದೂಕುಗಳೂ, ಫಿರಂಗಿಗಳೂ ಹಾರಿಸಲ್ಪಡುವುವು, ಬಾಂಬುಗಳು ಸುತ್ತ ಮುತ್ತ ಒಗೆಯಲ್ಪಡುವುವು, ವಿಮಾನಾಯುಧಗಳ ಪ್ರಯೋಗವಾಗುವುದು; ಅನೇಕರು ಶತ್ರುಪಕ್ಷದವರೂ, ಮಿತ್ರಪಕ್ಷದವರೂ ಸಾಯುವರು; ಅನೇಕರು ಹೆಂಗಸರು ಮಕ್ಕಳು ಸಾಯುವರು; ಅನೇಕ ಊರುಗಳು ಸುಟ್ಟು ಬೂದಿಯಾಗುವುವು. ಆಗ ಅಂಕೋಲೆಯ ವೀರರು ನಾನಾ ಪ್ರಾಂತ್ಯಗಳಿಂದ ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವಿತವನ್ನರ್ಪಿಸಲು ಕರ್ನಾಟಕದ ಕುರುಕ್ಷೇತ್ರವಾದ ಅಂಕೋಲೆಗೆ ಬಂದ ವೀರಾಗ್ರಣಿಗಳನ್ನು ಕುರಿತು "ನೀವೆಲ್ಲರೂ ನಿಮ್ಮ ಹೆಂಡರು-ಮಕ್ಕಳನ್ನು [illegible] ದಿರುವ ಕಡೆಗಳಲ್ಲಿ ಕಾದಿಟ್ಟು ನಮ್ಮ ಹೆಂಡರು-ಮಕ್ಕಳನ್ನು ಕೊಲ್ಲಿಸಲು ಇಲ್ಲಿಗೆ ಬಂದಿರುವಿರಿ. ನೀವೆಲ್ಲರೂ ರಾವಣ-ಸನ್ಯಾಸಿಗಳು" ಎಂದು ಹೇಳಬಹುದೇ? ಅಂಕೋಲೆಯಲ್ಲಿ ಯುದ್ಧಕ್ಕೆ ಬಂದ ವೀರರೆಲ್ಲರೂ ತಮ್ಮ ಹೆಂಡರು-ಮಕ್ಕಳನ್ನು ಮೊದಲು ಶತ್ರುಗಳ ಗುಂಡಿನ ಬಾಯಿಗೆ ಕೊಟ್ಟು ಕೊಲ್ಲಿಸಿ ಅನಂತರ ಇಲ್ಲಿಗೆ ಬರಬೇಕಾಗಿತ್ತೋ?

ಈ ತರ್ಕಗಳನ್ನು ಹೇಳುವರೆ ಅಂಕೋಲೆಯ ರೈತರಿಗೆ ದೇ. ಭ. ಕರಮರಕರರಲ್ಲಿರುವ ವಿಶ್ವಾಸವು ಕಡಿಮೆಯಾಗುವುದೆಂಬ ನಂಬಿಕೆಯೋ? ವ್ಯರ್ಥ. ಸದರೀ ಹಸ್ತಪತ್ರದ ಲೇಖಕರು ರಾವಣಸನ್ಯಾಸಿಯೋ? ಮಾರ್ಜಾಲಸನ್ಯಾಸಿಯೋ? ಬಕಪಕ್ಷಿಯೋ? ಸರ್ವಜ್ಞ ಪದಗಳನ್ನು ಕಲಿತ ಚಿನ್ನದ ಪಂಜರದೊಳಗಿನ ಗಿಳಿಯೋ? ಯಾರೆಂಬುದು ಎಲ್ಲರಿಗೂ ಸ್ವಚ್ಛ ತಿಳಿಯುವುದು. ಏಕೆಂದರೆ, **ಕುಲವನ್ನು ನಾಲಿಗೆಯು ಹೇಳುವುದು.**

ಕೆ. ಎ. ವೆಂಕಟರಾಮಯ್ಯ.

ಕರನಿರಾಕರಣೆ ಕರಪತ್ರ
ನಂ. ೩೮

ಸಿರ್ಸಿ, ಸಿದ್ದಾಪುರ,
ತಾ|| ೧೮—೮—೧೯೩೦

ವೀರಶೈವರೇ ಕಣ್ದೆರೆಯಿರಿ

ಬಾಂಧವರೇ,

ಈಗಿನ ದಿವಸಗಳು ಹಿಂದಿನ ಪುರಾಣ ಇತಿಹಾಸಗಳನ್ನೋದುತ್ತಾ ಕೂಡುವ ಕಾಲವಲ್ಲ. ಸ್ವರಾಜ್ಯ ಸಂಪಾದನೆಗಾಗಿ ಹೋರಾಡುವ ಕಾಲವಿದು. ಹಿಂದಿನ ಪುರಾಣೇತಿಹಾಸಗಳಲ್ಲಿ ಉಕ್ತನಾದ ವೀರರ ಶೌರ್ಯವನ್ನು ಅನುಸರಿಸಿ ಅವರಂತೆ ಸಾಹಸಮಾಡಿ ಅವರಂತೆ ಸ್ವತಂತ್ರರಾಗಲು ಪ್ರಯತ್ನಪಡುವ ಕಾಲವಿದು. ಸ್ವಾತಂತ್ರ್ಯ ಯುದ್ಧದ ಕಹಳೆಯ ಧ್ವನಿಯು ದೇಶದ ಮೂಲೆಮೂಲೆಗಳಲ್ಲಿ ಸಹ ಕೇಳಬರಹತ್ತಿದೆ. ಇವು ಮಹತ್ವದ ಸಾಹಸದ ದಿನಗಳಾಗಿವೆ. ಈ ಯುದ್ಧದಲ್ಲಿ ಶಾರೀರಕ ಇಲ್ಲವೆ ಸಾಂಪತ್ತಿಕ ಹಾನಿ ತಟ್ಟುವದು ನಿಶ್ಚಯ. ಹಿಂದುಮಾತೆಯ ವೀರಪುತ್ರರಾದ ನಾವು, ಮಾತೆಯೇ ಕೈಬೀಸಿ 'ಸ್ವಾತಂತ್ರ್ಯಕ್ಕಾಗಿ ನಿಮ್ಮ ಬಿಸಿರಕುತವನ್ನು ನೆಲಕ್ಕೆ ಕೆಡವಿ ಬನ್ನಿರಿ' ಎಂದು ಕರೆಯುವಾಗ ಆ ಮಾತೆಯ ಮಕ್ಕಳಾದ ನಾವು ಹಿಂಜರಿಯುವವರೇ! ಅಲ್ಲ; ಅಲ್ಲ. ಹಿಂದೂ-ಮುಸಲ್ಮಾನರ, ಬ್ರಾಹ್ಮಣ-ಲಿಂಗಾಯಿತ ಭೇದವನ್ನೆಣಿಸದೆ ಒಕ್ಕಟ್ಟಿನಿಂದ ಯುದ್ಧಭೂಮಿಯಲ್ಲಿ ಗುರು ಗಾಂಧೀಜೀಯವರ ಉಪದೇಶವನ್ನು ನೆನೆನೆನೆದು ಅಹಿಂಸಾ ಶಸ್ತ್ರಧಾರಿಗಳಾಗಿ, ಗಂಡಸರೂ, ಹೆಂಗಸರೂ, ಬಾಲಕ-ಬಾಲಿಕೆಯರೂ ಯುದ್ಧಭೂಮಿಯಲ್ಲಿ ಇಮ್ಮಡಿ ಹುರುಪಿನಿಂದ ಜಿಗಿದು ಆತ್ಮವಿಶ್ವಾಸದಿಂದಲೂ, ಧೈರ್ಯದಿಂದಲೂ, ಉತ್ಸಾಹದಿಂದಲೂ ಯುದ್ಧಮಾಡಿ ಸ್ವಾತಂತ್ರ್ಯಗಳಿಸಿ ಹಿಂದುಮಾತೆಯನ್ನು ಉದ್ಧಾರಮಾಡುವದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯ. ಸ್ವಾತಂತ್ರ್ಯ ಯುದ್ಧದ ನಾಯಕತ್ವ ವಹಿಸಿದ ಜಗತ್ಪ್ರಸಿದ್ಧ ಮುದ್ದು ಮೋಹನ ಗಾಂಧೀಜೀಯವರಿರುವವರೆಗೆ ನಾವು ಯಾವ ರೀತಿಯಿಂದಲೂ ಅಪಮಾನ ಪಡತಕ್ಕದ್ದಲ್ಲ. ನಾಳೆಗೆ ಸೂರ್ಯನು ಉದಯವಾಗುವನೆಂದು ಎಷ್ಟು ನಿಶ್ಚಿತವೋ ಸ್ವರಾಜ್ಯ ಸಿಗುವದೆಂಬುದೂ ಅಷ್ಟೇ ನಿಶ್ಚಿತ.

ಆದ್ದರಿಂದ ವೀರಶೈವ ಬಾಂಧವರೇ, ಬಸವೇಶ್ವರನನ್ನಾಗಲೀ, ಪುರಾಣವನ್ನಾಗಲೀ, ನಮ್ಮ ಪೂರ್ವಜರ ಶೂರತ್ವವನ್ನಾಗಲೀ ಹೊಗಳುತ್ತ ಸುಮ್ಮನೆ ಕುಳಿತು ನಮ್ಮ ಹೇಡಿತನವನ್ನು ತೋರಿಸುವದು ನಮಗೆ ಸ್ತುತ್ಯವಲ್ಲ. ನಮ್ಮ ಪೂರ್ವಜರಂತೆಯೇ, ವೀರಶೈವರಾದ ನಾವು ಸ್ವಾತಂತ್ರ್ಯ ಯುದ್ಧದಲ್ಲಿ ಇಮ್ಮಡಿ ಹುರುಪಿನಿಂದ ಜಿಗಿದು ನಮ್ಮ ವೀರತ್ವವನ್ನು ತೋರಿಸಿ ಹಿಂದುಮಾತೆಯ ಮರ್ಯಾದೆಯನ್ನು ಕಾದುಕೊಂಡು ನಮ್ಮ ಶೌರ್ಯವು ಚಿರಸ್ಮರಣೀಯವಾಗಿ ಇತಿಹಾಸದಲ್ಲಿ ಉಳಿಯುವಂತೆ ಮಾಡುವ ಕಾಲವಿದು. ಬಸವೇಶ್ವರನು ಜನಿಸಿ ಲಿಂಗಾಯಿತ ಸಮಾಜವನ್ನು ಉದ್ಧಾರಮಾಡಿದಂತೆ ಪರರಾಜರ ಗುಲಾಮಗಿರಿಯಲ್ಲಿ ಸ್ವಾತಂತ್ರ್ಯವಿಲ್ಲದೆ ರೌರವ ನರಕದಲ್ಲಿ ತೇಲಾಡುವ ನಮ್ಮ ಇಡೀ ಭಾರತಮಾತೆಯ ಪುತ್ರರನ್ನೇ ಉದ್ಧರಿಸಲು ಒರ್ವ ಜಗದ್ವಿಖ್ಯಾತ ತಪಸ್ವಿಯು ಜನಿಸಿರುವನು. ಆತನಲ್ಲಿ ಜಾತಿಭೇದವಿಲ್ಲ; ಆತನೇ ಜಗದ್ವಿಖ್ಯಾತ ಪರಮಪೂಜ್ಯ ಗಾಂಧಿಯು. ಇಂಥ ಹಿಂದೀಯರ ಉದ್ಧಾರಕ್ಕಾಗಿಯೇ ಜೈಲಿನಲ್ಲಿ ಅಂದರೆ (ಜ್ಞಾನಮಂಟಪದಲ್ಲಿ) ಕೂತು ತಪಸ್ಸು ಮಾಡಲಿಕ್ಕೆ ಬೆತ್ತಿದ್ದಾನೆ. ಆತನ ತಪಸ್ಸಿ ಆಳರಸರ ತೋಳಿನ ಆವಾಜ ಅಡಗಿ ಹೋಗಿರುವುದು. ಲಕ್ಷಗಟ್ಟೆ ಅಲ್ಲ, ಕೋಟಿಗಟ್ಟಲೆ ಜನರು ತಮ್ಮ ಸರ್ವಸ್ವವನ್ನು ಧಾರೆಯೆರೆದು ಗಂಡಸರನ್ನದೆ ಆತನ ಮಂಟಪಕ್ಕೆ ತಂಡೋಪತಂಡವಾಗಿ ಹೋಗುತ್ತಿರುವರು. ಎಷ್ಟೋ ಜನ ಪ್ರಾಣವನ್ನರ್ಪಿಸಿರುವರು. ನಮ್ಮ ಸತಿವ್ರತಾಗಳೂ ಕಷ್ಟನಿಷ್ಠೂರಗಳನ್ನು ಲಕ್ಷಿಸದೆ ಗುರು ಗಾಂಧೀಜಿಯವರ ಗಾನಮಾಡುತ್ತಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭರದಿಂದ ಸಾಗಿರುವರು. ವರಂತೂ ತಮ್ಮ ತಮ್ಮ ಆಸ್ತಿಗಳನ್ನೆಲ್ಲಾ ಕಳಕೊಂಡು ಬೀದಿಯ ಪಾಲಾಗಿ ಅಂಗ್ರೇಜರ ದಬ್ಬಾಳಿಕೆಗೆ ಸೊಪ್ಪು ಹಾಕದೆ ಸಾಗಿರುವರು.

ಆದ್ದರಿಂದ ವೀರಶೈವ ಸಮಾಜದ ನನ್ನ ಬಾಂಧವರೇ,

ಇಂಥ ಸಮಯದಲ್ಲಿ ಸಮಾಜಕ್ಕೆ ಅಪಕೀರ್ತಿ ತರುವ ಸಮಯವನ್ನು ತಂದುಕೊಳ್ಳಬೇಡಿರಿ. ಗಂಡು-ಹೆಣ್ಣು ಒಟ್ಟಾಗಿ ಸೆಟ್ಟು ಹೋಡೆದು ಯುದ್ಧಭೂಮಿಗೆ ಘರ್ಜಿಸುತ್ತಾ ನಡೆಯಿರಿ; ನಿಮ್ಮ ಶೌರ್ಯವನ್ನು ತೋರಿಸಿರಿ; ಜಾತಿಮತ್ಸರವನ್ನು ಮರೆಯಿರಿ; ಹಿಂದು-ಮುಸಲ್ಮಾನರೆಲ್ಲಾ ಅಣ್ಣ-ತಮ್ಮಂದಿರೆಂದೇ, ಅಕ್ಕ-ತಂಗಿಯರೆಂದೇ ಭಾವಿಸಿರಿ. ಇದು ಜಾತಿಸಂಬಂಧವಾದ ಯುದ್ಧವಲ್ಲ; ಸ್ವಾತಂತ್ರ್ಯ ಯುದ್ಧವು. ಇಂಥ ಸಮಯದಲ್ಲಿ ಇಂಗ್ರೇಜರು ನಮ್ಮ ನಮ್ಮೊಳಗೆ ಜಾತಿಮತ್ಸರವನ್ನು ಹುಟ್ಟಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಅನೇಕ ರೀತಿಯಿಂದ ಪ್ರಯತ್ನಪಡುವರು; ಅನೇಕ ತರಹದ ಆಶೆ ತೋರಿಸಿ ನಿಮ್ಮ ಕಣ್ಣಿನಲ್ಲಿ ಮಣ್ಣು ಚೆಲ್ಲುವರು. ಮೊನ್ನೆ ಮೊನ್ನೆ ಸಿರಸಿ, ಸಿದ್ದಾಪುರ ತಾಲ್ಲೂಕಿನಲ್ಲಿ ಕರನಿರಾಕರಣೆಯು ಯಶಸ್ವಿಯಾಗುವದೆಂದು ತಿಳಿದು ನೀಚ ಸರಕಾರದವರು ತಮ್ಮ ಹುಟ್ಟುಸ್ವಭಾವವಾದ ಭೇದೋಪಾಯದಿಂದ (Divide & Rule) ನಮ್ಮ ನಮ್ಮೊಳಗೆ ಅಂದರೆ ಲಿಂಗಾಯತ ಬ್ರಾಹ್ಮಣರಲ್ಲಿ ದ್ವೇಷವನ್ನುತ್ಪನ್ನಮಾಡಲು 'ಸ್ವರಾಜ್ಯ ಎಂದಿಗೂ ಸಿಗಲಾರದು, ಮೂರ್ಖ ಬ್ರಾಹ್ಮಣರ ಮಾತಿಗೆ ಅಥವಾ ನೀಚಕೃತಿಗೆ ಮರುಳಾಗಬೇಡಿರಿ. ಸಿರಸಿ, ಸಿದ್ದಾಪುರ ಈ ಎರಡು ತಾಲ್ಲೂಕಿನಲ್ಲಿ ಚಳವಳಿ ನಡೆಸಿದರೆ ಸ್ವರಾಜ್ಯ ಸಿಕ್ಕೀತೇ? ನಮ್ಮ ಬಲಾಢ್ಯ ಸರಕಾರಕ್ಕೆ ಎದೆಗೊಟ್ಟು ನಿಲ್ಲುವರೇ!' ಎಂದು ಕೆಲವು ಗುಲಾಮಗಿರಿಯಲ್ಲಿ ಹೊರಳಾಡುವ ಹಿಂದೀ ನೌಕರರು ತಮ್ಮ ಹೊಟ್ಟೆಯ ಪಾಡಿಗಾಗಿ ತಮ್ಮ ತಂದೆ-ತಾಯಿಗಳನ್ನು ಅಕ್ಕ-ತಂಗಿಯರನ್ನು ಮರೆತು, ದಾಸ್ಯತ್ವಕ್ಕಾಗಿ ತಮ್ಮ ಹೆಂಡಿರು-ಮಕ್ಕಳನ್ನು ಸಹಾ ಮಾರಿ "ದೇಶದ್ರೋಹಿ" ಎಂಬ [illegible] ತಮ್ಮಂತೆ ಗುಲಾಮರಾಗಲು ಸಿರಸಿ, ಸಿದ್ದಾಪುರದ ರೈತರಿಗೆ, ಅವರಲ್ಲೂ ವೀರಶೈವರಿಗೆ "**ನಗೆಯು ಬರುತಿದೆ, ನಗೆಯು ಬರುತಿದೆ**" ಎಂಬ [illegible] ಲೇಖನದ ಪತ್ರಗಳನ್ನು ಹಂಚಿ 'ಬನವಾಸಿ ದೇವಸ್ಥಾನದ ವಿಷಯವಾಗಿ ಬ್ರಾಹ್ಮಣರು ಮೋಸಮಾಡಿರುವರು; ಅದರಂತೆಯೇ ನಿಮ್ಮ ಸಮಾಜವನ್ನು ಅಧೋಗತಿಗೆ ಇಳಿಸಲು ಕೆಲವು ದುಷ್ಟ ಬ್ರಾಹ್ಮಣರು ಪ್ರಯತ್ನಿಸಿರುವರು. ಎಂದು ಪ್ರಸಿದ್ಧಿಸಿರುವರು. ಅಣ್ಣಗಳಿರಾ ದಯಮಾಡಿ ಅವರ ಮೋಸಕ್ಕೆ ಬಲಿಯಾಗಬೇಡಿರಿ, ಇದು ಬ್ರಾಹ್ಮಣರ ಚಳವಳಿಯಲ್ಲ; ಇಡೀ ಹಿಂದೂಸ್ಥಾನದ್ದೇ ಇರುವುದು. ಬ್ರಾಹ್ಮಣರಿಗಷ್ಟೇ ಸ್ವರಾಜ್ಯ ಸಿಗುವುದೆಂದು ತಿಳಿಯಬೇಡಿರಿ, ಅದು ಪ್ರತಿಯೊಬ್ಬ ಹಿಂದೀಯನ ಸನದಸೀರ ಹಕ್ಕು ಇರುವದು. ಸ್ವರಾಜ್ಯ ಸಿಕ್ಕಮೇಲೆ ಎಲ್ಲರೂ ಸರಿಸಮಾನ ಹಕ್ಕುದಾರರಾಗುವರು. ಅಸ್ಪೃಶ್ಯತಾನಿವಾರಣೆಯು ಮಹಾತ್ಮಾಜಿಯವರ ಮುಖ್ಯ ಕರ್ತವ್ಯವಿದ್ದದು; ಸ್ವರಾಜ್ಯ ಸಿಕ್ಕನಂತರ ಬನವಾಸಿ ದೇವಸ್ಥಾನದಲ್ಲಿ ಲಿಂಗಾಯಿತರೇಕೆ ಅಸ್ಪೃಶ್ಯರು ಸಹಾ ಒಳಹೋಗುವರು, ನಾಸಿಕದಂಥಾ ಪವಿತ್ರಸ್ಥಾನದಲ್ಲೇ ಅಸ್ಪೃಶ್ಯರು ಒಳಹೊಕ್ಕು ಪೂಜೆ ಮಾಡಿದ ಸಂಗತಿಯು ನಿಮಗೆ ಪ್ರತ್ಯಕ್ಷವಾಗಿದೆ. ಅಷ್ಟರ ಆಶೆಗಾಗಿ ಗುಲಾಮರಾಗಿ ಬಾಳಬೇಡಿರಿ, ಹಿಂದುಮಾತೆಯು ದ್ರೋಹಿಗಳಾಗಬೇಡಿರಿ. ನೀವು ಲಿಂಗಾಯತರು ಈ ಯುದ್ಧದ ಸೇರಿದ್ದೀರೆಂದು ತಿಳಿಯಬೇಡಿರಿ, ಅನೇಕ ಮುಂದಾಳುಗಳು ಸೆರೆಮನೆ ವಾಸವನ್ನನುಭವಿಸುತ್ತಿರುವರು. ಕೊಲ್ಹಾಪುರದಲ್ಲಿ ಕಲೆಕ್ಟರನಿಗೆ ಜನ್ಮದಾನಕೊಟ್ಟ ವೀರ ಸ್ವರ್ಗವನ್ನೈದ ವೀರಶೈವ ಸಮಾಜದ ವೀರ ಧನಶೆಟ್ಟಿ ಮುಲ್ಲಪ್ಪನವರಿಗೆ ಫಾಶಿ ಶಿಕ್ಷೆ ಕೊಟ್ಟದ್ದು ನಿಮಗೆ ನೆನಪಿಲ್ಲವೇ? ಇವರೇ ಹಿಂದೂಸ್ಥಾನದ ಮುಲ್ಲಪ್ಪನವರು ನಿರಪರಾಧಿಗಳು, ನಿಮಗೆ ಹಿತಮಾಡಿದವರು ಎಂದು ಘೋರವಾದ ಶಿಕ್ಷೆಕ್ಕೆ ಕಾರಣರು ಗಲ್ಲಿಗೇರಿಸಲಿಲ್ಲವೇ? ಇಂಥ ದ್ರೋಹಿಗಳನ್ನು ನಮ್ಮ ದೇಶದಿಂದೋಡಿಸುವುದು ನಮ್ಮ ಕರ್ತವ್ಯವಲ್ಲವೇ?

ಮಹನೀಯರೇ, ಇನ್ನು ಕಾಂಗ್ರೆಸದ ಶಕ್ತಿ ಎಷ್ಟಿದೆ ಎಂಬುದನ್ನು ಬಲ್ಲಿರಾ. ನಿಮಗೆ ಸ್ವರಾಜ್ಯ ಸಿಗಲಾರದೆಂಬ ಸಂಶಯವಿದೆಯೋ? ಹಾಗಾದರೆ ಸ್ವಲ್ಪದರಲ್ಲಿಯೇ ವಿಚಾರಿಸಿರಿ. ಕಾಂಗ್ರೆಸಿನ ಅಹಿಂಸಾಶಸ್ತ್ರದ ಏಟಿನಿಂದ ಬ್ರಿಟಿಷ ಸರಕಾರವು ತಲೆಬಾಗಿ ಶರಣು ಹೊಡೆದದ್ದು ನಿಮ್ಮ ನೆನಪಿನಲ್ಲಿಲ್ಲವೇ? ವೈಸರಾಯರಾದ ಅರ್ವಿನ್ ಸಾಹೇಬರು ಮೊಣಕಾಲುಮಂಡಿ ಹಚ್ಚಿ ಪರಮಪೂಜ್ಯ ಗುರುವಾದ ಗಾಂಧೀಜೀಯವರಿಗೆ ಬಿದ್ದು ಬೇಡಿಕೊಂಡು ಒಪ್ಪಂದ ಮಾಡಿಕೊಂಡು, ನಿಮಗೆ ಸ್ವರಾಜ್ಯ ಕೊಡುವೆನೆಂದು ಕೃತ್ರಿಮತನದಿಂದ ಇಂಗ್ಲೆಂಡಿಗೆ ಬರಮಾಡಿಕೊಂಡು ರಾಜಮರ್ಯಾದೆಯನ್ನು ಮಾಡಿ ಪುನಃ ವಂಚಿಸಲಿಲ್ಲವೇ? ಕೌರವರು ಪಾಂಡವರನ್ನು ಅರಗಿನಮನೆಯಲ್ಲಿ ಮೋಸದಿಂದ ಕರೆದೊಯ್ದು ಅವರ ಪ್ರಾಣಹಾನಿಮಾಡುವುದಕ್ಕಾಗಿ ಅರಗಿನ ಮನೆಗೆ ಬೆಂಕಿ ಹಚ್ಚಿದರು. ಆದರೆ ಅವರು ಮಡಿದರೇ? ಯಾನ ಗಂಡಾಂತರಕಲ್ಲ ಅಂಜದೆ ಎದೆಗೊಟ್ಟು ಕಾದಿ ಜಯಶಾಲಿಗಳಾಗಲಿಲ್ಲವೇ? ಇವರ ದರೂ ಅವರ ಸಾಮರ್ಥ್ಯದ ಬೆಲೆ ಏನಾದರೂ ಕಡಿಮೆಯಾಯಿತೇ? ಅದರಂತೆಯೇ ನಮ್ಮ ಗುರು ಗಾಂಧೀಜೀಯವರನ್ನು ಮೋಸದಿಂದ ಇಂಗ್ಲೆಂಡಿಗೊಯ್ದು ಇತ್ತ ಹಿಂದೂಸ್ಥಾನದಲ್ಲೆಲ್ಲಾ ನಿರಪರಾಧಿ ಮತ್ತು ಸಾತ್ವಿಕ ಜನರಮೇಲೆ ಇಲ್ಲದಸಲ್ಲದ ದಬ್ಬಾಳಿಕೆಯನ್ನು ನಡೆಸಿ ದೇಶದಲ್ಲೆಲ್ಲಾ ಕೋಲಾಹಲವೆಬ್ಬಿಸಿ ಹಿಂದೂಸ್ಥಾನದ ರತ್ನಗಳನ್ನೆಲ್ಲಾ ಬಂಧಿಸಲಿಲ್ಲವೇ? ಇದಲ್ಲದೆ ಪರಮಪೂಜ್ಯರನ್ನು ಸಹಾ ಹಿಂದೂಸ್ಥಾನದ ದಂಡೆಯನ್ನು ತಲ್ಪುತ್ತಲೇ ಕಾರಾಗೃಹಕ್ಕಟ್ಟಲಿಲ್ಲವೇ? ಅವರು ಈರೀತಿ ಮೋಸ ಮಾಡಿದ ಕೃತ್ರಿಮವರ್ತನವು ನಮ್ಮ ಭಾರತೀಯರಿಗೆ ಶುಭಚಿಹ್ನೆಯಾಗಿ ತೋರಿ, ಹೇಡಿಯಾದ ಕೂಡಲೆಲ್ಲಾ ಹುರುಮಂಬಿಸಿ ನವಜೀತನವನ್ನುತ್ಪನ್ನ ಮಾಡಿ, ಲಕ್ಷಗಟ್ಟಲೆ ಜನರು ಸಾಲುಸಾಲಾಗಿ ಗಾಂಧೀಯವರ ಗುರುಮಂತ್ರವನ್ನು ಜಪಿಸುತ್ತಾ ಆನಂದದಿಂದ ಜೈಲುಗಳನ್ನು ತುಂಬುತ್ತಲೇ ಇರುವರು. ಲಕ್ಷಗಟ್ಟಲೆ ಜನರು ಬಂಧನದಲ್ಲಿದ್ದರೂ ನಮ್ಮ ಸಾಮರ್ಥ್ಯವೇನಾದರೂ ಕಡಿಮೆಯಾಗಿರುವುದೇ? ಸ್ಯಾಮುಯಲ್ ಹೋರನು ಈ ಚಳವಳಿಯನ್ನು ೬ ವಾರಗಳಲ್ಲಿ ಬಗ್ಗುಬಡೆದು ರಸಾತಲಕ್ಕೆ ಮೆಟ್ಟುವೆನೆಂದು ಪೊಳ್ಳು ಘರ್ಜನೆಯ ಉತ್ತರನ ಪೌರುಷ ಕೊಚ್ಚಲಿಲ್ಲವೇ? ಎಲ್ಲಿದೆ ಅವನ ಪೌರುಷ. ೬ ವಾರಗಳೇಕೆ ೬ ತಿಂಗಳಾದರೂ ಸಾಲದೆ ಪುನಃ ಆರು ತಿಂಗಳು ಅದಕ್ಕಿಂತಲೂ ಹೆಚ್ಚಿನ ಬಾಣಪ್ರಯೋಗ ಮಾಡಿರುವನು. ಭಾರತೀಯರು ಇಂಥ ಕ್ಷುಲ್ಲಕ ಉತ್ತರನ ಬೆದರಿಕೆಗೆ ಸೊಪ್ಪು ಹಾಕುವರೇ? ಮೊದಲಿಗಿಂತಲೂ ಹೆಚ್ಚು ಕರಪತ್ರಗಳು ಹಾರಲಿಕ್ಕೆ ಹತ್ತಿದವು. ಕರಪತ್ರಗಳು ಅವರ ಕರುಳುಗಳನ್ನು ಕತ್ತರಿಸಲಿಕ್ಕೆ ಹತ್ತಿದವು. ಜೈಲುಗಳು ಸಾಲದೆ ತಂಬೂ ಹೊಡೆಯಬೇಕಾಯಿತು. ಏನೆಂದರೂ ಆಸ್ತಿಗಳನ್ನೆಲ್ಲಾ ತಮ್ಮ ವಶಕ್ಕೆ ತೆಗೆದುಕೊಂಡು ಸಹಿಸಲಾರದ ದಂಡ ವಗೈರೆ ವಸೂಲುಮಾಡಿ ಅನ್ನ ನೀರಿಲ್ಲದೆ ಭಾರತೀಯರನ್ನು ಬಳಲಿಸಲಿಕ್ಕೆ ಹತ್ತಿದರು. ಆದರೂ ಅಂಜದೆ ಮತ್ತಿಷ್ಟು ಹರ್ಷದಿಂದ ಕುಣಿಯುತ್ತಾ ರಣಭೂಮಿಯಲ್ಲಿ ಧುಮುಕಲಿಕ್ಕೆ ಹತ್ತಿದರು. ಇವರು ಹೋರನ ಘನಘರ್ಜನೆಗೆ ಸೆಡ್ಡುವವರೇ, ಇದು ಧರ್ಮಯುದ್ಧ, ಸತ್ಯದ ಯುದ್ಧ, ಸ್ವಾತಂತ್ರ್ಯಯುದ್ಧ, ಅಹಿಂಸಾಶಸ್ತ್ರಯುದ್ಧ, ಆಂಗ್ರೇಜರನ್ನು ಹೊಡೆದೋಡಿಸುವ ಯುದ್ಧ. ಈ ಯುದ್ಧವು ಆಂಗ್ರೇಜರನ್ನು ಅಂತರಂಗದಲ್ಲಿ ಚೆನ್ನಾಗಿ ಗುದ್ದಿ ಹಣ್ಣು ಮಾಡಿರುವುದು. ನೂರಾರುವರ್ಷ ಸ್ವೇಚ್ಛೆಯಿಂದ ನಮ್ಮನ್ನು ಮೋದು, ನಮ್ಮ ರಕ್ತವನ್ನು ಹೀರಿ ಕೊಬ್ಬಿದವರು ಈಗ ಅದನ್ನು ಕಳೆದುಕೊಳ್ಳುವ ಪ್ರಸಂಗಬಂದೊದಗಿರುವುದರಿಂದ ಸಾಯುವಾಗ ಗುಬ್ಬಿಯು ಬಾಯಬಿಡುವಂತೆ ಬಿಡಲಿಕ್ಕೆ ಹತ್ತಿ, ಇನ್ನೂ ಅನೇಕ ರೀತಿಯಿಂದ ಪ್ರಯತ್ನಿಸಲಿಕ್ಕೆ ಹತ್ತಿರುವರು. ಇವರ ಅಂತ್ಯವೇಳೆಯು ಸಮೀಪಿಸಿರುವುದು; ಇತ್ತ ಪರರಾಜ್ಯಗಳೂ ಒದಿಯಲಿಕ್ಕೆ ಹತ್ತಿರುವರು. ನಮ್ಮ ಭಾಗ್ಯೋದಯದ ಕಾಲ ಸಮೀಪಿಸಿರುವುದು.

ಸಿ, ಸಿದ್ದಾಪುರ ತಾಲ್ಲೂಕಿನ ವೀರಶೈವ ಬಾಂಧವರೇ, ಹೆಚ್ಚು ಬರೆಯುವುದರಿಂದ ಪ್ರಯೋಜನವಿಲ್ಲ. ನಿಮಗೆ ವಿಚಾರಶಕ್ತಿಯನ್ನು ದಯಪಾಲಿಸಿರುವನು ನಮ್ಮ ಬಾಂಧವರು ನಮ್ಮೆಲ್ಲರ ಹಿತದ ಸಲುವಾಗಿ ಆರಿದೊಟ್ಟಿಯುಂಡು ನಮ್ಮೆಲ್ಲರನ್ನುದ್ಧಾರಮಾಡಲು ಅನನ್ಯಭಾವದಿಂದ ಪ್ರಾರ್ಥಿಸುತ್ತ ಕಠಿಣತರದಿಂದ ಜೀವಿಸುತ್ತಿರುವಾಗ, ನಾವು ಯಥೇಚ್ಛವಾಗಿ ತಿಂದುಂಡು ನಗುತ್ತಾ ಜೀವಿಸುವುದು ಧರ್ಮವೇ ಸರಿ. ಅಲ್ಲದೆ ಇಂಥ ಸಮಯದಲ್ಲಿ ನಾವುಗಳು ಅವರ ಆಸ್ತಿ ವಗೈರೆ ಸೋವಿದರದಿಂದ ಸಿಗುವುದೆಂಬ ದುರಾಶೆಗೆ ಬಿದ್ದು ತೇರಳ ಮಕ್ಕಳು ಮರಿಮಕ್ಕಳಿಗೆ ಗಳಿಸಿಡುವ ಹೀನವೃತ್ತಿಯ ಕೆಲಸವನ್ನು ಕೈಕೊಳ್ಳುವುದು ಹೇಯಾಸ್ಪದವಲ್ಲವೇ? ಈರೀತಿಯಿಂದ ಗಳಿಸಿದ ದ್ರವ್ಯವು ಆಸ್ತಿಯು ನಿಮ್ಮ ಮಕ್ಕಳು-ಮರಿಮಕ್ಕಳಿಗೆ ಆಸ್ತಿಯಾಗದೆ ಪಾಪದ ಹೆಡಿಗೆ ತುಂಬಿಟ್ಟಂತಾಗುವುದು. ಈಗಿನ ಕಾಲದ ದಾಸ್ಯತ್ವದಿಂದ ಗಳಿಸಿದ ಧನವು, ಪೊಳ್ಳು ಬಿರುದುಗಳೂ ನಿಮ್ಮನ್ನು ಅಧೋಗತಿಗೆ ಈಡುಮಾಡುವುವು. ಸರಕಾರದ ಬಾಲಹಿಡಿದವರೆಲ್ಲಾ ಕಟ್ಟಕಡೆಗೆ ಇದೇ ಸರಕಾರದಿಂದಲೇ ನರಕಯಾತನೆಯನ್ನು ಮಾಡಬೇಕಾಗುವುದು. ಈಗಿನ ನಮ್ಮ ಹಿಂದೀ ನೌಕರರಿಗೆ ಈ ವಿಷಯವು ಸ್ವಚ್ಛವಾಗಿ ತಿಳಿದಿದ್ದರೂ ಸಹ ಅಂತರ ಪಿಶಾಚಿಗಳಂತೆ ಎರಡೂ ಕಡೆಗೂ ಭುಜ ತಟ್ಟಲಿಕ್ಕೆ ಹತ್ತಿರುವರು. ಶಿರಸಿ, ಸಿದ್ದಾಪುರದ ನೌಕರರೆಲ್ಲಾ ಏಕಾರಿ ಚಾಕರಿಗಾಗಿ, ಇಂಗ್ಲೀಷರ ಪಾದವೇ ಪರಮಪೂಜ್ಯವೆಂದೂ, ಅವರ ಬೂಟುಗಳನ್ನೊರೆಸುವುದೇ ಮೋಕ್ಷವೆಂದೂ, ಅವರ ಎಂಜಲಿಗೆ ಕೈಯೊಡ್ಡುವುದೇ ಪವಿತ್ರವೆಂದೂ, ದಾಸ್ಯತ್ವದಲ್ಲಿ ತೇಲಾಡುವುದೇ ಅವರ ಕರ್ತವ್ಯವೆಂದು ಭಾವಿಸಿ, ತಮ್ಮ ಡಗಲಿಯನ್ನು ಬಿಚ್ಚಿಡುವ ಪ್ರಸಂಗವು ಎಲ್ಲಿ ಬರುವುದೋ ಎಂದು ಶ್ರೀ ವೆಂಕಟರಮಣನ ಧ್ಯಾನ ಮಾಡಲಿಕ್ಕೆ ಹತ್ತಿರುವರು. ವೆಂಕಟರಮಣನು ಅಹೋರಾತ್ರಿ ಪ್ರಾಣಿಗಳಂತೆ ಕಾನನದಲ್ಲಿ ಹುಡುಕಿದರೆ ಸಿಗುವನೇ, ಮನೆಮನೆಗೆ ಮುತ್ತಿಗೆ ಹಾಕಿ ಬ್ಯಾಟ್ರಿ ಹಚ್ಚಿ ಹುಡುಕಿದರೆ ಸಿಗುವನೇ. ಚಾಲಿಗಾರರಂತೆ ನಮುನಮೂನೆ ವೇಷ ಹಾಕಿ ಗುಪ್ತಚಾರರಾಗಿ ಹಳ್ಳಿಹಳ್ಳಿ ಹುಡುಕಿದರೆ ಸಿಗುವನೇ, ಇಲ್ಲ; ಇಲ್ಲ. ನಿಮ್ಮ ನೆರಳಿನಂತೆ ಆತನು ನಿಮ್ಮಲ್ಲಿಯೇ ವಾಸವಾಗಿರುವನು. ನಿಮ್ಮಂಥ ನೀಚ ನೌಕರರಿಗೆ ಆತನು ಕಾಣಲಾರನು. ಸಾವಿರಗಟ್ಟಲೆ ದ್ರವ್ಯ ಖರ್ಚು ಮಾಡಿ ನಿಮ್ಮ ಸೈನ್ಯವನ್ನೆಲ್ಲಾ ಶಿರಸಿ, ಸಿದ್ದಾಪುರ ತಾಲ್ಲೂಕಿನಲ್ಲಿಯೇ ಬಿಟ್ಟು ಹುಡುಕಿದರೂ ಸಿಗಲಾರನು. ಆತನು ಪರಮಪೂಜ್ಯ ಗಾಂಧೀಜೀಯವರ ನಿಸ್ಸೀಮ ಭಕ್ತನು. ಬಡವರ ಹಿತಕ್ಕಾಗಿ ಟೊಂಕಕಟ್ಟಿ ನಿಂತವನು. ಎಂದು ನೀವು ನಿಮ್ಮ ನೌಕರಿಗೆ ತಿಲಾಂಜಲಿಯನ್ನು ಬಿಟ್ಟು ಆತನನ್ನು ಪ್ರೀತಿಯಿಂದ ಪ್ರಾರ್ಥಿಸುವಿರೋ ಅಂದೇ ನಿಮಗೆ ಪ್ರತ್ಯಕ್ಷನಾಗುವನು. ಆತನನ್ನು ಭಕ್ತಿಯಿಂದ ಧ್ಯಾನಿಸುವುದೊಂದೇ ತಡ ನಿಮ್ಮ ... ...ಟುವನು. ನೀವು ಗುಲಾಮರಾಗಿ ಬಾಳಿದರೆ ನಿಮಗೆ ಆತನು ದೊರಕುವುದು ಬಹು ಕಠಿಣ. ಸದ್ಗೃಹಸ್ಥರೇ ಈ ತರಹದ ಗುಲಾಮರ ಬಲೆಗೆ ಬೀಳದೇ ದೀರ್ಘ ವಿಚಾರಮಾಡಿರಿ. ನಿಮ್ಮವರ ಸಂಗಡ ಪ್ರಾಣ ಕೊಡುವುದರಿಂದ ನಿಶ್ಚಯವಾಗಿ ನಿಮಗೆ ಮುಕ್ತಿ ದೊರೆಯುವುದು. ಸ್ವಾತಂತ್ರ್ಯಯುದ್ಧದಲ್ಲಿ ಜಯಶಾಲಿಗಳಾದಲ್ಲಿ ಅಂದೇ ನಿಮ್ಮ ಮಕ್ಕಳು ನಿಜವಾಗಿಯೂ ಭಾಗ್ಯಶಾಲಿಗಳಾಗುವರು.

ವೀರಶೈವ ಬಂಧುಭಗಿನಿಯರೇ, ಬರೆಯುತ್ತಾ ಹೋದಹಾಗೆಲ್ಲಾ ನನ್ನ ತರುಣ ಬಿಸಿರಕ್ತ ಕುದಿಯಲಿಕ್ಕೆ ಹತ್ತುವುದು. ಸ್ವಲ್ಪದರಲ್ಲಿಯೇ ಮುಗಿಸುವೆನು. ಶಿವ ಪಂಚಾಕ್ಷರೀ ಮಂತ್ರವನ್ನು ಜಪಿಸುವುದರಿಂದ ಮೋಕ್ಷ ದೊರೆಯುವುದೆಂದು ಹೇಗೆ ಭಾವಿಸುವಿರೋ ಅದರಂತೆಯೇ ಗುರು ಗಾಂಧೀಜೀಯವರ ಪಂಚಾಕ್ಷರೀ ಮಂತ್ರವಾದ "ವಂದೇ ಮಾತರಂ" ಎಂಬ ಮಂತ್ರವನ್ನು ಜಪಿಸುತ್ತಾ ಒಂದು ಕೈಯಲ್ಲಿ ಸ್ವಾತಂತ್ರ್ಯವೇ ಮೋಕ್ಷ, ಇನ್ನೊಂದು ಕೈಯಲ್ಲಿ ದೇಶಸೇವೆಯೇ ಈಶಸೇವೆ ಎಂಬ ಮಂತ್ರಗಳನ್ನು ಹಿಡಿದು ಕಾದಿ ಸತ್ತರೆ ಸ್ವರ್ಗ, ಉಳಿದರೆ ಜಯ. ಸಂಗ್ರಾಮದಲ್ಲಿ ಧುಮುಕಿರಿ. ಹಿಂದೂಮಾತೆಯ ಸಂಕೋಲೆಗಳನ್ನು ಕತ್ತರಿಸಿರಿ.

ವೀರಪ್ಪ ಚನ್ನಬಸಪ್ಪ ಜಕಾತಿ,
ಡಿಕ್ಟೇಟರ್,
ಕ. ಪ್ರಾಂ. ಕಾಂ. ಕಮಿಟಿ, ಧಾರ್

ಕಾನಡಾ ಜಿಲ್ಲೆಯೊಳಗಿನ ಭಂಗಾರದ ಖಣಿಗಳೂ. ಅವುಗಳ ಈಗಿನ ದುರವಸ್ಥೆಯ ಕಾರಣಗಳೂ ಮತ್ತು ಅವುಗಳ ಸುಧಾರಣೋಪಾಯಗಳು.

ಭೋಳಾ ಭಟ್ಟರೇ ಭಂಡ ಬಂಟರ ಬಲೆಯಲ್ಲಿ ಬಿದ್ದು ಭ್ರಮಿಷ್ಟರಾಗಬೇಡಿರಿ

ಮೇಲಿನ ಈ ಶಿರೋನಾಮೆಯನ್ನು ಓದಿ ವಾಚಕರು ಆಶ್ಚರ್ಯಚಕಿತರಾಗಬಹುದು. ಕಾನಡಾ ಜಿಲ್ಲೆಯೊಳಗೆ ಭಂಗಾರದ ಹೊಸ ಶೋಧ ಆಗಿದೆಯೋ ಇಲ್ಲವೇ ಲೇಖಕನ ಕಾಲ್ಪನಿಕ ಖಣಿಗಳೊ ಎಂದು ವಿಚಾರಸಾಗರದಲ್ಲಿ ಬೀಳಬಹುದು. ಆದರೆ ವಿಚಾರ ಮಾಡುವದಕ್ಕೆ ಅವಕಾಶ ಕೊಡದೆ ಸ್ಪಷ್ಟವಾಗಿ ಹೇಳುವದೇ ಲೇಸು. ಕಾನಡಾ ಜಿಲ್ಲೆಯೊಳಗಿನ ಭಂಗಾರದ ಖಣಿಗಳೆಂದರೆ, ಅಡಿಕೆ ತೋಟಗಳು. ಮುಂಬಯಿ ಇಲಾಖೆಯಲ್ಲಿ ಪ್ರಸಿದ್ಧಿಯನ್ನು ಪಡೆದಂಥವು. ಕಾನಡಾ ಜಿಲ್ಲೆಯ ಅಸ್ತಿತ್ವವಾದರೂ ಈ ಅಡಿಕೆ ತೋಟಗಳಿಂದಲೇ ಹೊರಗಿನ ದೇಶಗಳಿಗೆ ತಿಳಿದಿರುವದು. ಅಡಿಕೆ ತೋಟಗಳಲ್ಲಿ ಬರೇ ಅಡಿಕೆ ಬೆಳೆಯೇ ಇರದೆ ಏಲಕ್ಕಿ, ಮೆಣಸು, ವೀಳ್ಯದ ಎಲೆ, ಬಾಳೆ, ತೆಂಗು ಇತ್ಯಾದಿ ಬೆಳೆಗಳ ಸಮಾವೇಶವಾಗಿದ್ದು ತೋಟಗಳ ಸಾಗುವಳೀ ಕಡೆಗೆ ಸರಿಯಾಗಿ ಲಕ್ಷ ಪೂರೈಸಿದರೆ ಅವುಗಳಿಂದಾಗುವಷ್ಟು ಉತ್ಪನ್ನವು ಇನ್ಯಾವ ಸಾಗುವಳಿಯಿಂದಲೂ ಸಿಗಲಾಗದು. ತೋಟಗಳು ವಂಶಪಾರಂಪರ್ಯಗತವಾಗಿ ಬಂದಂಥವು. ವಾರ್ಷಿಕ ಸಾಗುವಳಿಯನ್ನಷ್ಟೇ ತಕ್ಕ ಕಾಲದಲ್ಲಿ ಮಾಡುತ್ತ ಹೋದರೆ, ಸರಿಯಾದ ಉತ್ಪನ್ನವನ್ನು ಕೊಡುವವು. ಈ ಅಡಿಕೆ ತೋಟಗಳೆಂದರೆ ಕಾಮಧೇನುವಿನಂತಿರುವವು. ಬಾಳೆ, ವೀಳ್ಯದ ಎಲೆ ಇತ್ಯಾದಿಗಳಿಂದ ಆಗಾಗ್ಗೆ ಉತ್ಪನ್ನವು ಸಿಗುವದು. ನಿತ್ಯದಲ್ಲಿಯೂ ಅವುಗಳು ಪ್ರತಿಫಲ ಕೊಡುವಂತಿವೆ ಎಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಅಡಿಕೆ, ಏಲಕ್ಕಿ ಮತ್ತು ಮೆಣಸು ಇವುಗಳ ಕ್ಷೇತ್ರವು 23000 ಎಕ್ರೆಯಷ್ಟಾಗಿ ಇದ್ದು, ಶಿರ್ಸಿ ಸಿದ್ದಾಪೂರ ತಾಲೂಕಗಳಲ್ಲಿ ಅನುಕ್ರಮವಾಗಿ ಅವುಗಳ ಕ್ಷೇತ್ರವು 9950 ಮತ್ತು 9025 ಎಕ್ರೆ ಇರುವದು. ಉಳಿದ ಕ್ಷೇತ್ರವು ಕುಮಟಾ ಹೊನ್ನಾವರ, ಅಂಕೋಲಾ ಮತ್ತು ಯಲ್ಲಾಪೂರ ಈ ತಾಲೂಕಗಳಿಗೆ ಸೇರಿರುವದು. ಅಂದರೆ ಈ ಬೆಳೆಗಳ ಮುಖ್ಯ ಕೇಂದ್ರಗಳು ಶಿರ್ಸಿ ಮತ್ತು ಸಿದ್ದಾಪೂರ ತಾಲೂಕಗಳಾಗಿರುವವು. ಅಡಿಕೆ ತೋಟಗಳಿಂದ ಸರಾಸರಿ ವಾರ್ಷಿಕ ಉತ್ಪನ್ನವು 60 ಲಕ್ಷಕ್ಕೂ ಮೀರಿ ಇರುವದು. ಇಷ್ಟು ಸಣ್ಣ ಕ್ಷೇತ್ರದಮೇಲೆ ಇಷ್ಟು ದೊಡ್ಡ ಉತ್ಪನ್ನ ಕೊಡುವಂಥ ಬೆಳೆಯು ನಮ್ಮ ಕಾನಡಾ ಜಿಲ್ಲೆಯಲ್ಲಿ ಮತ್ತಿನ್ಯಾವದು ಇಲ್ಲ. ನಮ್ಮ ಜಿಲ್ಲೆಯೊಳಗಿನ ಪ್ರತಿವರ್ಷದ ಸಾಧಾರಣ ಬೇಸಾಯದಿಂದ ಒಂದು ಎಕರೆಗೆ ಬರುವ ಉತ್ಪನ್ನವು ಸರಾಸರಿ 60 ರೂಪಾಯಿ ಎಂದು ಅಂದಾಜ ಮಾಡಲ್ಪಟ್ಟಿದೆ. ಅದರಲ್ಲಿ ಅಡಿಕೆ ತೋಟಗಳಿಂದಲೇ ½ ದಷ್ಟು ಉತ್ಪನ್ನದ ಸಮಾವೇಶವಾಗುವದು. ಇವುಗಳ ಮಹತ್ವವು ಇನ್ನೂ ಹೆಚ್ಚಾಗಿರುವದು. ಯಾಕೆಂದರೆ ಈ ಎಲ್ಲಾ ಸರಕುಗಳು ಪರಸ್ಥಳಕ್ಕೆ ರಫ್ತವಾಗುವಂಥವು. ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ವಿಚಾರಿಸಿದ್ದಲ್ಲಿ ಜೀವನಕ್ಕೆ ಬೇಕಾಗಿರುವ ಸಾಮಗ್ರಿಗಳನ್ನು ದೊಡ್ಡ ಪ್ರಮಾಣದಿಂದ ಪರಜಿಲ್ಲೆಗಳಿಂದಲೇ ತರಿಸಿಕೊಳ್ಳಬೇಕಾಗುತ್ತದೆ. ಆಯಾತವು ಹೆಚ್ಚಿಗೆ ಇದ್ದು ನಿರ್ಗತ ವ್ಯವಹಾರವು ಕಡಿಮೆಯಾದಲ್ಲಿ ಯಾವದೇಶವಾದರೂ ಬಡತನ ಸ್ಥಿತಿಯಲ್ಲಿಯೇ ಉಳಿಯುವದು. ಕಾರಣ ಈ ತೋಟಗಳ ಮಹತ್ವವನ್ನು ಅರ್ಥ ಶಾಸ್ತ್ರಜ್ಞರು ಸಹಜವಾಗಿ ತಿಳಕೊಳ್ಳಬಹುದು. ಸಾವಿರಾರು ತೋಟಿಗರ ಕುಟುಂಬಗಳ ನಿರ್ವಾಹವು ಈ ಬೆಳೆಗಳಿಂದಲೇ ಆ

ಗುತ್ತಿರುವದು. ಇದಲ್ಲದೆ ತೋಟದ ಸಾಗುವಳಿಗೆ ಬಹಳ ಕೂಲಿಜನರ ಅವಶ್ಯಕತೆ ಇರುವದು. ದಕ್ಷಿಣ ಕಾನಡಾಜಿಲ್ಹೆಯೊಳಗಿನ ಹಾಗೂ ಉತ್ತರಕಾನಡಾಜಿಲ್ಹೆಯೊಳಗಿನ ಘಟ್ಟದ ಕೆಳಗಿನ ತಾಲೂಕುಗಳೊಳಗಿಂದ ಸಾವಿರಾರು ಕೂಲಿಜನರು ಈ ತೋಟಗಳಲ್ಲಿ ದುಡಿದು ಕಡಿಮೆಯೆಂದರೂ, 6 ತಿಂಗಳ ನಿರ್ವಾಹವನ್ನು ಸಾಗಿಸುವರು. ಇದಲ್ಲದೆ ಈ ಬೆಳೆಗಳ ವ್ಯಾಪಾರದಲ್ಲಿ ತೊಡಗಿದಂಥ ಅನೇಕರ ಸಂಸಾರವು ಸಾಗುವದು. ಈ ತೋಟಗಳ ಮಹತ್ವವು ಇಷ್ಟಿರುವಾಗ ಇವುಗಳಿಗೆ ಭಂಗಾರದ ಖಣಿಗಳೆಂದು ಕರೆದರೆ ಅತಿಶಯೋಕ್ತಿಯಾಗಲಾರದಾಗಿ ತೋರುತ್ತದೆ.

ಅಡಿಕೇ ತೋಟಗಳ ಸಾಗುವಳಿಯು ಬಹುತೇಕವಾಗಿ ಹವೀಕ ಬ್ರಾಹ್ಮಣರ ಕೈಯಲ್ಲಿರುವದು. ಇತ್ತೀಚಿಗೆ ಬೇರೆ ಸಮಾಜದ ಜನರು ಸಹ ಈ ಕೆಲಸ ಕೈಕೊಳ್ಳಹತ್ತಿದ್ದಾರೆ ಅಂಥವರ ಸಂಖ್ಯೆಯು ತೀರ ಕಡಿಮೆಯಾಗಿರುವದು. ತೋಟಗಳ ಪರಿಸ್ಥಿತಿಯ ವಿಚಾರ ಮಾಡಿದಲ್ಲಿ ಹವೀಕ ಬ್ರಾಹ್ಮಣರ ಬೇಸಾಯ ಕುಶಲತೆಯೂ, ಅವರ ಧೈರ್ಯವೂ ಕಂಡುಬರುವದು. ತೋಟಗಳಿಗೆ ಅನುಕೂಲವಾದ ಪರಿಸ್ಥಿತಿಗಳು ಗುಡ್ಡಗಾಡುಗಳ ಕಂದರಗಳಲ್ಲಿಯೇ ವಿಪುಲವಾಗಿರುವವು. ಸುತ್ತುಮುತ್ತಲು ನಿಬಿಡವಾದ ಅಡವಿ ಇರುವಂಥ ಮತ್ತು ಸುಲಭವಾದ ರಹದಾರಿ ಇಲ್ಲದ ಠಾವಿಗೆ ಹೋಗಿ ಅಲ್ಲಿ ವಾಸ್ತವ್ಯಮಾಡಿ ತೋಟಗಳನ್ನು ಸ್ಥಾಪಿಸಿದ ಮೂಲಪುರುಷರನ್ನು ಎಷ್ಟು ಕೊಂಡಾಡಿದಷ್ಟು ಕಡಿಮೆಯೇ ಸರಿ. ಅವರು ನಿರ್ಜನವಾದ ಗುಡ್ಡಗಾಡಿನೊಳಗೆ ಭಂಗಾರದ ಖಣಿಗಳನ್ನೇ ಹುಡುಕಿ ತೆಗೆದರೆಂದು ಹೇಳಬಹುದು.

ಈ ತೋಟಗಳ ಸಾಗುವಳಿಯಲ್ಲಿ ಅನೇಕ ಮಹತ್ವದ ಸಂಗತಿಗಳು ಲಕ್ಷದಲ್ಲಿಡುವಂಥವು ಇರುವವು ಕಾಲಕಾಲಕ್ಕೆ ಮಾಡತಕ್ಕ ಕೆಲಸಗಳನ್ನು ಮಾಡಿಯೇ ತೀರಬೇಕಾಗುವದು. ಒಂದು ವರ್ಷ ಈ ಕೆಲಸ ಮಾಡುವದರಲ್ಲಿ ತಪ್ಪಿದರೆ ಅದರ ಪರಿಣಾಮವು ಮುಂದಿನ ವರ್ಷದ ಬೆಳೆಯಮೇಲೆ ಕಂಡುಬಂದೇ ಬರುವದು. ವರ್ಷಕ್ಕೊಮ್ಮೆ ಇಲ್ಲವೇ ಎರಡುವರ್ಷಕ್ಕೊಮ್ಮೆ ಗೊಬ್ಬರ ಹಾಕುವದು, ತೋಟಗಳನ್ನು ಸೊಪ್ಪಿನಿಂದ ಮುಚ್ಚುವದು, ಕಳೆ ಹುಲ್ಲು ಕಿತ್ತಿ ತೆಗೆಯುವದು., ಕಾಲಿವೆಗಳನ್ನು ದುರುಸ್ತಿ ಮಾಡುವದು, ಐದು ವರ್ಷಕ್ಕೊಮ್ಮೆ ಹೊಸ ಮಣ್ಣು ಹಾಕುವದು. ಇತ್ಯಾದಿ ಕೆಲಸಗಳು ಮಹತ್ವದವು ಇರುವವು. ಈ ಎಲ್ಲ ಕೆಲಸಗಳಿಗಿಂತಲೂ ಹೆಚ್ಚಿಗೆ ಮಹತ್ವವಾದದ್ದೆಂದರೆ ಅಡಿಕೆಗೆ ಮಳೆಗಾಲದಲ್ಲಿ ಬರುವ ಕೊಳೆರೋಗ ಪ್ರತಿಬಂಧಕ ಉಪಚಾರವು. ಇದು ಒಂದು ಸಾಂಸರ್ಗಿಕ ರೋಗ ಇರುವದರಿಂದ ಇದರ ಪ್ರತಿಬಂಧಕ ಉಪಾಯಗಳನ್ನು ತಕ್ಕ ಕಾಲದಲ್ಲಿಯೇ ಮಾಡದಿದ್ದರೆ ಬೆಳೆಯು ನಾಶವಾಗುವದಲ್ಲದೆ ಬಹಳ ವರ್ಷಗಳವರೆಗೆ ಫಲ ಕೊಡಬಹುದಾದ ಮರಗಳು ಈ ರೋಗದ ತುತ್ತಾಗುವವು. ಹೊಸ ಸಸಿಗಳನ್ನು ಹಚ್ಚಿ ಫಲ ಬರುವದಕ್ಕೆ ಕಡಿಮೆಯೆಂದರೂ ಹತ್ತು ವರ್ಷಗಳು ಬೇಕಾಗುವವು. ವಾರ್ಷಿಕ ಕಾರ್ಯಕ್ರಮದಂತೆ ಎಲ್ಲಾ ಸಾಗುವಳಿಯನ್ನು ಸರಿಯಾಗಿ ಮಾಡಿ, ಕೊಳೆ ರೋಗದ ಪ್ರತಿಬಂಧಕ ಉಪಾಯವನ್ನು ಕೈಕೊಳ್ಳದಿದ್ದರೆ ಎಷ್ಟು ಅನಿಷ್ಟ ಪರಿಣಾಮವಾಗುತ್ತದೆ ಎಂಬದನ್ನು ತೋಟಿಗರೇ ಹೇಳಬಲ್ಲರು.

ಮೇಲೆ ಹೇಳಿದಂತೆ ಬಹುತೇಕ ತೋಟಿಗರ ನಿರ್ವಾಹವು ತೋಟದ ಉತ್ಪನ್ನದಿಂದಲೇ ಸಾಗಬೇಕಾಗುವದು. ಈ ತೋಟಗಳ ಉರ್ಜಿತಾವಸ್ಥೆಯೇ ತೋಟಿಗರ ಅಭ್ಯುದಯದ ಮೂಲಾಧಾರವಾಗಿರುವದು. ಇವುಗಳ ಅವನತಿಯೆಂದರೆ ತೋಟಿಗರ ಅವನತಿ ಇಷ್ಟೇಯಲ್ಲ ತೋಟದ ಸಾಗುವಳಿ ಮತ್ತು ಬೆಳೆಗಳ ವ್ಯಾಪಾರ ಇತ್ಯಾದಿಗಳಮೇಲೆ ಅವಲಂಬಿಸಿರುವವರಿಗೂ ಈ ಅವನತಿಯ ಅನಿಷ್ಟ ಪರಿಣಾಮವು ಸೋಂಕುವದು.

ಕಾನಡಾ ಜಿಲ್ಲೆಯ ಆರ್ಥಿಕ ಅವನತಿಗೂ ಇದೇ ಕಾರಣವಾಗಿರುವದು. ಇಂಥ ಮಹತ್ವವಾದ ತೋಟಗಳ ಅಭ್ಯುದಯದ ಬಗ್ಗೆ ಅವುಗಳ ಸಾಗುವಳಿ ಮಾಡುವವರ ಅಭ್ಯುದಯದ ಬಗ್ಗೆ ಜಿಲ್ಲೆಯೊಳಗಿನ ಮುಖಂಡರ ಲಕ್ಷವು ಇರತಕ್ಕದ್ದು ಎಂಬುದನ್ನು ಹೇಳುವ ಕಾರಣವಿಲ್ಲ. ಆದರೆ ಇಂಥ ಮಹತ್ವವಾದ ಉದ್ಯೋಗವು ಅನೇಕ ಕಾರಣಗಳಿಂದ ಕಳೆಗುಂದುತ್ತದೆ. ತೋಟಿಗರ ಆರ್ಥಿಕ ಸ್ಥಿತಿಯು, ಸಾವಕಾರಿಕ ಪದ್ಧತಿ ಕೋರ್ಟು ಕಚೇರಿಗಳಲ್ಲಿ ವ್ಯವಹಾರ ಮತ್ತು ಇತರೇ ಕಾರಣಗಳ ಮೂಲಕ ಕೆಡುತ್ತಲಿದೆ. ಸಾಲವು ಭಾರವಾಗಿದೆ. ತೋಟಿಗರ ಜಮೀನು ಸಾವುಕಾರರ ಕಡೆಗೆ ಹೋಗಿ ಮಾಲಿಕರು ಒಕ್ಕಲುಗಳಾಗುತ್ತಿರುವರು. ನಾಲ್ಕೈದು ವರ್ಷಗಳ ಹಿಂದೆ ಶಿರಶಿ ತಾಲೂಕಿನೊಳಗಿನ ತೋಟಿಗರಲ್ಲಿ ಸಾಲ ಎಷ್ಟಿರಬಹುದೆಂದು ವಿಚಾರಿಸಿದ್ದಲ್ಲಿ ಸರಕಾರಿ ರಿಕಾರ್ಡುಗಳ ಮೇಲಿಂದಲೇ ಅಜಮಾಸ ಏಳು ಲಕ್ಷ ರೂಪಾಯಿ ಇರಬಹುದೆಂತ ಕಂಡುಬಂದಿದೆ. ಇದಲ್ಲದೆ ಪ್ರಾಮಿಸರಿನೋಟು, ಕೈಗಡ, ಉದ್ರಿ, ಇತ್ಯಾದಿಗಳ ರಕಂಗಳನ್ನು ಕೂಡಿಸಿದರೆ ಅಂತು ಸಾಲದ ರಕಂ ಹತ್ತು ಲಕ್ಷಕ್ಕಿಂತಲೂ ಕಡಿಮೆಯಾಗಲಿಕ್ಕಿಲ್ಲ. ಸದ್ಯಕ್ಕೆ ಈ ರಕಂ ಅದಕ್ಕೂ ಮಿಕ್ಕಿರಬಹುದು. ಸಾಲವು ಹತ್ತು ಲಕ್ಷವೇ ಎಂದು ಎಣಿಸಿದರೂ ಹತ್ತು ಸಾವಿರ ಎಕ್ರೆ ತೋಟಗಳ ಮೇಲೆ ಇದರ ಭಾರವೆಂದರೆ ಪ್ರತಿ ಒಂದು ಎಕ್ರೆ ಮೇಲೆ ಸರಾಸರಿ ನೂರು ರೂಪಾಯಿಗಳ ಸಾಲದ ಭಾರವನು ಹೇರಿದಂತಾಗುತ್ತದೆ. ಅಂದರೆ ಒಂದು ಎಕ್ರೆ ಮೇಲೆ ಬಡ್ಡಿ ರೂಪದಿಂದ ಹತ್ತರಿಂದ ಹನ್ನೆರಡುವರೇ ರೂಪಾಯಿ ಕರಭಾರವನ್ನು ತೋಟಿಗರು ತಮ್ಮ ಅದೂರದರ್ಶಿತ್ವದಿಂದ ತಾವೇ ಹೇರಿಕೊಂಡಿರುವರು. ಎಂತಾ ಹೇಳಬಹುದು. **ಈ ಕರಭಾರವು ಸರಕಾರೀ ತೆರಿಗೆಯಷ್ಟರವಟ್ಟಿಗೆ ಪ್ರತಿಒಂದು ಎಕ್ರೆಮೇಲೆ ಹೇರಿದಂತಾಯಿತು.** ಸರಕಾರಿ ತೆರಿಗೆ ಕೊಡುವದರಿಂದ ಜಮೀನು ಮಾಲಿಕರ ತಾಬೆಯಲ್ಲಿದ್ದು ಅದರಿಂದ ಉತ್ಪನ್ನ ಪಡೆಯ ಬರುತ್ತದೆ. ಆದರೆ ಸಾಲದ ಮೇಲಿನ ಬಡ್ಡಿಯ ವಿಷಯವು ಹಾಗಲ್ಲ. ಸಾಲದ ರಕಂ ಬಹುತೇಕವಾಗಿ ಅನುತ್ಪಾದಕ ಕೆಲಸಕ್ಕೆ ತಗೊಂಡದಿದ್ದು, ಅದರಿಂದ ಪ್ರತಿಫಲವು ಸಿಗದೆ ವಾರ್ಷಿಕ ಉತ್ಪನ್ನದ ಕೆಲವು ಅಂಶವನ್ನು ಅಪಹರಿಸಿ ಆರ್ಥಿಕ ಅವನತಿಗೆ ಕಾರಣವಾಗುವದು. ಇದರ ಪರಿಣಾಮವು ತೋಟಗಳ ಸಾಗುವಳಿಯಮೇಲೂ, ಕಂಡುಬರುವದು. ತಕ್ಕ ಕಾಲದಲ್ಲಿ ಕೆಲಸ ಮಾಡಿಸಿಕೊಳ್ಳುವದಕ್ಕೆ ಭಾಂಡವಲ್ಲು ಇರದ ಮೂಲಕ ಅವು ಸರಿಯಾಗಿ ಸಾಗವು ಆದರಿಂದ ಬೆಳೆಗಳ ಪ್ರಮಾಣವು ಕಡಿಮೆಯಾಗಹತ್ತುವದು.

ತೋಟದ ಸಾಗುವಳಿಗೆ ಕೂಲಿಜನರು ಬಹಳ ಬೇಕಾಗುವರು ಯಾವ ತೋಟಿಗರು ತಮ್ಮ ತೋಟದ ಸಾಗುವಳಿಯನ್ನು ತಾವೇ ಮಾಡುತ್ತಿರುವರೋ ಅವರ ಆರ್ಥಿಕ ಸ್ಥಿತಿಯು ಸಾಧಾರಣ ಮಟ್ಟಿಗೆ ಸರಿಯಾಗಿರುವದು. ಪರಾವಲಂಬಿಯಾಗಿರುವವರಿಗೆ ಸಿಗುವ ಉತ್ಪನ್ನದೊಳಗಿನ ಬಹುದೊಡ್ಡ ಭಾಗವನ್ನು ಕೂಲಿ ಜನರಿಗೆ ಕೊಡಬೇಕಾಗುವದು ಅಂದರೆ ತೋಟಿಗರಿಗೆ ಸಿಗುವ ಉತ್ಪನ್ನವು ಕಡಿಮೆಯಾಗುವದು. ಇತ್ತೀಚೆಗೆ ಪರಾವಲಂಬಿತನವೇ ಹಬ್ಬುತ್ತಿರುವದು ಕಂಡುಬರುತ್ತದೆ. ಮನೆಯ ಜನರು ನಿರುದ್ಯೋಗದಿಂದ ಇದ್ದರೂ ಅವರ ಸಂಸಾರದ ಖರ್ಚು ಸಾಗಲೇಬೇಕಾಗುವದು. ಮೇಲಾಗಿ ತೋಟದ ಕಷ್ಟಕ್ಕೆ ಕೂಲಿ ಜನರಿಗೆ ಮಜೂರಿ ಕೊಡಬೇಕಾಗುವದು. ಹೀಗೆ ತೋಟಿಗರು ಇಕ್ಕಟ್ಟಿನಲ್ಲಿ ಸಿಲುಕಿ ಆರ್ಥಿಕ ಅವನತಿಯನ್ನು ಹೊಂದುವರು. ಅದಲ್ಲದೆ, ಇತ್ತೀಚೆಗೆ ಸುಧಾರಣಾಯುಗದ ಪರಿಣಾಮವು ಹಳ್ಳಿಪಳ್ಳಿಗಳಲ್ಲಿ ಸೇರಹತ್ತಿ ನವನಾಗರಿಕತೆಯು ಬಹಳ ಪ್ರಕಾರಗಳು ನಿತ್ಯ ಜೀವನಕ್ರಮದಲ್ಲಿ ಸೇರಿ ಹೋಗಿರುವವು. ಇದರಿಂದ ಉತ್ಪನ್ನದ ನಾಶವು ಕುಗ್ಗಿ ಖ

ರ್ಚು ಬೆಳೆದು ವಾರ್ಷಿಕ ಜಮಾಖರ್ಚು ಬಾಯಿಗೂಡಿಸುವದು ಎಷ್ಟೋ ಕುಟುಂಬಗಳಿಗೆ ಕಷ್ಟಮಯವಾಗಿದೆ. ಅವನತಿಗೆ ಅನುಕೂಲ ಇರುವಂಥ ವಿಷಯಗಳು ಬೆಳೆಯುತ್ತಲೇ ಇವೆ. ಇದರಿಂದ ತೋಟದ ಸಾಗುವಳಿ ಧಂದೆಯು ಪ್ರಗತಿಯನ್ನು ಹೊಂದುವದರ ಬದಲು ಅವನತಿಯನ್ನು ಹೊಂದುತ್ತಲಿದೆ. ಇದನ್ನು ತೋಟಿಗರೇ ಆತ್ಮಶೋಧನೆಯನ್ನು ಮಾಡಿಕೊಂಡರೆ ಮನಗಾಣುವರು.

ತೋಟಿಗರ ಹಾಗೂ ತೋಟಗಳ ಪರಿಸ್ಥಿತಿಯು ಇಳಿಜಾರಿನಲ್ಲಿರುವಾಗಲೇ ಕರನಿರಾಕರಣೆಯ ಬಿರುಗಾಳಿಗೆ ಶಿರ್ಶಿ ಸಿದ್ದಾಪೂರ ತಾಲೂಕ ಅಜ್ಞ ರೈತರು ಬಲಿ ಬಿದ್ದಿರುತ್ತಾರೆ. ಇದರಿಂದ ಅನಿಷ್ಟ ಪರಿಣಾಮಗಳೇ ಸಾಗುವವು ಎಂಬದನ್ನು ಇದನ್ನು ಕೈಕೊಂಡವರೂ, ಕೈಕೊಳ್ಳುವದಕ್ಕೆ ಉತ್ತೇಜನ ಕೊಟ್ಟವರೂ, ಪೂರ್ಣವಾಗಿ ವಿಚಾರ ಮಾಡಲಿಲ್ಲವಾಗಿ ಸ್ಪಷ್ಟ ತೋರುತ್ತದೆ. ಕರನಿರಾಕರಣೆಯನ್ನು ಕೈಕೊಂಡವರಿಗಿಂತಲೂ, ಅದಕ್ಕೆ ಕಣ್ಣುಮುಚ್ಚಿ ಉತ್ತೇಜನ ಕೊಟ್ಟ ಬಂಟರಮೇಲೆ ಬಹುದೊಡ್ಡ ಜವಾಬದಾರಿ ಇರುತ್ತದೆ. ತೋಟಿಗರಲ್ಲಿ ಅನೇಕರು ಅಶಿಕ್ಷಿತರಿರುವರು ಅವರು ಶಿಕ್ಷಿತರಾಗಿದ್ದು ಜಗತ್ತಿನ ವ್ಯವಹಾರವನ್ನು ತಿಳಿಕೊಂಡು ತಮ್ಮ ವಿಚಾರವನ್ನೇ ಉಪಯೋಗಿಸುವಷ್ಟು ಶಕ್ತಿ ಅವರಿಗಿದ್ದದ್ದಾಗಿದ್ದರೆ ಕರನಿರಾಕರಣೆಯಂಥ ಘಾತಕ ಕಾರ್ಯಕ್ರಮವನ್ನು ಕೈಕೊಳ್ಳುವದರಲ್ಲಿ ಎಂದೂ ಮುಂದಾಗುತ್ತಿರಲಿಲ್ಲವಾಗಿ ಹೇಳಬಹುದು. ಇಂಥವರನ್ನು ಪ್ರೇರೇಪಿಸುವದು ಬಹು ದೊಡ್ಡ ತಪ್ಪು, ಮಹಾಪಾಪ. ಈ ವಿಷಯದಲ್ಲಿ ಉತ್ತೇಜನ ಕೊಡುವವರಿಗೆ ತೋಟದ ಮಹತ್ವ, ತೋಟದ ಸಾಗುವಳಿಯ ಮಹತ್ವ ಇತ್ಯಾದಿಗಳು ಎಳ್ಳಷ್ಟಾದರೂ ತಿಳಿದಿಲ್ಲವಾಗಿ ಹೇಳಲಿಕ್ಕೆ ಏನೂ ಅಡ್ಡಿ ಇಲ್ಲ. ಮುಂದಿನ ಪರಿಣಾಮದ ಚಿತ್ರವನ್ನು ತೋಟಿಗರಮುಂದೆ ಸರಿಯಾಗಿ ಇಟ್ಟಿದ್ದರೆ ಅವರು ಈ ಕ್ರಮವನ್ನು ಎಂದೂ ಕೈಕೊಳ್ಳುತ್ತಿಲ್ಲವೆಂದು ನಿಶ್ಚಿತವಾಗಿ ಹೇಳಬಹುದು. ತೋಟಗಳ ಪುನರುಜ್ಜೀವನವು ಒಂದೇ ಒಂದು ವರ್ಷದ ಕ್ರಮದಿಂದ ಇಲ್ಲವೆ ಒಮ್ಮೆಗೆ ಬಹಳ ಭಾಂಡವಲು ಹಾಕುವದರಿಂದ ಆಗುವಂತೆ ಇಲ್ಲ. ಒಂದೇ ವರ್ಷದ ಅನಿಷ್ಟ ಪರಿಣಾಮವನ್ನು ಮೂರು ವರ್ಷಗಳಿಂದ ಹತ್ತು ವರ್ಷಗಳ ತನಕ ಅನುಭವಿಸಬೇಕಾಗುವದು ಎಂದು ಮೇಲೆ ಹೇಳಿಯದೆ. ಸರಕಾರಿ ತೆರಿಗೆ ಕೊಡದಿದ್ದಲ್ಲಿ ಜಮೀನು ಸರಕಾರ ಜಮಾ ಆಗುವ ಕಾಯಿದೆ ಇದ್ದೇ ಇರುವದು. ಒಂದು ಎಕ್ರೆ ಬಾಗಾಯತು ಸರಕಾರ ಜಮಾ ಆಗಿಹೋದಲ್ಲಿ ಮಾಲಿಕರಿಗೆ ಸಿಗುವ ಉತ್ಪನ್ನವು ಹೋಗಿ ಅವರ ಭಾಂಡವಲ ಎಷ್ಟರಮಟ್ಟಿಗೆ ನಷ್ಟವಾಯಿತೆಂದು ಹೇಳುವದು ಕಷ್ಟವು. ಯಾಕೆಂದರೆ ಹೊಸದಾಗಿ ತೋಟವನ್ನು ತಯಾರಿಸಿ ಫಲ ಬರುವದಕ್ಕೆ ಹತ್ತು ವರ್ಷಗಳು ಬೇಕು. ಇದಕ್ಕೆ ಎಷ್ಟು ಭಾಂಡವಲ ಬೇಕೆಂಬದು ತೋಟಿಗರೇ ಹೇಳಬಲ್ಲರು. ಇನ್ನಿತರರಿಂದ ಆಗದು, ಪರಂಪರಾಗತವಾದ, ಫಲದ್ರೂಪಿಯಾದ ಕಷ್ಟ ಸಸ್ಯಗಳನ್ನು ಸಹಿಸಿ ಸಾಕಿ ಸಲುಹಿದ ಒಂದು ಎಕ್ರೆ ತೋಟದಿಂದ ಅಗಲುವದೆಂದರೆ ಎಷ್ಟರಮಟ್ಟಿಗೆ ಹಾನಿಯಾಗುವದೆಂಬದರ ಕಲ್ಪನೆಯನ್ನು ತೋಟಿಗರು ಗಮನಕ್ಕೆ ತಂದಿರುವರೋ? ಜಮೀನಿಯಿಂದ ದೂರವಾದರೆ ಜೀವನದ ಮುಖ್ಯ ಆಧಾರವು ಇಲ್ಲದಂತೆಯಾಗುವದೆಂದು ವಿಚಾರ ಮಾಡಿರುವರೋ? ಮುಂದಿನ ಪರಿಸ್ಥಿತಿಯು ಕತ್ತಲೆಯಲ್ಲಿ ಮುಸಕಿರುವಾಗ ಭ್ರಾಮಕ ಮತ್ತು ಕಾಲ್ಪನಿಕ ವಿಚಾರಗಳಿಂದ ಪ್ರೇರಿತರಾಗಿ, ಇಸಾಪನೀತಿಯೊಳಗಿನ ಶೇಕಮಹಮ್ಮದನ ವಿಚಾರಗಳಂತೆ ಮುಂದೆ ಎಲ್ಲ ಸಂಗತಿಗಳು ಸುಖಕರವಾಗುವವೆಂದು ಎಣಿಸಿ ತೋಟಿಗರು ಕರನಿರಾಕರಣೆಯ ಮಾರ್ಗವನ್ನು ಅನುಸರಿಸುವದೆಂದರೆ ಆತ್ಮಹತ್ಯವನ್ನು ಮಾಡಿಕೊಂಡತೆಯೇ ಸರಿ. ಕಳೆದ

ವರ್ಷದಿಂದ ಕರನಿರಾಕರಣೆ ಎಂಬ ಶಬ್ದವು ವಾತಾವರಣವನ್ನು ತುಂಬಿದ್ದರಿಂದ ಶಿರ್ಸಿ ಸಿದ್ದಾಪುರ ತಾಲೂಕಗಳ ತೋಟಿಗರ ಮನಸ್ಸು ಅಲ್ಲೋಲಕಲ್ಲೋಲವಾಗಿ ತೋಟದ ಸಾಗುವಳಿ ಕಡೆಗೆ ದುರ್ಲಕ್ಷವಾಗಿದೆ. ಚಾಲು ಸಾಲಿನಲ್ಲಂತೂ ಅದು ಪ್ರತ್ಯಕ್ಷ ಅಮಲಿನಲ್ಲಿ ಬಂದಿರುತ್ತದೆ. ಕಳೆದ ವರ್ಷದಲ್ಲಿ ಕೊಳೆರೋಗವು ಹೆಚ್ಚಾಗಿ ಬೆಳೆಯು ನಾಶವಾಯಿತೆಂದು ಮರುಗುತ್ತಿರುವರು. ಈಗಿನ ಹಂಗಾಮಿನಲ್ಲಿ ಕರನಿರಾಕರಣೆಯಲ್ಲಿ ತೊಡಗಿ ಕೊಳೆರೋಗ ಪ್ರತಿಬಂಧಕ ಉಪಾಯಗಳನ್ನು ಕೈಕೊಳ್ಳದಿದ್ದರೆ ಮುಂದಿನ ಬೆಳೆಗೂ ತಿಲಾಂಜಲಿ ಕೊಡಬೇಕಾಗುವದು. ಅಂದಮೇಲೆ ತೀವ್ರ ನಿರಾಕರಣೆ ಮಾಡಿದರೆ ಕಷ್ಟಗಳು ದೂರಾಗುವವೋ ಅಥವಾ ಕಷ್ಟ ಪರಂಪರೆ ಹೆಚ್ಚಾಗುವದೋ ಎಂಬದನ್ನು ತೋಟಿಗರೇ ಚನ್ನಾಗಿ ವಿಚಾರ ಮಾಡುವಂಥ ಸಂಗತಿಯಾಗಿದೆ. ಕರನಿರಾಕರಣ ಮಾಡುವದೆಂದರೆ ಬಂಗಾರದ ತತ್ತಿಗಳನ್ನು ಇಡುವ ಹಂಸಪಕ್ಷಿಯನ್ನು ಕೊಂದಂಥ ಗತಿಯಾಗುವದು. ರಾಷ್ಟ್ರಘಾತಕ ಕರನಿರಾಕರಣೆಯನ್ನು ಉಪದೇಶ ಮಾಡುವವರಿಗೆ ಈ ತರದ ಕಷ್ಟ ನಷ್ಟಗಳು ಯಾವವೂ ತಗಲುವಂತೆ ಇಲ್ಲ ಇದು ರೈತರಿಗೆ ಪೂರ್ಣ ವಿಚಾರ ಅರ್ಹವಾದ ಸಂಗತಿಯಾಗಿದೆ.

ಕರನಿರಾಕರಣೆಗೆ ಮುಂದೊಡ್ಡಲಿಕ್ಕೆ ಹಚ್ಚಿದ ಕಾರಣವೆಂದರೆ ಅಡಿಕೆಯ ಧಾರಣೆಯು ಇಳಿದದ್ದು ಮತ್ತು ಕೊಳೆರೋಗದಿಂದ ಬೆಳೆ ನಾಶವಾದದ್ದು. ಮಹಾಯುದ್ಧದ ವೇಳೆಗೆ ಹಾಗೂ ಅದರನಂತರ ಕೆಲವು ವರ್ಷಗಳತನಕ ಎಲ್ಲಾ ಸರಕುಗಳ ಧಾರಣೆಯು ಉಕ್ಕೇರಿತು. ಇದು ಕೃತ್ರಿಮ ಕಾರಣದ ಮೂಲಕ ಏರಿದ್ದರಿಂದ ಎಂದಾದರೂ ಮೊದಲಿನ ಅಳತೆಗೆ ಬರುವವರೆಗೆ ಕಡಿಮೆಯಾಗುವದೇ ಇತ್ತು. ಆದರೆ ಅದು ಎಲ್ಲರೂ ಸ್ವಪ್ನಾವಸ್ಥೆಯಲ್ಲಿರುವಾಗಲೇ ಒಮ್ಮಿಂದೊಮ್ಮೆ ಕೆಳಗೆ ಇಳಿಯಿತು. ಇದು ನಮ್ಮ ಜಿಲ್ಲೆಯಷ್ಟರಮಟ್ಟಿಗೇನೇ ಸಂಬಂಧಿಸಿದ್ದಿರುವದಿಲ್ಲ. ಇಡಿ ಜಗತ್ತಿಗೂ ಇದರ ಪರಿಣಾಮವಾಗಿರುವದು. ದರಗಳು ಉಕ್ಕೇರಿದಾಗ ಹಣಕ್ಕೆ ಬೆಲೆಯೇ ಇರಲಿಲ್ಲದಂತಾಯಿತು. ಖರ್ಚು ಹೆಚ್ಚಾಯಿತು. ಆಡಂಬರವು ಬೆಳೆಯಿತು. ಮತ್ತು ಅದು ಮೈಯುಂಡಿತು. ಜಮೀನಿಯ ದರವು ಏರಿತು. ಸಾಲವು ಸುಲಭವಾಗಿ ಸಿಗಹತ್ತಿತು. ಆ ಕಾಲದಲ್ಲಿಯೇ ಅಡಿಕೆ, ಮೆಣಸು, ಏಲಕ್ಕಿ ದರಗಳು ಏರಿದವು ಅದರ ಲಾಭವನ್ನು ಪಡೆದು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡವರ ಸಂಖ್ಯೆಯು ಎಷ್ಟಿರಬಹುದು ಎಂಬದನ್ನು ಯಾರಾದರು ಹೇಳಬಲ್ಲರೋ? ದರಗಳ ಏರಿಕೆಯಿಂದ ತೋಟಿಗರಿಗೆ ಹೆಚ್ಚಾಗಿ ಲಾಭವಾಗಲಿಲ್ಲವಾಗಿ ಹೇಳಬಹುದು. ಯಾಕೆಂದರೆ ತೋಟಗಳ ಬೆಳೆಗಳ ಧಾರಣೆಯು ಏರಿದಂತೆ ತೋಟಿಗರು ಕೊಂಡುಕೊಳ್ಳತಕ್ಕ ಮಾಲುಗಳಮೇಲಿನ ದರವೂ ಏರಿತು. ಕೂಲಿ ದರವೂ ಏರಿತು. ನವ ನಾಗರಿಕತೆಯ ಸುಧಾರಣೆಗಳೂ ಹೆಚ್ಚಾದವು. ಅಳಿಸಿಪಣವು ಬೆಳೆಯಿತು. ಏರಿಕೆದರದಿಂದ ಆದ ಲಾಭ ಹಣನಂತರು ಕೂಡಿಸಿ ಇಡಲಿಲ್ಲ. ಈಗಿನ ಧಾರಣೆಗಳಾದರೂ ಯುದ್ಧದ ಪೂರ್ವದಲ್ಲಿರುವ ಪ್ರಮಾಣಕ್ಕೇನೆ ಮುಟ್ಟಿವೆ. ಅಡಿಕೆಯೊಂದರ ಧಾರಣೆಯೇ ಕಡಿಮೆಯಾಗಿ ಅವರು ಕೊಂಡುಕೊಳ್ಳತಕ್ಕ ಜೀನಸುಗಳ ಧಾರಣೆಯು ಏರಿಕೊಂಡೇ ಇದ್ದಿದ್ದರೆ, ತೋಟಿಗರ ಕಷ್ಟವು ವರ್ಣಿಸಲು ಅಸಾಧ್ಯವಾಗುತ್ತಿತ್ತು. ಯುದ್ಧದ ಪೂರ್ವದಲ್ಲಿ ಕಡಿಮೆ ದರ ಇರುವಾಗ ನಿರ್ವಾಹವು ಹ್ಯಾಗೆ ಸಾಗುತ್ತಿತ್ತು ಎಂಬದು ಮಹತ್ವವಾದ ಪ್ರಶ್ನೆಯಾಗಿದೆ. ಮಧ್ಯದ ಕಾಲದ ಪರಿಸ್ಥಿತಿಯು ಬದಲಾಗಿರುವದರಿಂದ ಮುಂದಿನ ಧೋರಣವನ್ನು ನಿಶ್ಚೈಸಿ ಅದರಂತೆ ಕಾರ್ಯಕ್ರಮವನ್ನು ಕೈಕೊಳ್ಳುವದರ ಬದಲು ಕರ

ನಿರಾಕರಣೆ ಎಂಬ ಆತ್ಮಘಾತಕ ಕೊಡಲಿಯನ್ನು ತಮ್ಮ ಹೇಮಗರ್ಭಿತ ತೋಟಗಳಮೇಲೆ ಎತ್ತುವದು ಸಮಂಜಸವೆಂದೂ ಆಗಲಾರದು.

ಕರನಿರಾಕರಣೆಗೆ ಇನ್ನೊಂದು ನೆವವೆಂದರೆ ಕಳೆದ ವರ್ಷ ಮಳೆಯು ಹೆಚ್ಚಾಗಿ ಕೊಳೆ ರೋಗದಿಂದ ಬೆಳೆಗಳು ನಾಶವಾದವೆಂಬುದು. ಕೊಳೆ ರೋಗದಿಂದ ಅಡಿಕೆ ಬೆಳೆಗೆ ಬಹಳಷ್ಟು ಹಾನಿಯಾಗುವದೆಂಬುದು ನಿಃಸಂದೇಹವಾದದ್ದು. ಇದರ ನಿವಾರಣಕ್ಕಾಗಿ ತೋಟಿಗರು ಕೊಟ್ಟೆಗಳನ್ನು ಉಪಯೋಗಿಸುವರು. ಆದರೆ ಇದು ಪೂರ್ಣ ಫಲಕಾರಿಯಾದದ್ದಲ್ಲ. ಕೊಟ್ಟೆ ಕಟ್ಟಿದರೂ ಸಹಾ ಕೊಳೆಯಿಂದ ಎಂಟರಿಂದ ನಾಲ್ಕು ಆಣೆಯು ಬೆಳೆ ನಾಶವಾಗುತ್ತಿರುವದು. ಅಂದರೆ ಎಕ್ರೆ ಒಂದಕ್ಕೆ ಇಪ್ಪತ್ತೈದರಿಂದ ಐವತ್ತು ರೂಪಾಯು ವರೇಗೆ ಈ ರೋಗದಿಂದ ಹಾನಿ ತಟ್ಟುವದು. ಇಡೀ ಜಿಲ್ಹೆಯಲ್ಲಿ ಹತ್ತು ಲಕ್ಷಕ್ಕೂ ಮೀರಿ ಬೆಲೆ ಬಾಳುವ ಬೆಳೆಯು ಪ್ರತಿವರ್ಷವೂ ಈ ರೋಗದ ತುತ್ತಾಗುವದು. ಕರನಿರಾಕರಣೆಯಂಥ ಘಾತಕ ಉದ್ಯೋಗ ಬಿಟ್ಟು ಈ ರೋಗವನ್ನು ಸಮೂಲ ನಾಶ ಮಾಡುವಲ್ಲಿ ಶ್ರಮ ತಕ್ಕೊಂಡರೆ ಸರಕಾರಕ್ಕೆ ಕೊಡತಕ್ಕ ತೆರಿಗೆಯು ಎಷ್ಟು ಪಟ್ಟು ಲಾಭ ದೊರೆಯುವದೆಂಬದನ್ನು ಸ್ಪಷ್ಟೀಕರಿಸುವ ಅವಶ್ಯಕತೆಯೇ ಇಲ್ಲ. ಅದನ್ನು ದೂರ ಪಡಿಸುವದಕ್ಕೆ ವ್ಯವಸಾಯ ಖಾತೆಯವರು ಪುಷ್ಕಳ ಪ್ರಯತ್ನದಿಂದ ಔಷದವನ್ನು ಹುಡುಕಿ ಅದನ್ನು ರೈತರ ಹಿತದ ಸಲುವಾಗಿ ಪ್ರಚಾರದಲ್ಲಿ ತರಲಿಕ್ಕೆ ಹತ್ತು ಹನ್ನೆರಡು ವರ್ಷಗಳಿಂದಲೂ ಹೋರಾಡುತ್ತಿರುವರು. ಆದರೆ ಅದನ್ನು ತೋಟಿಗರು ಕೈಕೊಂಡು ತಮಗಾಗುವ ಲುಕ್ಸಾನನ್ನು ತಪ್ಪಿಸಿಕೊಳ್ಳಲಿಕ್ಕೆ ಇನ್ನೂ ಸರಿಯಾಗಿ ಮುಂದರಿಸಿಲ್ಲ. ಇದು ನಮ್ಮ ರೈತಬಾಂಧವರ ದುರ್ದೈವವೇ ಸರಿ. ನೆರೆ ಮೈಸೂರ ಸಂಸ್ಥಾನದಲ್ಲಿ ಈ ರೋಗವನ್ನು ಅಲ್ಲಿಯ ವ್ಯವಸಾಯ ಬಂಧುಗಳು ಇದೇ ಔಷದ ಉಪಚಾರವನ್ನು ಇಪ್ಪತ್ತು ವರ್ಷಗಳಿಂದಲೂ ಸಾರ್ವತ್ರಿಕವಾಗಿ ಪ್ರಚಾರದಲ್ಲಿ ತಂದಿರುವರು. ಸಾಗರ, ತೀರ್ಥಹಳ್ಳಿ, ನಗರ, ಕೊಪ್ಪಾ ತಾಲೂಕಗಳಲ್ಲಿ ಸಾವಿರಾರು ಎಕ್ರೆಗಳ ಮೇಲೆ ಈ ಉಪಚಾರವು ನಡೆದಿದ್ದು ರೈತರಿಗೆ ಲಕ್ಷಾವಧಿ ರೂಪಾಯಿಗಳ ಉಳತಾಯವಾಗಿರುವದು. ಆದರೆ ಈ ಜಿಲ್ಹೆಯೊಳಗಿನ ತೋಟಿಗರು ಇದರ ಕಡೆಗೆ ಚನ್ನಾಗಿ ಲಕ್ಷ ಕೊಡದೆ ತಮ್ಮ ಹಳೇ ಪದ್ಧತಿಯನ್ನೇ ಅನುಸರಿಸುತ್ತಿದ್ದು, ಲಕ್ಷಾವಧಿ ರುಪಾಯಿಗಳ ಲುಕ್ಸಾನು ಇನ್ನು ಹೊಂದುತ್ತಿರುವರು. ಇದಕ್ಕೆ ಜವಾಬದಾರರೆಂದರೆ ತೋಟಿಗರೇ. ಈ ಔಷದವನ್ನು ಉಪಯೋಗಿಸಿದರೆ ಸರಕಾರಕ್ಕೆ ಕೊಡತಕ್ಕ ತೆರಿಗೆಯ 3-4 ಪಟ್ಟು ಬೆಲೆ ಬಾಳುವ ಬೆಳೆಯು ಲುಕ್ಸಾನು ಸಹಜವಾಗಿ ತಪ್ಪಿಸಿಕೊಳ್ಳಲಿಕ್ಕೆ ಬರುವದು. ಈಗಿನ ಪರಿಸ್ಥಿತಿಯನ್ನು ತಂದುಕೊಳ್ಳುವದಕ್ಕೆ ತೋಟಿಗರ ಅದೂರದರ್ಶಿತ್ವವಲ್ಲದೆ ಇನ್ನಾವದೂ ಹೊಣೆಯಾಗಿಲ್ಲ. ನಮ್ಮ ಅಜ್ಞಾನಿ ರೈತ ಬಂಧುಗಳು ಬೇಜವಾಬದಾರಿ ಜನರ ದುರುಪದೇಶಕ್ಕೆ ಬಲಿ ಬೀಳದೆ ಈ ರೋಗ ನಿವಾರಕ ಉಪಾಯದ ಕಡೆಗೆ ತೀವ್ರ ತಮ್ಮ ಮನಸ್ಸು ಹಾಕಬೇಕೆಂದು ವಿನಂತಿಯದೆ.

ಮೇಲಿನ ಸಂಗತಿಗಳನ್ನು ಅಜ್ಞಾನತನದ ಕತ್ತಲೆಯಲ್ಲಿ ಕೂತ ತೋಟಿಗರೂ ಹಾಗೂ ಕರನಿರಾಕರಣೆಗೆ ಉತ್ತೇಜನ ಕೊಡುವ ರಾಷ್ಟ್ರಘಾತಕರೂ ಅಲ್ಲಗಳೆಯಬಹುದು. ಆದರೆ ಈ ಸಂಗತಿಗಳು ನಿಜವಾಗಿ ಅವನತಿಗೆ ಮುಖ್ಯ ಕಾರಣವಾಗಿರುವದಿಲ್ಲವೋ ಎಂಬದನ್ನು ಶಾಂತ ಚಿತ್ತದಿಂದ ವಿಚಾರ ಮಾಡಿದರೆ ಸತ್ಯತ್ವವು ಮನಸ್ಸಿಗೆ ಸುಲಭವಾಗಿ ಹೊಳೆಯುವಂತಿದೆ. ರೋಗವು ಒಂದುಪ್ರಕಾರದಿದ್ದು ಅದಕ್ಕೆ ಮಾಡಲಿಕ್ಕೆ ಹತ್ತಿದ ಉಪಾಯವು

ಅಪಾಯಕಾರಕವಿದ್ದಲ್ಲಿ ಅದರಿಂದ ಪರಿಣಾಮವು ವಿಪರೀತವಾಗದೆ. ಎಂದೂ ಉಳಿಯಲಿಕ್ಕಿಲ್ಲ. ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ತಕ್ಕ ಉಪಾಯವನ್ನು ಕೈಕೊಂಡು ಪ್ರತಿಯೊಬ್ಬನು ಪಾರಾಗಿ ಹೋಗುವ ಉಪಾಯವನ್ನು ಮಾಡತಕ್ಕದ್ದೇ ಹೊರ್ತು ಬೇರೊಂದಿಲ್ಲ. ಈಗಿನ ಉಪಕ್ರಮದಿಂದ ಕಷ್ಟವು ಹೆಚ್ಚಾಗುತ್ತ ಹೋಗುವದೇ ಹೊರ್ತು ಎಂದೂ ಕುಗ್ಗಲಿಕ್ಕಿಲ್ಲ. ಕಾರಣ ತೋಟಿಗಬಂಧುಗಳೇ ತಮ್ಮ ಸುಧಾರಣೆಯು ಕರನಿರಾಕರಣೆಯಿಂದ ಎಂದೂ ಆಗಲಿಕ್ಕಿಲ್ಲ. ಬೇರೆ ವಿಧಾಯಕ ಉಪಾಯವನ್ನೇ ಕೈಕೊಳ್ಳ ಬೇಕಾಗಿದೆ. ಅಂಥ ಉಪಾಯಗಳನ್ನು ಸೂಚಿಸಿದರೆ ಅಪ್ರಸ್ತುತವಾಗಲಿಕ್ಕಿಲ್ಲವಾಗಿ ತೋರುತ್ತದೆ. ಅವುಗಳಿಂದ ಯಾವ ಪ್ರಯೋಜನವಾಗಬಹುದೆಂಬದನ್ನು ತಾವೇ ತಿಳಕೊಳ್ಳಬಹುದು. ಅವು ಯಾವವೆಂದರೆ:-

1 ಈಗಿನ ಆರ್ಥಿಕ ಸ್ಥಿತಿಯ ಅವನತಿಯು ಕಾರಣವು ಎರಡು ವರ್ಷಗಳಿಂದ ದರಗಳೂ ಇಳಿದಿರುವದರಿಂದಲೂ, ಕಳೆದ ಒಂದೇ ವರ್ಷದ ಮೇಲಿನ ಲುಕ್ಸಾನಿಯಿಂದಲೂ ಬಂದಿರುವದೋ ಅಥವಾ ಇದು ಬಹಳ ಕಾಲದಿಂದಲೂ ಸಂಚಿತವಾಗುತ್ತಲೇ ಇದ್ದ ಕಾರಣದಿಂದ ಬಂದಿರುವದೋ ಎಂಬ ಶೋಧನೆಯು ಮೊದಲನೇದು, ಇದರಿಂದ ತಪ್ಪು ಎಲ್ಲಿ ಸಂಭವಿಸಿದೆ ಎಂಬದನ್ನು ತಿಳಕೊಳ್ಳಬಹುದು.

2 ತೋಟಿಗರು ತಮ್ಮದೊಂದು ಸಂಘವನ್ನೇ ಏರ್ಪಡಿಸಿ ತೋಟಗಳ ಸಾಗವಳಿಗೆ ಒದಗಿರುವ ಮತ್ತು ಒದಗ ಬಹುದಾದ ಅಡಚಣೆಗಳನ್ನು ಸನದಶೀರ ರೀತಿಯಿಂದ ಅಧಿಕಾರಿಗಳ ಮುಂದಿಟ್ಟರೆ ಅವು ಸಹಜವಾಗಿ ದೂರಾಗ ಬಹುದು. ಈ ಅಡಚಣೆಗಳೇ ತೋಟಿಗರ ಮನಸ್ಸು ಪ್ರಕ್ಷುಬ್ಧ ಮಾಡುವದರಲ್ಲಿ ಸಹಾಯವಾಗಿರಬಹುದು. ಚಹಾದ ಕಂಪನಿಗಳೂ, ಕೊಫಿ, ರಬ್ಬರ, ಬೆಳಿಸುವ ಕಂಪನಿಗಳು ತಮ್ಮ ತಮ್ಮ ಸಂಘಗಳನ್ನೇರ್ಪಡಿಸಿಕೊಂಡು ಅವುಗಳ ಪ್ರಗತಿಗೆ ಅಡ್ಡಬರುವ ಅಡಚಣೆಗಳನ್ನು ದೂರ ಮಾಡುವದಕ್ಕೆ ಹೋರಾಡುವವು. ಇಷ್ಟೇ ಅಲ್ಲದೆ ತಜ್ಞರನ್ನು ಭಾರಿ ಸಂಬಳದ ಮೇಲೆ ನೇಮಿಸಿಕೊಂಡು ಬೆಳೆಗಳ ಸುಧಾರಣೆಗಳ ಬಗ್ಗೆ ಸಂಶೋಧನೆಗಳನ್ನು ನಡಿಸುವರು. ಇಂಥ ಸುವಿಚಾರಗಳು ನಮ್ಮಲ್ಲಿಯ ತೋಟಿಗರಿಗೆ ಹೊಳೆಯಬಾರದೇ ? ಕರನಿರಾಕರಣೆ ಎಂಬ ವಿಷಪ್ರಯೋಗವನ್ನು ಅಜ್ಞ ರೈತರ ಮೇಲೆ ಮಾಡಿದ ಓದಿ ಕೆಟ್ಟಂಥಾ ಕೂಚ ಭಟ್ಟರಿಗೆ ಬುದ್ಧಿಬರಬಾರದೇ ?

3 ಈಗಿನ ಬದಲಾದ ಪರಿಸ್ಥಿತಿಯಲ್ಲಿ ಮಿತವ್ಯಯಕ್ಕೆ ಮೇಲು ಸ್ಥಾನವನ್ನು ಕೊಡಲೇಬೇಕು. ಈ ಸಂಗತಿಯು ಜನರಿಗೂ ಮನಗಂಡಂತೆ ತೋರುತ್ತದೆ. ಶಿರ್ಶಿ ತಾಲೂಕಿನಲ್ಲಿ ಮಹಾಮಂಡಳವನ್ನು ಸ್ಥಾಪಿಸಿ ಶುಭ ಶೋಭನಾದಿಗಳಿಗೆ ಹೆಚ್ಚಿನ ಖರ್ಚು ಮಾಡಬಾರದಾಗಿ ನಿರ್ಣಯಿಸಿರುವದಾಗಿ ತಿಳಿದುಬರುತ್ತದೆ. ಈ ಸಂಸ್ಕಾರಗಳೇ ಜಮೀನದಾರರ ಮೇಲೆ ಅತಿಭಾರವಾಗಿರುವ ಸಾಲಕ್ಕೂ ಬಡತನಕ್ಕೂ ಕಾರಣವಾದಂಥವು ಖರ್ಚುಗಳನ್ನು ನಿಯಂತ್ರಿಸುವದಕ್ಕಾಗಿ ಪಂಜಾಬದಲ್ಲಿ ಉತ್ತಮ ಜೀವನದ ಸಂಘಗಳೆಂಬ ಸಂಸ್ಥೆಗಳನ್ನು ಬೇರೆ ಬೇರೆ ಸಮಾಜಗಳ ಬಗ್ಗೆ ಸಹಕಾರಿ ಎಕ್ಟಿನ ಅನ್ವಯ ರಜಿಸ್ಟರು ಮಾಡಲ್ಪಟ್ಟಿವೆ. ಇದಲ್ಲದೆ ಜನರೊಳಗೆ ಒಡಕುಗಳಿಂದುಂಟಾಗುವ ವ್ಯವಹರಣ ನಿಕಾಲೆ ಬಗ್ಗೆ ಆದ ಆರ್ಬಿಟ್ರೇಶನ ಸಂಘಗಳು ಅಸ್ತಿತ್ವದಲ್ಲಿ ಬಂದಿರುವವು. ದೇಶದೊಳಗಿನ ಜನರ ಅಭ್ಯುದಯಕ್ಕಾಗಿ ಹಳ್ಳಿಗಳ ಪುನರುಜ್ಜೀವನ ಸಂಘಗಳೂ ಅಲ್ಲಲ್ಲಿ ಸ್ಥಾಪಿಸಲ್ಪಡುತಿರುವವು. ಇದರ ಕಾರ್ಯ ಕ್ಷೇತ್ರವು ಬಹು ವಿಸ್ತೃತವಾಗಿರುವದು. ಇದು ಒಂದು ಚಿಕ್ಕ ಸ್ವರಾಜ್ಯ ಸಂಸ್ಥೆಯಂತೆ ಇರುವದು. ಇಂಥ ಉಪಕ್ರಮಗಳನ್ನು ಕೈಕೊಳ್ಳುವದು ಉತ್ತಮ ಪಕ್ಷವಾಗುವದು ಅಂಗ

ಗಳಿಕ್ಕೆ ಹಾರಿ ಗಗನಕ್ಕೆ ಹಾರಬೇಕು ಎಂಬ ನಾಣ್ಣುಡಿಯುಂಟು. ತಮ್ಮ ಹಾಗೂ ತಮ್ಮ ನೆರೆಹೊರೆಯವರ ಆರ್ಥಿಕ, ಸಾಮಾಜಿಕ, ಮತ್ತು ನೈತಿಕ ಸುಧಾರಣೆ ಮಾಡುವದು ನಾಗರಿಕರ ಆದ್ಯ ಕರ್ತವ್ಯವಾಗಿರುವದು.

4. ತಾವು ಬೆಳೆಸುವ ಜಿನಸುಗಳ ಮಾರಾಟ ಮಾಡುವದರಲ್ಲಿ ಮತ್ತು ತಮಗೆ ಬೇಕಾಗಿರುವಂಥ ಜೀವನ ಸಾಮುಗ್ರಿಗಳನ್ನು ಕೊಂಡುಕೊಳ್ಳುವದರಲ್ಲಿ ಎಷ್ಟು ಹಾನಿ ಹೊಂದುವರೆಂಬದನ್ನು ತೋಟಿಗರ ಗಣನೆಯಲ್ಲಿರಲಿಕ್ಕಿಲ್ಲ. ಈಗ ಪ್ರಚಲಿತವಾಗಿರುವ ಕೇಡಿನ ಪದ್ಧತಿಯನ್ನು ಬಿಟ್ಟು ಸುಸಂಘಟಿತವಾದ ಸಹಕಾರ ಪದ್ಧತಿಯನ್ನು ಅನುಸರಿಸಿ ಮಾರಾಟದ ಮತ್ತು ಕೊಳ್ಳತಕ್ಕ ಸಂಘಗಳನ್ನು ಏರ್ಪಾಡು ಮಾಡಿದರೆ ರೈತರಿಗೆ ಎಷ್ಟು ಉಪಾಯವಾಗುವದೆಂಬದನ್ನು ಹೇಳಬೇಕಾಗಿಲ್ಲ. ಎಲ್ಲ ಲಾಭಗಳು ರೈತರಿಗೇನೇ ದೊರಕುವವು. ಆದರಂತೆಯೇ ಅವಶ್ಯ ಉಳ್ಳ ಭಾಂಡವಲದ ಬಗ್ಗೆ ಸಹಕಾರ ಸಂಘಗಳು ಸಹಾಯಕವಾಗಿ ಬರುವವು. ಪ್ರಮಾಣಿಕತನದಿಂದ ಕೆಲಸ ಈ ಸಂಘಗಳಲ್ಲಿ ನಡಿಸಿದರೆ ರೈತರ ಅಭ್ಯುದಯವು ಶೀಘ್ರದಲ್ಲಿಯೇ ನಿಸ್ಸಂದೇಹವಾಗಿ ಆಗುವದು.

5. ಕೊಳೆರೋಗ ಪ್ರತಿಬಂಧಕಕ್ಕಾಗಿ ಔಷಧವನ್ನು ಹಾಕಿಸುವದೇ ಅತಿ ಉತ್ತಮ ಉಪಾಯವು. ಇದನ್ನು ಎಲ್ಲರೂ ಕೈಕೊಳ್ಳುವದರಿಂದ ಈ ರೋಗದಿಂದ ಒದಗುವ ಲುಕ್ಸಾನು ತಪ್ಪುವದು. ಈ ಕೆಲಸಕ್ಕೆ ಹಣದ ಅನಾನುಕೂಲತೆ ಇದ್ದಲ್ಲಿ ಸರಕಾರದಿಂದ ತಗಾವಿ ಸಾಲವನ್ನು ಸುಲಭವಾಗಿ ಪಡಿಯಬಹುದು. ಔಷಧ ಸಿಂಪಡಿಸುವ ಪಂಪುಗಳು ಬಹಳೇ ಬೇಕಾಗಿರುವವು. ಒಂದು ಪಂಪಿನಿಂದ ೫ ರಿಂದ ೮ ಎಕರೆ ಸಿಂಪಡಿಸಬಹುದು ಈ ಜಿಲ್ಲೆಯಲ್ಲಿ ೨೩೬೦೦ ಎಕರೆ ಅಡಕೆ ತೋಟಗಳಿರುವವು. ನಿದಾನ ೩೦೦೦ ರಿಂದ ೫೦೦೦ ವರಿಗೆ ಪಂಪುಗಳು ಬೇಕು. ಔಷಧ ಪುರವಠೆ ಹೆಚ್ಚಿಗೆ ಬೇಕು. ಇವುಗಳ ದೆಶೆಯಿಂದ ಸಹಕಾರ ಸಂಘಗಳನ್ನು ಸ್ಥಾಪಿಸಿದರೆ ಎಷ್ಟು ಕಲ್ಯಾಣವಾಗುವದು. ಎನಿಕೆ ಜನರನ್ನು ಪಂಪಿನಿಂದ ಔಷಧ ಪ್ರಯೋಗ ಮಾಡುವದರಲ್ಲಿ ನಿಪುಣರನ್ನು ಮಾಡಿದರೆ ಕೊಟ್ಟು ಕಟ್ಟುವ ಖರ್ಚು ಎಷ್ಟು ಉಳಿಯುವದು? ಕಷ್ಟ ಬಂದಾಗ್ಯೆ ತತ್ವ ಪರಿಶೀಲನೆ ಮಾಡಬೇಕಾಗುವದು. ಮೇಲೆ ಹೇಳಿದ ಸಂಗತಿಗಳು ಮುಂದಿನ ವಿಧಾಯಕ ಕಾರ್ಯಕ್ರಮಗಳಲ್ಲಿ ಬರುವವು. ಆದರೆ ಈಗಿನ ಆಪತ್ಕಾಲದಲ್ಲಿ ತಾತ್ಕಾಲಿಕ ಉಪಾಯವೆಂದರೆ ಯಾರಿಗೆ ನಿಜವಾಗಿ ಕಷ್ಟವಿರುವದೋ ಅಂಥವರು ಅಧಿಕಾರಿಗಳ ಎದುರಿಗೆ ಬಂದು ಅವರಿಂದ ಸಿಗಬಹುದಾದ ಸವಲತನ್ನು ಪಡೆಯುವದು ಮತ್ತು ಕೊಳೆರೋಗ ನಿವಾರಣಕ್ಕಾಗಿ ತಗಾವಿ ಪಡೆಯುವದು. ಅದರ ಲಾಭವನ್ನು ಪಡೆದು ಮುಂದಿನ ಕೆಲಸಕ್ಕಾಗಿ ಮೇಲೆ ಹೇಳಿದ ಕಾರ್ಯಕ್ರಮವನ್ನು ಕೈಕೊಂಡರೆ ಕೆಲವು ಕಾಲದಲ್ಲಿ ಈಗಿರುವ ಪರಿಸ್ಥಿತಿಯು ಬೈಲಾಗಿ ಸುಧಾರಣೆಯಾಗಬಹುದಾಗಿ ಪೂರ್ಣ ನಂಬಿಗೆ ಇದೆ. ಕಾರಣ ವಿಘಾತಕವಾದ ಕಾರ್ಯಕ್ರಮಗಳನ್ನು ಬಿಟ್ಟು ವಿಧಾಯಕವಾದಂಥವುಗಳನ್ನು ಅನುಸರಿಸಬೇಕಾಗಿ ಇದರಮೂಲಕ ಸೂಚನೆ ಮಾಡಿಯದೆ. ದೇವರು ನಿಮಗೆ ಸುಬುದ್ಧಿಯನ್ನು ಕೊಟ್ಟು ಸೂರ್ಯೋದಯವನ್ನುಂಟುಮಾಡಲೆಂದು ಅವನಿಗೆ ಪ್ರಾರ್ಥಿಸುವಾ.

ಓರ್ವ ಕಳಕಳಿ ರೈತಬಂಧು.

M. P Karwar.

ಬಡ ರೈತರ ಬಾಳೋ - ಕಾಂಗ್ರೆಸ್ಸದ ಗೋಳೋ!

"ಬೇಸಾಯ ಮಾಡಿದವ ಬೇಗ ಸಾಯ" ಎನ್ನುವ ಗಾದೆಯು ಇಂದಿಗೂ ಪ್ರಚಾರದಲ್ಲಿ ಇರುವದಲ್ಲವೇ! ಅಂದ ಬಳಿಕ ನಾವು ಎಂದೆಂದಿನಿಂದಲೂ ಕಷ್ಟ ಜೀವಿಗಳಾಗಿರುವ ಪ್ರಸಂಗವು ವಿಶೇಷತಃ ನಮ್ಮ ರೈತ ಬಾಂಧವರಿಗೆ ಮಾತ್ರ ಒಂದಿರುವದು ಹೇಗೆ? ನಮ್ಮ ದೇಶವು ಬ್ರಿಟಿಶ ಸಾಮ್ರಾಜ್ಯಕ್ಕೆ ಒಳಪಟ್ಟು ಪ್ರಜೆಗಳ ಹಿತ ಸಾಧನಗಳಿಗೆ ಶಕ್ಯ ಸಾಮುಗ್ರಿಗಳಿದ್ದರೂ ಅದೇಕೆ ನಮ್ಮ ಪಾಲಿಗೆ ಸಿಗಲಿಲ್ಲ? ಇದೇನು ನಮ್ಮ ಸರಕಾರದ ಅವಕೃಪೆಯೋ? ಇಲ್ಲ. ಇಲ ಸಾರ್ವತ್ರಿಕ ಉಪಭೋಗವಾಗುವಂಥಾದ್ದು ನಮ್ಮ ಒಕ್ಕಲಿಗ ಬಾಂಧವರಿಗೆ ಮಾತ್ರ ಹೇಗೆ ತಪ್ಪುವದು? ಇದಕ್ಕೆ ನಮ್ಮ ಪೂರ್ವಾಪರ ಅಂಧ ಪರಂಪರೆ—ಭಾವಿಕತನ—ಅಜ್ಞಾನ ಮತ್ತು ಅಶಿಕ್ಷಿತತನ ಇವೇ ಕಾರಣವೆನ್ನಬೇಕಾಗುವದು.

ಸಾಂಪ್ರತ ಈ ಸ್ಥಿತಿಯು ನಮಗೆ ಒದಗಿದ್ದರೂ ಹಿಂದೆಷ್ಟೋ ನಮ್ಮ ರೈತರ ಮನೆ ಮಾರುಗಳನ್ನು ಕೊಂಡು ಜಮೀನದಾರರು - ಸಾವುಕಾರರು ಎನ್ನುವ ಸುಧಾರಿಸಿದ ವರ್ಗದವರು ದೇಶಭಕ್ತರೆಂಬ ಹೊಸ ಪದವಿಯನ್ನು ಧರಿಸಿ ಈಗ ನಮ್ಮ ಸಹಾಯಕರಾಗಿ ಸರಕಾರದೊಡನೆ ಅಸಹಕಾರ - ಕಾಯದೆಯ ಭಂಗ ಕರನಿರಾಕರಣೆಯಂಥ ರೈತರ ಆತ್ಮವಿನಾಶಕಕಾರಿಯಾದ ಚಳವಳಿಗೆ ನಮ್ಮ ರೈತ ಬಾಂಧವರನ್ನು ತುತ್ತು ಮಾಡಿ ಇನ್ನು ಭಲೇ! ಶಾಭಾಸ! ಎಂತ ಬೆನ್ನು ಚಪ್ಪರಿಸುತ್ತಿರುವರಲ್ಲವೇ? ಕಾಂಗ್ರೆಸ್ಸೆಂದರೆ ಪ್ರತಿಸರಕಾರ. ಬಡ ರೈತರ ಕಲ್ಯಾಣಕ್ಕಾಗಿಯೇ ಇದೆ. ರೈತರ ಬಾಳು ಈ ಚಳವಳಿಯಲ್ಲಿಯೇ ಇದೆ. ಎನ್ನುವ ಉಪದೇಶಕರು ಕೆರನಿರಾಕರಣೆಯಂಥ ಕಡೇ ಮೆಟ್ಟಲಿನ ಮುಗಿಲು ಮುಟ್ಟುವ ಸಾಹಸವನ್ನು ನಮ್ಮ ಕಾನಡಾ ಜಿಲ್ಹೆಯೊಳಗಿನ ಸಂದಿ-ಗೊಂದಿಗಳಲ್ಲಿರುವ ಹಳ್ಳಿಗಳಲ್ಲಿ ಮಾತ್ರ ಪ್ರಚಾರ ಮಾಡಲಿಕ್ಕೆ ಕಾರಣವೇನು? ಅವರಿಗೇನು ನಮ್ಮ ದೇಶದಲ್ಲಿ- ಪ್ರಾಂತದಲ್ಲಿ ಅಥವಾ ಇನ್ನಾವ ಜಿಲ್ಹೆಯಲ್ಲಿ ಇಲ್ಲವೆ ತಾಲೂಕಿನಲ್ಲಿ ಸ್ಥಳವಿದ್ದಿಲ್ಲವೇ? ಅದರೊಳಗೂ ಅಜ್ಞಾನ ಮತ್ತು ಅಶಿಕ್ಷಿತ ರೈತ ಬಾಂಧವರಾದ ಸಿದ್ದಾಪೂರ ಮತ್ತು ಅಂಕೋಲಾ ತಾಲೂಕಿನಲ್ಲಿಯ ಹವೀಕರೂ ನಾಡವರೂ ಹಾಲಕ್ಕಿ ಒಕ್ಕಲಿಗರೂ ಮಾತ್ರ ಇಂಥ ಸಾಹಸವನ್ನು ಮಾಡಲಿಕ್ಕೆ ತಕ್ಕವರೆಂದು ಕಂಡರೇ? ಇದನ್ನು ಬೋಧಿಸಲಿಕ್ಕೆ ಸುರುವು ಮಾಡಿದ ಮಹನೀಯರು ತಮ್ಮ ಹೊಲಮನೆಯ ಶಿರಿಗೆಯನ್ನು ಗಪ್ಪಚುಪ್ಪ ಯಾಕೆ ಕೊಟ್ಟರು? ಇವೆಲ್ಲ ವಿಚಾರ ಮಾಡಿದರೆ ಇದರಲ್ಲಿ ಏನೇನೊ ಕೃಷ್ಣಕಾರಸ್ಥಾನವಿರಬಹುದೆಂದು ಕಾಣುವದಲ್ಲವೇ! ಈ ಮಹನೀಯರು "ಅಳಿದ ಊರಿಗೆ ಉಳಿದವನೇ ಗೌಡ" ಎನ್ನುವ ಮುಖಂಡರನ್ನು ಕಂಡು, ಅವರಲ್ಲಿ ಕೆಲವರಿಗೆ ಕಾಬ್ಡಿಕ ದೊಡ್ಡಸ್ತಿಕೆ ಕೊಟ್ಟು, ಕೆಲವರಿಗೆ ಅಲ್ಪ ಸ್ವಲ್ಪ ಲಂಚ-ರುಸುವಾತಗಳಿಂದ ಒಲಿಸಿ, ಇನ್ನು ಕೆಲವರಿಗೆ ಕಾಂಗ್ರೇಸದಿಂದ ಸಿಗಬಹುದಾದ ದೊಡ್ಡ ದೊಡ್ಡ ಆಶೆಯನ್ನು ತೋರಿಸಿ, ಇನ್ನು ಕೆಲವು ಉಂಡುಂಡು ನಿರುದ್ಯೋಗದಿಂದ ಕಾಲ ಕಳೆಯುವ ಪುಂಡರ ತಂಡವನ್ನು ಸೇರಿಸಿಕೊಂಡು ತಮ್ಮ ಬೇಳೆಯನ್ನು ಚನ್ನಾಗಿ ಬೇಯಿಸುವ ಇದೊಂದು ಹೊಸ ಸಾಧನೆಯನ್ನು ಯಾಕೆ ಕೈಕೊಂಡರೆಂಬದನ್ನು ವಿಚಾರ ಮಾಡುವಂತಿದೆ.

ನಮ್ಮ ರೈತರ ಬಾಳೆಂದರೆ ಬಡತನದ ಮತ್ತು ಸಾತ್ವಿಕ ಬಾಳು. ಇವರ ಪೂರ್ವಾರ್ಜಿತ ಸಂಪತ್ತು, ಅಂದರೆ ಹೊಲಮನೆ, ದನಕರು, ಅದಾದರೂ ಎಲ್ಲರಿಗೂ ಸಾಕಷ್ಟು ಇದೆಯೇ? ಇಲ್ಲ. ಕಾಂಗ್ರೆಸ್ ಪುಢಾರಿಗಳು ದೇಶಭಕ್ತರು ಎಂದು ಈಗ ಕೊಚ್ಚುವ ಮಹನೀಯರೇ ದುಡ್ಡಿಗೆ ದುಡ್ಡಿನ ಬಡ್ಡಿ ಹಾಕಿ ನಮ್ಮ ಹೊಟ್ಟೆಬಟ್ಟೆ ಒತ್ತಿಸಿ ನಮ್ಮ ರಕ್ತ ಹೀರಿದರು. ಕಾಗದಲೇಖಣಿ ಅವರದು. ಮೋಟ ತುಂಡು ನಮ್ಮದು. ಸದಾ ಕಷ್ಟದಿಂದ ಜೀವಿಸುವದು ನಮ್ಮ ಬಾಳು. ಈ ಸ್ಥಿತಿಯು ಎಷ್ಟೋ ಕಾಲದಿಂದ ಒಂದೇ ಸಮನೆ ಸಾಗುತ್ತ ಬಂದದ್ದನ್ನಾದರೂ ಉಳಿಸಬೇಕೆನ್ನುವದರಿಂದಲೋ? ಅಲ್ಲ. ನಮ್ಮ ಕಷ್ಟ ಜೀವನವನ್ನು ಇನ್ನಿಷ್ಟು ಕಷ್ಟಕ್ಕೀಡು ಮಾಡಿ ನಮ್ಮ ಸತ್ವ ಹರಣವನ್ನು ಪೂರ್ತಿಗೊಳಿಸಿ ತಮ್ಮ ದಾಸಾನುದಾಸರನ್ನಾಗಿ ಮಾಡಿ ಇಡಬೇಕೆನ್ನುವ ಇಚ್ಛೆಯೇ ಹೊರತು ಬೇರೆ ಏನಿದೆ? ಉಪದೇಶಕರು ಈ ಮಾತನ್ನು ಒಳ್ಳೇ ಸವಿಸವಿಯಾಗಿ ಸರಕಾರಕ್ಕೇನೇ ಹಚ್ಚಿ ತೋರಿಸುವರು. ಇವರ ಆಚರಣೆಯನ್ನು ನೋಡಿದರೆ ಎಷ್ಟೋ ಕಾಲದಿಂದ ಅನುಭವಿಸುವ ವಿಚಾರಜ್ಞರಿಗೆ ಇದರ ಇಂಗಿತವು ತಾನೇ ತಿಳಿಯುವಂತಿದೆ. ಉದಾಹರಣೆಗಾಗಿ ರೈತರ ಮತ್ತು ಇತರರ ಸ್ಥಿತಿಗತಿಗಳಲ್ಲಿರುವ ಭೇದವನ್ನು ನೋಡಿರಿ. ರೈತರೆಂದರೆ ದೇಶದ ಸಂಪತ್ತನ್ನು ಬೆಳೆಸುವವರು ಈ ಬೆಳೆಸುವವರ ಸ್ಥಿತಿಯು ಯಾವಾಗಲೂ ಕನಿಷ್ಟ, ಇನ್ನಿತರರದು ಉತ್ತಮ. ಇದೇಕೆ? ಜಮೀನು ಯಾವಾಗಲಿಂದಲೋ ರೈತರ ಕೈ ತಪ್ಪುತ್ತ ಬಂದಿದೆ. ಅದಕ್ಕೆಲ್ಲ ಸರಕಾರವೇ ಕಾರಣವೆನ್ನಬೇಕೇ? ಎಂದೂ ಇಲ್ಲಾ. ರೈತನ ಈ ಹೀನ ದೀನ ಸ್ಥಿತಿಯನ್ನು ದೂರ ಮಾಡುವದಕ್ಕಾಗಿ " ಡೆಕ್ಕನ ಎಗ್ರಿಕಲ್ಚರಿಸ್ಟ ರಿಲೀಫ ಅಕ್ಟ " ಎಂಬ ಕಾಯದೆಯನ್ನು ಸರಕಾರವು ತಯಾರಿಸಲಿಲ್ಲವೇ? ಪತಪೇಡಿ ಸಂಘಗಳನ್ನು ಸ್ಥಾಪಿಸಲಿಲ್ಲವೇ? ರೈತಬಾಂಧವರಿಗೆ ಸಾಕಷ್ಟು ಪ್ರಯೋಜನವು ಇಷ್ಟರಲ್ಲಿಯೇ

ಸಿಗದಿದ್ದರೂ ಸಾವ್ಕಾರರ ಹಾವಳಿಯಿಂದ ಬಿಡುಗಡೆಯಾಗುವ ಸಮಯವು ಸ್ವಲ್ಪಾವಕಾಶದಿಂದಾದರೂ ಇನ್ನಿತರ ವಿಧದಿಂದ ಸಹ ಒಂದೇ ಬರುವದು. ಇದನ್ನು ಅರಿತ ಈಗಿನ ಸರ್ಕಾರ ಸಹಾಯಕ ಅಸಹಕಾರ ಬಂಧುಗಳು ನಮ್ಮನ್ನು ಮುಂದಾಗಿ ಹಾದಿಗೆ ಹಚ್ಚಿ ನಮ್ಮ ರೈತರಲ್ಲಿ "ಏನೂ ಉಳಿದಿಲ್ಲ" ಎಂಬ ಸ್ವಸ್ಥಿತಿಜ್ಞಾನವನ್ನು ಹಾಡಲಿಕ್ಕೆ ಹಚ್ಚಿಲ್ಲವೆ

ಈ ಮಹಾನುಭಾವರು ತೋರಿಸಿದ ಯುಕ್ತಿಯು ಚಮತ್ಕಾರಿಕವದ್ದೆ. ನಮ್ಮ ಭಾವಿಕತನದ ಫಾಯದೆಯನ್ನು ಹೇಗೆ ತೊಂಡರೆಂತ ನೋಡಿರಿ ಗುಡಿಗೆ ಕರೆದೊಯ್ದು ಅಸಹಕಾರತೆಯ ಪ್ರತಿಜ್ಞೆ ಶಪಥ ವಿಧಿಗಳನ್ನು ಮಾಡಿಸಿದರು. ಇದರಂತೆಯೇ ವಿದ್ಯಾಬುದ್ಧಿಗಳನ್ನರಿತ ಸುಶಿಕ್ಷಿತರ ಸೋಗಿನ ಶಪಥಗಳೂ ಆದವು ಸೋಗಿನ ಶಪಥಗಳ ಪರಿಣಾಮವ ನಡೆಸಿಯ ಮೋಸವಾಗಿ ಭಾವಿಕರ ಭಾವಿಕತನದ ಶಪಥ ವಿಧಿಗಳ ಪೇಚಾಟವು ಇನ್ನೂ ತಪ್ಪಿಲ್ಲ ಇದರ ಪರಿಣಾಮವು ಈಗ ಹೀಗಾಗಿರುವದಲ್ಲ:—

ರೈತರಲ್ಲಿ ಎಷ್ಟೋ ಜನರಿಗೆ ಬಂದಿವಾಸ ಮನೆ ಜಪ್ತಿ ಹೊಲಮನೆಯ ಹಾಲಸಾತಿ ಮನೆಮಾರು ಬಿಟ್ಟು ದಿಕ್ಕಿಲ್ಲದವರಾಗಿ ಹೋಗುವದು ಇವೇ ಮೊದಲಾದ ಕಷ್ಟನಷ್ಟಗಳ ಸ್ಥಿತಿ ಈ ಸ್ಥಿತಿಯು ವಿಶೇಷತ ಬಡ ರೈತರ ಬಾಳಿನ ಮೇಲೆ ಬಂದದ್ದು ಬಹು ದುಃಖಕರವಾದ ಮಾತು. ಮಾತಿನಿಂದ ಮರುಳುಗೊಳಿಸಿದ ಮಹನೀಯರು ತಮ್ಮ ಹೊಲಮನೆಯ ತೆರಿಗೆಯನ್ನು ತಾವು ಅಥವಾ ತಮಗೆ ಬೇಕಾದವರ ಮುಖಾಂತರವಾಗಿ ಕೊಟ್ಟು ತಮ್ಮ ಜೀವನದ ಸುರಕ್ಷಿತೆಯನ್ನು ಹಿಂದಿನಂತೆಯೇ ಇಂದಿಗೂ ಕಾದುಕೊಂಡಿದ್ದಾರೆ ಈ ಮಹನೀಯರಲ್ಲಿ ಕೆಲವರು ಅನ್ಯ ಕಾರಣದಿಂದ ಬಂದಿವಾಸದಲ್ಲಿದ್ದರೂ ಹೊಲಮನೆಯ ತೆರಿಗೆಯನ್ನು ಕೊಡದಿದ್ದ ಕಾರಣಕ್ಕಾಗಿ ಬಂದಿವಾಸಕ್ಕೀಡಾಗಲಿಲ್ಲ ಇದೊಂದು ಯಾವಾಗಲೂ ನೆನಪಿನಲ್ಲಿಡಬೇಕಾದ ಮಾತು ಇವರ ಚಂಡಕ ನರಿಯ ನೀತಿಯನ್ನು ಧ್ಯಾನಕ್ಕೆ ತನ್ನಿ ಬಲಿ ಬೀಳಬೇಡಿರಿ

ಯಾವ ಸುವ್ಯವಸ್ಥಿತ ರಾಜರ ಕಾರಕೀರ್ದಿಯಲ್ಲಿಯೂ ಕರ ಕೊಡುವದು ಇಲ್ಲದೇ ಇಲ್ಲ ಸ್ವರಾಜ್ಯದಲ್ಲಿ ಈಗಿನಕ್ಕಿಂತಲೂ ಹೆಚ್ಚಿಗೆ ತೆರಿಗೆ ಕೊಡುವ ಪ್ರಸಂಗ ಬಂದೇ ಬರುವದು ಕರ ಕೊಡುವದ ನಮ್ಮ ಜೀವಂತದ ಸುರಕ್ಷಿತೆಯ ಬಗ್ಗೆಯೇ ಅದಿ ಕರ ಕೊಡಬೇಡಿರೆಂದು ಹುರಿದುಬ್ಬಿಸುವ ಆಡಂಬರದ ಮಾತಿನಿಂದ ಮರುಳಾಗಬೇಡಿರಿ ನಿಮ್ಮ ಹೊಲಮನೆ ಹೋದರೆ ಕಾಂಗ್ರೆಸಾಗಲಿ ಅದರ ಪ್ರಚಾರಕರಾಗಲಿ ಕೊಡುವಂತಿಲ್ಲ ಇಸಗೆ ಬಲಿ ಬಿದ್ದು ನಾಶವನ್ನು ತಂದುಕೊಳ್ಳಬೇಡಿರಿ ದಕ್ಕೆ ಯಾರೂ ಎಂದೂ ಹೊಣೆಯಾಗಲಾರರು ಆದುದರಿಂದ ಬಾಂಧವರೇ, ಬೇಗನೇ ನಿಮ್ಮ ತೀರ್ವೆಯನ್ನು ಕೊಟ್ಟು ಮುಂಗಡ ಇನ್ನು ಮುಂದೆ ಇಂಥ ಹುಚ್ಚು ಕೆಲಸದಲ್ಲಿ ತೊಡಗದಿರುವದೇ ಲೇಸು

ಇನ್ನು ಲಕ್ಷದಲ್ಲಿಡತಕ್ಕ ಮಾತೇನಂದರೆ – ನಮ್ಮ ಸರಕಾರವು ಇನ್ನು ಮುಂದೆ ನಮಗೆ ದಯಪಾಲಿಸುವ ಜನತೆಯ ಕಾರಭಾರವು ತಾವು ತಮ್ಮ ತೀರ್ವೆಯನ್ನು ಕೊಟ್ಟು ನಮ್ಮನ್ನು ಈ ಕರನಿರಾಕರಣೆಯಲ್ಲಿ ತೊಡಗಿಸಿದ ಅನುಭವಶಾಲಿ ಅಕ್ಕಲಮಂದರ ಕೈಯಲ್ಲಿ ಮುಂದಿನ ರಾಜಕಾರಭಾರವು ಹೋಗದಂತೆ ಜನಜಾಗೃತಿಯನ್ನು ಮಾಡುವದು ಹಾಗೇನು ಹೋದರೆ ನಿಮ್ಮ ಮತ ಕೊಡುವ ಶಕ್ತಿ ಕಮ್ಮಿಯಾಗುವದು ಈಗ ಈ ವಿಧದಿಂದ ನಮ್ಮ ಆಚರಣೆಯು ಇರದಿದ್ದರೆ ನಮ್ಮ ಹಿತವಾದಿಗಳೆನ್ನುವ ಉಪದೇಶಕರ ಕೈಯಲ್ಲಿ ಆಡಳಿತೆಯು ಹೋಗಿ ಇಂದಿನ ಬಾಳುವೆಯು ಸಹ ಇನ್ನು ಮುಂದೆ ಚನ್ನಾಗಿ ಉಳಿಯದು ಈ ಪರಿಸ್ಥಿತಿಯನ್ನು ಪೂರ್ಣ ಲಕ್ಷಕ್ಕೆ ತಂದು ನಮ್ಮ ರೈತರ ಸಂಘಟನೆಯನ್ನು ಸುವ್ಯವಸ್ಥಿತವಾಗಿ ಮಾಡುವದರ ಬಗ್ಗೆ ನಮ್ಮ ರೈತವರ್ಗದ ಪುಢಾರಿಗಳು ಈಗಿನಿಂದಲೇ ಆಲೋಚಿಸಿ ಅದರಲ್ಲೇ ಪ್ರಯತ್ನಿಸುವದೇ ಹೊರತು ರೈತರ ಗೋಳಿಗೆ ಕಾರಣವಾದ ಈ ಅನಿಷ್ಟ ಚಳವಳಿಯಿಂದ ತಾವು ದೂರಾಗುವದು ಲೇಸು ಇಂಥ ಸುಸಂಧಿಯನ್ನು ಕಳಕೊಳ್ಳಲಾಗದು ಕಾರಣ ನಮ್ಮ ರೈತಬಂಧುವರೇ ರೈತಪೀಳಿಗೆಯ ಬಾಳಿಗೆಲ್ಲ ಗೋಳಿಗೆ ಕಾರಣವಾಗುವ ಈ ಅನಿಷ್ಟ ಅಸಹಕಾರ ಚಳವಳಿಯಿಂದ ದೂರ ಇದ್ದು ನಮ್ಮ ರೈತಬಂಧವರ ಬಾಳನ್ನು ಸುರಕ್ಷಿತವಾಗಿಡುವ ರೈತ ಸಂಘಟನೆಯನ್ನು ಮಾಡುವದರಲ್ಲಿ ನಿಮ್ಮ ಬುದ್ಧಿ ಸಾಹಸ ಕಾಲಗಳನ್ನು ವ್ಯಯ ಮಾಡಬೇಕಾಗಿಯೂ ನಮ್ಮ ದೇಶ ಮತ್ತು ಜನಾಂಗದ ಏಳಿಗೆಗೆ ತಕ್ಕದಾದ ಸನದಶೀರ ಮಾರ್ಗದಿಂದ ಶಾಂತತೆಯಿಂದ ನಡೆದು ನಮ್ಮ ಜೀವಿತದ ಕರ್ತವ್ಯಗಳನ್ನು ಆಳವಾಗಿ ವಿಚಾರಿಸಿ ರೈತರ ಜೀವಾಳವಾಗಿರುವ ಒಕ್ಕಲತನವನ್ನೂ ಮತ್ತು ಅದಕ್ಕೆ ಸಂಬಂಧಿಸಿದ ಆರ್ಥಿಕೋನ್ನತಿಯ ಇತರ ಉಪಧಂದೆಗಳನ್ನೂ ಕೈಕೊಳ್ಳಬೇಕಾಗಿ ನಮ್ರತಾಪೂರ್ವಕವಾಗಿ ಬಿನ್ನೈಸುತ್ತೇನೆ

ಕಾರವಾರ ಜಿಲ್ಲಾ }
೧—೮—೧೯೩೧ }

ತಮ್ಮೋರ್ವ ಕಳಕಳಿಯ ರೈತಬಂಧು.

M P Karwar

ಹೇಳುವದು ಇದೇನು ಸತ್ಯಾಗ್ರಹವೋ?

ಇದೇನು ಇವನ ಮನೋವಿಕಾರವೋ? ಸ್ವಪ್ನವೋ! ಈ ಮಾತನ್ನು ಯಾರು ಹೇಳಿದರು? ಈ ರೀತಿ ಸ್ವಪ್ನ ಬರೆಯಲು ನಾಚಿಕೆ ಬರುವದಿಲ್ಲವೇ? ನಮ್ಮ ಜೀವವಿರುವವರೆಗೂ ನಾವು ಸತ್ಯಾಗ್ರಹಿ ಮಲ್ಲಾಳನ್ನು ದೇಶದ್ರೋಹಿಗಳಿಗೆ ವಶಕ್ಕೆ ಕೊಡಲಿಕ್ಕಿಲ್ಲ ಈ ಮಾತನ್ನು ನಾವು ಹೇಳುವದು ನಿಜ ನಾವು ದೇಶ ಸೇವಕರು ಈ ಯುದ್ಧದಲ್ಲಿ ಸತ್ತರೆ ಸ್ವರ್ಗಕ್ಕೆ ಹೋಗಿ ನಾವು ಎಂದೆಂದಿಗೂ ಪಿಶಾಚಿಗಳಾಗುವದಿಲ್ಲ ದೇಶದ್ರೋಹಿಗಳೂ ದುರಾಶೆಯಿಂದ ಅನ್ಯರ ದೇಶವನ್ನು ಆಕ್ರಮಿಸುವವರೂ ಪರವಿತ್ತವನ್ನು ಜೀರ್ಣಿಸಿಕೊಳ್ಳಾರದೆ ಪಿಶಾಚಿಗಳಾಗುವರು ಖಂಡಿತ'

೪ ಈ ಎರಡೂ ಪತ್ರಗ ಉತ್ತರಿಯನ್ನು ನೋಡಿ ಇದು ಯಾರ ಮನೋವಿಕಾರ, ಯಾರ ಸ್ವಪ್ನ, ಯಾರು ಸುಳ್ಳು ಹೇಳುತ್ತಾರೆ ಯಾರಿಗೆ ನಾಚಿಕೆ ಬರಬೇಕೆಂದು ವಾಚಕರೇ ಊಹಿಸಲಿ ಇದೇ ಕೊಂಗ್ರೆಸದ ಸತ್ಯಾಗ್ರಹಿಗಳ ಸತ್ಯಪ್ರಿಯತೆ. ಆದರೂ ಆವರಾದರೂ ಏನು ಮಾಡಿಯಾರು? ಅಗ್ರಭಾಗದಲ್ಲಿ ಬರೆದ ಕವಿತೆಯನ್ನು ಮನನ ಮಾಡಿದರೆ ಇದರ ಉತ್ತರ ಸ್ಪಷ್ಟವಾಗಿ ದೊರೆಯ ಬಹುದು ಸರಕಾರವು ಹಣ್ಣಾಗಲಿಕ್ಕೆ ಬಂದಿರುತ್ತಾರೆ ಗಂಟುಮೂಟೆಯನ್ನು ಕಟ್ಟಿ ಬೋಟಿಯನ್ನು ಹತ್ತಿರುತ್ತಾರೆ ಎಂಬ ಸಿದ್ಧಾಂತದ ಮೇಲೆ ಮಲ್ಲಿನಾಥೀ ಟೀಕೆಯು ಹಾಗೆ ಇದಕ್ಕೂ ಒಂದು ಟೀಕೆಯು ಅಥವಾ ಸಾಯನಾಚಾರ್ಯರ ಭಾಷ್ಯವು ಬಂದರೂ ಬರಬಹುದು ಇಂತಹ ಚಾತುರ್ಯದ ಟೀಕಾ ಭಾಷ್ಯಗಳನ್ನು ಬರೆಯುವದಕ್ಕೆ ಕಲಿಸುವ ಶಾಲೆಗಳಿದ್ದರೆ ಅಲ್ಲಿ ಹೋಗಿ ಕಲಿಯಲಿಕ್ಕೆ ನಾವು ತಯಾರ ಇದ್ದೇವೆ ಅಂತಹ ಶಾಲೆಗಳ ಪತ್ತೆಯು ಕೊಂಗ್ರೆಸದವರ ಹತ್ತರ ಇದ್ದರೆ ಅದನ್ನು ಕೊಟ್ಟರೆ ಜನರಿಗೆ ಒಂದು ಉಪಕಾರವಾದೀತು. ಯಾಕೆಂದರೆ

" ಸ್ವಯಮಪಿ ಲಿಖಿತಂ ಸ್ವಯಂ ನ ವಾಚಯತಿ "

ಎಂದಮೇಲೆ ಅದನ್ನು ಓದಿ ಅರ್ಥ ಹೇಳುವವರು ಯಾರಾದರೂ ಇದ್ದಾರೋ ಎಂತ ನೋಡುವದು ಕರ್ತವ್ಯವಲ್ಲವೇ? ನೀವು ದೇಶಸೇವಕರ ಇರಬಹುದು ನಾವು ಈಶಸೇವಕರು ಈಶಸ್ಮರಣೆ ಮಾಡಿ ನಮ್ಮ ಕೆಲಸವನ್ನು ಸಾಕ್ಷ ಮಾಡುತ್ತೇವೆ ಈಶನ ಇಚ್ಛೆ ಇದ್ದ ಹಾಗೆ ಆಗುವುದು ಯುದ್ಧದಲ್ಲಿ ಸತ್ತರೆ ಸ್ವರ್ಗಕ್ಕೆ ಹೋಗುವೆವು ಇದು ನಿಜವಾದ ಮಾತು ಇದನ್ನು ಲಕ್ಷ ಸಾರಿ ಹೇಳಿ ಯುದ್ಧಕ್ಕೂ ಮತ್ತು ಸ್ವರ್ಗಕ್ಕೆ ನಡುವೆ ಒಂದು "ಕಿ ಬಿಂದು ಬಿಟ್ಟಿತಲ್ಲ ಈ ಯುದ್ಧವೆಂದರೆ ಉತ್ತರ ಕುಮಾರನ ಬಡಾಯಿಯ ಯುದ್ಧ ಇದು ನಿಜವಾದ ಯುದ್ಧವಿದ್ದು ಸಾಯುವದೇ ನಿಜವಾದರೆ ಎಷ್ಟು ಮಂದಿ ಯುದ್ಧಕ್ಕೆ ಬರುತ್ತಿದ್ದರೋ ನೋಡಬೇಕಿತ್ತು ಹಾಗೆ ಸತ್ತರೆ ಸ್ವರ್ಗವು ಪಡೆಯ ಬಹುದು ಹಾಗೆ ಸಾಯುವ ಈಗ ನಡೆಸಿದ ದುರಾಗ್ರಹದ ಸತ್ಯಾಗ್ರಹವನ್ನು ಮಾಡಿದರೆ ಮಾತ್ರ ಯಾವ ಗತಿಯು ಬರುವದೆಂಬುದನ್ನು ವಾಚಕರೇ ಊಹಿಸಲಿ ಅವರಿಗೆ ಪಿಶಾಚ ಯೋನಿಗಿಂತ ಎರಡನೆಯ ಜನ್ಮವು ಬಂದೀತೇ ಹೇಗೆ? ನಮ್ಮ ಧರ್ಮಶಾಸ್ತ್ರಗಳ ಪ್ರಕಾರ ಬೇರೆ ಜನ್ಮವೇ ಸಾಧ್ಯವಿಲ್ಲ ಯಾರಾದರೂ ಈ ಸಂಸಾರದಲ್ಲಿಯ ಯಾತಾಯಾತಗಳನ್ನು ತಪ್ಪಿಸುವವರ ದೆಸೆಯಿಂದ ಮೋಕ್ಷವನ್ನು ಬಯಸುತ್ತಾರೆ ಆದರೆ ನಮ್ಮ ಕೊಂಗ್ರೆಸದ ದುರಾಗ್ರಹಿಗಳು ಬೇರೆಯವರನ್ನು ಕಾಡುವದೆಸೆಯಿಂದ ಈ ಜನ್ಮದಲ್ಲಿ ಕಾಡಿದ್ದು ಸಾಕಾಗುವದಿಲ್ಲವೆಂದೇ ತಿಳಿದು ಭೂತ ಪಿಶಾಚಗಳ ಜನ್ಮವನ್ನು ಬಯಸಿದರೆ ದೋಷವೇನು ಮಾಡಬೇಕು ಅವರವರ ಕರ್ಮಾನುಸಾರವಾಗಿಯೂ ವಾಸನಾನುಸಾರವಾಗಿಯೂ ಎರಡನೆಯ ಜನ್ಮವು ಬರುವುದು

" ಯಂಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್ ।
ತಂತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ " ॥

ಈ ಭಗವದುಕ್ತಿಪ್ರಕಾರ ಜೀವಂತ ಇರುವಾಗಲೇ ಭೂತ ಪಿಶಾಚಗಳ ಹಾಗೆ ಬೇರೆಯವರನ್ನು ಪೀಡಿಸುತ್ತಾ ಹೋದರೆ ಸತ್ತ ನಂತರ ಸಹ ಹಾಗೆಯೇ ಕಾಡಬೇಕೆಂತ ವಾಸನ ಇದ್ದು ಭೂತಪಿಶಾಚಗಳೇ ಆಗಬೇಕೆಂತ ಇಚ್ಛೆ ಇದ್ದರೆ ಅಂದವರಿಗೆ ಭಾವನೆಯಂತೆ ಫಲವು ದೊರೆಯದೆ ಇರುವದಿಲ್ಲ ಅಂಥವರಿಗೆ ಸ್ವರ್ಗವು ದೊರೆಯುವದಿಲ್ಲ ಮೋಕ್ಷವಾದರೂ ಹ್ಯಾಗೆ ದೊರೆಯಬೇಕು? ಇದನ್ನು ಸುಜ್ಞ ವಾಚಕರೇ ನೋಡಲಿ

೫ ಇನ್ನು ಕೆಲವು ಮಹತ್ವದ ಸಂಗತಿಗಳು ಕೊಂಗ್ರೆಸದ ಹಸ್ತಪತ್ರಕದಲ್ಲಿ ದೊರೆಯುತ್ತವೆ ಅಂಕೋಲೆಯು ಒಂದು ರಣಕ್ಷೇತ್ರವೆಂದು ತಿಳಿದಿರಿ ಅಲ್ಲಿ ವಿಜಯಲಕ್ಷ್ಮಿಗಳ ಕೈಸ್ತೈಪೂ ಬಿಟ್ಟುಹೋಗಿದೆಯೆಂದು ತಿಳಿಯಿರಿ ನಮ್ಮ ಸ್ವಪ್ನದಲ್ಲಿ ನಮ್ಮ ದೇಶದ ನಾನಾ ಭಾಗಗಳಿಂದ ಸೈನಿಕರು ಮಾತೃಭೂಮಿಯ ಮಾನ ಸಂರಕ್ಷಣೆಗಾಗಿ ತಮ್ಮ ರಕ್ತಧಾರೆಯನ್ನೆರೆಯಲು ಅಂಕೋಲೆಯಲ್ಲಿ ಸೇರಿರುವರೆಂದು ತಿಳಿಯಿರಿ ಇದ್ದಕ್ಕಿದ್ದ ಹಾಗೆ ಭಾಸ ದೊರೆ ಏನೇನೋ ಇದ್ದ ಕಲ್ಪನಾವ ಸೃಷ್ಟಿ ಇನ್ನೂ ಏನೇನು ತಿಳಿಯಬೇಕ ... ಕಲ್ಪಿಸಿ ... ಉದ್ಯೋಗವು ... ವಾಗಿ ... ಹಾಗೆ ಕಲ್ಪನಾಮಯ ಸೃಷ್ಟಿಯಲ್ಲಿ ಅರಸನಾದನೆಂತ ತಿಳಿದ ... ತನಗೆ ಒಲಿಸಲಿಕ್ಕೆ ... ತಿಳಿದು ಕಾಲಿನಿಂದ ಒದ್ದ ತನ್ನ ... ವಡಿಕೆಯನ್ನು ಪ್ರತಿಪ್ರತಿ ಮಾಡಿದ ... ಇವನ ಕಥೆಯು ... ಅಂಕೊಲೆಯನ್ನೇ ರಣಕ್ಷೇತ್ರ ಯಾರು ಮಾಡಿದರು ಇಡೀ ಹಿಂದುಸ್ಥಾನದಲ್ಲಿ ಅಥವಾ ಇಡೀ ಕರ್ನಾಟಕ ... ಎರಡನೇಯ ಊರೇ ರಣಕ್ಷೇತ್ರದ ಪದವಿಯಿಂದ ಸಿಗಲಿಲ್ಲವೋ ಏನು? ಅಂಕೋಲೆಯವರು ಅರ್ಜಿ ಮಾಡಿ ಈ ರಣಕ್ಷೇತ್ರದ ಸ್ಥಾನವು ಬೇಡಿಯವರಿ ... ನಮ್ಮ ... ಮಾಡಿದರೋ ಹೇಗೆ? ಅಥವಾ ... ಅಕ್ಷರಶಃ ... ಎರಡನೆಯ ದಶೆಯಲ್ಲಿ ... ರಣಕ್ಷೇತ್ರ ಮಾಡಿದರೋ ... ಇಟ್ಟು ಸ್ಪಷ್ಟವಾಗಿ ತಿಳಿಸಿರಿ ಇದನ್ನು ನೋಡಿದರೆ ಮೇಲಿನ ಅಗ್ರಭಾಗದಲ್ಲಿ ಬರದ ಕವಿತೆಯು ... ಯಾರೋ ಒಬ್ಬರು ... ಬೆಂಕಿಯು ... ಒದನ್ನು ಮಗನು ... ಸೂಚಿತ ಆ ಬೆಂಕಿಯಲಿ ತನ್ನ ಕೈಯನ್ನು ... ಮಾಡಿದರ ತನ್ನ ... ಎಂತ ... ತಪ್ಪಿಸುವದರ ದೆಸೆಯಿಂದ ಹತ್ತರ ಇದ್ದ ಒಂದು ಬೆಕ್ಕನ್ನು ಕರೆದು ಸ್ನೇಹಭಾವದಿಂದ ... ಬೆಕ್ಕಿನ ಕೈಯಿಂದ ಆ ... ತೆಗೆಸಿತು ... ಬೆಕ್ಕಿಗೆ ... ಮಂಗ್ಯಾ ... ಜಿಂದ ಎಂತ ... ಒಲಿಗೂಡ್ಡಿದ್ದು ಅಂಕೋಲೆಯ ನಾದವರಿಗೆ ಹೋಲಿಸುವ ... ಮಾತ್ರ ಹಿಂದ ಅನಾಮಧೇಯರಾಗಿ ನಿಂತು ... ಒಳಗೆ ಅದವಾ ಸಂಸ್ಥಾನದ ಒಳಗೆ ಕದ್ದು ನಿಂತು ಅಲ್ಲಿ ... ಒಗೆಯುತ್ತಾ ಸಂರಕ್ಷಿತರಾಗಿ ಇರುವರು ಹೀಗೆ ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಕಾದಾಡುವ ಬಂಟರು ತಮ್ಮ ತಮ್ಮ ಊರು ಜಿಲ್ಲೆ ಬಿಟ್ಟು ಅಂಕೋಲೆಗೆ ಮಾತ್ರ ಯಾತಕ್ಕೆ ಬರಬೇಕು? ಇದು ಭಾರತಮಾತೆಯರ ಕ್ಷೇತ್ರಸ್ಥಾನವಲ್ಲವೇ? ಭಾರತದೇಶವೆಂದರೆ ಒಂದು ಅಂಕೋಲೆಯಂತಲೇ ತಿಳಿಯಬೇಕೂ ಹ್ಯಾಗೆ? ಇದು ಕಲಿಯುಗದ ಪ್ರಭಾವ ಇದರ ವಿಚಾರವನ್ನು ವಾಚಕರೇ ಮಾಡಲಿ

ಒಬ್ಬ ದೇಶಬಂಧು.

M P, Karwar

ಸಿಗದಿದ್ದರೂ ಸಾವ್ಕಾರರ ಹಾವಳಿಯಿಂದ ಬಿಡುಗಡೆಯಾಗುವ ಸಮಯವು ಸ್ವಲ್ಪಾವಕಾಶದಿಂದಾದರೂ ಇನ್ನಿತರ ವಿಧದಿಂದ ಸಹ ಬಂದೇ ಬರುವದು. ಇದನ್ನು ಅರಿತ ಈಗಿನ ನಮ್ಮ ಸಹಾಯಕ ಅಸಹಕಾರ ಬಂಧುಗಳು ನಮ್ಮನ್ನು ಮುಂದಾಗಿ ಹಾದಿಗೆ ಹಚ್ಚಿ ನಮ್ಮ ರೈತರಲ್ಲಿ " ಏನೂ ಉಳಿದಿಲ್ಲ " ಎಂಬ ಸ್ವಸ್ತಿವಚನವನ್ನು ಹಾಡಲಿಕ್ಕೆ ಹಚ್ಚಿಲ್ಲವೆ.

ಈ ಮಹಾನುಭಾವರು ತೋರಿಸಿದ ಯುಕ್ತಿಯು ಚಮತ್ಕಾರಿಕವಿದ್ದೆ. ನಮ್ಮ ಭಾವಿಕತನದ ಫಾಯದೆಯನ್ನು ಹೇಗೆ ತೊಂಡರೆಂತ ನೋಡಿರಿ ಗುಡಿಗೆ ಕರೆದೊಯ್ದು ಕರನಿರಾಕರಣೆಯ ಪ್ರತಿಜ್ಞಾ ಶಪಥ ವಿಧಿಗಳನ್ನು ಮಾಡಿಸಿದರು. ಇದರಂತೆಯೇ ವಿದ್ಯಾಬುದ್ಧಿಗಳನ್ನರಿತ ಸುಶಿಕ್ಷಿತರ ಸೋಗಿನ ಶಪಥಗಳೂ ಆದವು. ಸೋಗಿನ ಶಪಥಗಳ ಪರಿಣಾಮವು ನಡೆಸೆಯು ಪಕೀರಯಾಗಿ ಭಾವಿಕರ ಭಾವಿಕತನದ ಶಪಥ ವಿಧಿಗಳ ಪೇಚಾಟವು ಇನ್ನೂ ತಪ್ಪಿಲ್ಲ. ಇದರ ಪರಿಣಾಮವು ಈಗ ಹೀಗಾಗಿರುವದಲ್ಲ—

ರೈತರಲ್ಲಿ ಎಷ್ಟೋ ಜನರಿಗೆ ಬಂದಿವಾಸ ಮನೆ ಜಪ್ತಿ ಹೊಲಮನೆಯ ಹಾಲಸಾತಿ ಮನೆಮಾರು ಬಿಟ್ಟು ದಿಕ್ಕಿಲ್ಲದವರಾಗಿ ಹೋಗುವದು. ಇವೇ ಮೊದಲಾದ ಕಷ್ಟನಷ್ಟಗಳ ಸ್ಥಿತಿ ಈ ಸ್ಥಿತಿಯು ವಿಶೇಷತಃ ಬಡ ರೈತರ ಬಾಳಿನ ಮೇಲೆ ಬಂದದ್ದು ಬಹು ದುಃಖಕರವಾದ ಮಾತು. ಮಾತಿನಿಂದ ಮರುಳುಗೊಳಿಸಿದ ಮಹನೀಯರು ತಮ್ಮ ಹೊಲಮನೆಯ ಶಿರಿಗೆಯನ್ನು ತಾವು ಅಥವಾ ತಮಗೆ ಬೇಕಾದವರ ಮುಖಾಂತರವಾಗಿ ಕೊಟ್ಟು ತಮ್ಮ ಜೀವನದ ಸುರಕ್ಷಿತೆಯನ್ನು ಹಿಂದಿನಂತೆಯೇ ಇಂದಿಗೂ ಕಾದಕೊಂಡಿದ್ದಾರೆ ಈ ಮಹನೀಯರಲ್ಲಿ ಕೆಲವರು ಅನ್ಯ ಕಾರಣದಿಂದ ಬಂದಿವಾಸದಲ್ಲಿದ್ದರೂ ಹೊಲಮನೆಯ ಶಿರಿಗೆಯನ್ನು ಕೊಡದಿದ್ದ ಕಾರಣಕ್ಕಾಗಿ ಬಂದಿವಾಸಕ್ಕೀಡಾಗಲಿಲ್ಲ ಇದೊಂದು ಯಾವಾಗಲೂ ನೆನಪಿನಲ್ಲಿಡಬೇಕಾದ ಮಾತು. ಇವರ ಜಂಡಕ ನರಿಯ ನೀತಿಯನ್ನು ಧ್ಯಾನಕ್ಕೆ ತರ್ರಿ. ಬಲಿ ಬೀಳಬೇಡಿರಿ

ಯಾವ ಸುವ್ಯವಸ್ಥಿತ ರಾಜರ ಕಾಲಕೀರ್ದಿಯಲ್ಲಿಯೂ ಕರ ಕೊಡುವದು ಇಲ್ಲದೇ ಇಲ್ಲ. ಸ್ವರಾಜ್ಯದಲ್ಲಿ ಈಗಿನಕ್ಕಿಂತಲೂ ಹೆಚ್ಚಿನ ತೆರಿಗೆ ಕೊಡುವ ಪ್ರಸಂಗ ಬಂದೇ ಬರುವದು ಕರ ಕೊಡುವದು ನಮ್ಮ ಜೀವಿತದ ಸುರಕ್ಷಿತತೆಯ ಬಗ್ಗೆಯೇ ಅದೆ, ಕರ ಕೊಡಬೇಡಿರೆಂದು ಹುರಿದುಬ್ಬಿಸುವ ಆಡಂಬರದ ಮಾತಿನಿಂದ ಮತಿಗೆಡಬೇಡಿರಿ. ನಿಮ್ಮ ಹೊಲಮನೆ ಹೋದರೆ ಕಾಂಗ್ರೆಸ್ಸಾಗಲಿ ಅದರ ಪ್ರಚಾರಕರಾಗಲಿ ಕೊಡುವಂತಿಲ್ಲ ಆಕೆಗೆ ಬಲಿ ಬಿದ್ದು ನಾಶವನ್ನು ತಂದುಕೊಳ್ಳಬೇಡಿರಿ. ಇದಕ್ಕೆ ಯಾರೂ ಎಂದೂ ಹೊಣೆಯಾಗಲಾರರು ಆದುದರಿಂದ ಬಾಂಧವರೇ, ಬೇಗನೇ ನಿಮ್ಮ ಕಿರ್ವೆಯನ್ನು ಕೊಟ್ಟು ಪಾರಾಗಿರಿ ಇನ್ನುಮುಂದೆ ಇಂಥ ಹುಚ್ಚು ಕೆಲಸದಲ್ಲಿ ತೊಡಗದಿರುವದೇ ಲೇಸು

ಇನ್ನು ಲಕ್ಷದಲ್ಲಿಡತಕ್ಕ ಮಾತೇನೆಂದರೆ – ನಮ್ಮ ಸರಕಾರವು ಇನ್ನುಮುಂದೆ ನಮಗೆ ದಯಪಾಲಿಸುವ ಜನತೆಯ ಕಾರಭಾರವು ತಾವು ತಮ್ಮ ಕಿರ್ವೆಯನ್ನು ಕೊಟ್ಟು ನಮ್ಮನ್ನು ಈ ಕರನಿರಾಕರಣೆಯಲ್ಲಿ ತೊಡಗಿಸಿದ ಅಪಮತಲಬಿ ಅತ್ಯಲ್ಪ ಮಂದಿಯ ಕೈಯಲ್ಲಿ ಮುಂದಿನ ರಾಜಕಾರಭಾರವು ಹೋಗದಂತೆ ಜನಜಾಗ್ರತೆಯನ್ನು ಮಾಡುವದು ಜವಾಬು ಹೋದರೆ ನಿಮ್ಮ ಮತ ಕೊಡುವ ಶಕ್ತಿ ಕಮ್ಮಿಯಾಗುವದು ಈಗ ಈ ವಿಧದಿಂದ ನಮ್ಮ ಆಚರಣೆಯು ಇರದಿದ್ದರೆ ನಮ್ಮ ಹಿತವಾದಿಗಳೆನ್ನುವ ಉಪದೇಶಕರ ಕೈಯಲ್ಲಿ ಅಡಳಿತೆಯು ಹೋಗಿ ಇಂದಿನ ಬಾಳುವೆಯು ಸಹ ಇನ್ನುಮುಂದೆ ಚನ್ನಾಗಿ ಉಳಿಯದು. ಈ ಪರಿಸ್ಥಿತಿಯನ್ನು ಪೂರ್ಣ ಲಕ್ಷಕ್ಕೆ ತಂದ ನಮ್ಮ ರೈತರ ಸಂಘಟನೆಯನ್ನು ಸುವ್ಯವಸ್ಥಿತವಾಗಿ ಮಾಡುವದರ ಬಗ್ಗೆ ನಮ್ಮ ರೈತವರ್ಗದ ಪುಢಾರಿಗಳು ಈಗಿನಿಂದಲೇ ಆಲೋಚಿಸಿ ಅವರಲ್ಲೇ ಪ್ರಯತ್ನಿಸುವದೇ ಹೊರತು ರೈತರ ಗೋಳಿಗೆ ಕಾರಣವಾದ ಈ ಅನಿಷ್ಟ ಚಳವಳಿಯಿಂದ ತಾವು ದೂರಾಗುವದು ಲೇಸು ಇಂಥ ಸುಸಂಧಿಯನ್ನು ಕಳಕೊಳ್ಳಲಾಗದು ಕಾರಣ ನಮ್ಮ ರೈತಬಾಂಧವರೇ ರೈತಪೀಳಿಗೆಯ ಬಾಳಿಗೆಲ್ಲ ಗೋಳಿಗೆ ಕಾರಣವಾಗುವ ಈ ಅನಿಷ್ಟ ಅಸಹಕಾರ ಚಳವಳಿಯಿಂದ ದೂರ ಇದ್ದು ನಮ್ಮ ರೈತಬಾಂಧವರ ಬಾಳನ್ನು ಸುರಕ್ಷಿತವಾಗಿಡುವ ರೈತ ಸಂಘಟನೆಯನ್ನು ಮಾಡುವದರಲ್ಲಿ ನಿಮ್ಮ ಬುದ್ಧಿ, ಸಾಹಸ ಕಾಲಗಳನ್ನು ವ್ಯಯ ಮಾಡಬೇಕಾಗಿಯೂ ನಮ್ಮ ದೇಶ ಮತ್ತು ಜನಾಂಗದ ಏಳಿಗೆಗೆ ತಕ್ಕದಾದ ಸನದಶೀರ ಮಾರ್ಗದಿಂದ ಶಾಂತತೆಯಿಂದ ನಡೆದು ನಮ್ಮ ಜೀವಿತದ ಕರ್ತವ್ಯಗಳನ್ನು ಆಳವಾಗಿ ವಿಚಾರಿಸಿ ರೈತರ ಜೀವಾಳವಾಗಿರುವ ಒಕ್ಕಲತನವನ್ನು ಮತ್ತು ಅದಕ್ಕೆ ಸಂಬಂಧಿಸಿದ ಆರ್ಥಿಕೋನ್ನತಿಯ ಇತರ ಉಪಧಂದೆಗಳನ್ನೂ ಕೈಕೊಳ್ಳಬೇಕಾಗಿ ನಮ್ರತಾಪೂರ್ವಕವಾಗಿ ಬಿನ್ನೈಸುತ್ತೇನೆ

ಕಾರವಾರ ಜಿಲ್ಲಾ }
೧—೮—೧೯೩೦. }

ತಮ್ಮೋರ್ವ ಕಳವಳಿಯ ರೈತಬಂಧು.

M P Karwar

ಹೇಳುವರು ಇದೇನು ಸತ್ಯಾಗ್ರಹವೋ?

ಇದೇನು ಇವನ ಮನೋವಿಕಾರವೋ? ಸ್ವಪ್ನವೋ? ಈ ಮಾತನ್ನು ಯಾರು ಹೇಳುವರು? ಈ ರೀತಿ ಸುಳ್ಳು ಬರೆಯಲು ನಾಚಿಕೆ ಬರುವದಿಲ್ಲವೇ? ನಮ್ಮ ಜೀವವಿರುವವರೆಗೂ ನಾವು ಸತ್ಯಾಗ್ರಹಿ ಪಟ್ಟಾಳನ್ನು ದೇಶದ್ರೋಹಿಗಳಿಗೆ ದಕ್ಕ ಕೊಡಲಿಕ್ಕಿಲ್ಲ. ಈ ಮಾತನ್ನು ನಾವು ಹೇಳುವದು ನಿಜ. ನಾವು ದೇಶ ಸೇವಕರು. ಈ ಯುದ್ಧದಲ್ಲಿ ಸತ್ತರೆ ಸ್ವರ್ಗಕ್ಕೆ ಹೋಗುವೆವು ಎಂದೆಂದಿಗೂ ಪಿಶಾಚಿಗಳಾಗುವದಿಲ್ಲ ದೇಶದ್ರೋಹಿಗಳೂ ದುರಾಶೆಯಿಂದ ಅನ್ಯರ ದೇಶವನ್ನು ಆಕ್ರಮಿಸುವವರೂ ಪರವಿತ್ತವನ್ನು ಜೀರ್ಣಿಸಿಕೊಳ್ಳಲಾರದೆ ಪಿಶಾಚಿಗಳಾಗುವುದು ಖಂಡಿತ

೪ ಈ ಎರಡೂ ಪತ್ರಗಳ ಉತಾರೆಯನ್ನು ನೋಡಿ ಇದು ಯಾರ ಮನೋವಿಕಾರ, ಯಾರ ಸ್ವಪ್ನ, ಯಾರು ಸುಳ್ಳು ಹೇಳುತ್ತಾರೆ, ಯಾರಿಗೆ ನಾಚಿಕೆ ಬರಬೇಕೆಂದು ವಾಚಕರೇ ಊಹಿಸಲಿ. ಇದೇ ಕೊಂಗ್ರೆಸದ ಸತ್ಯಾಗ್ರಹಿಗಳ ಸತ್ಯಪ್ರಿಯತೆ. ಆದರೂ ಏನಾದರೂ ಏನು ಮಾಡಿಯಾರು? ಅಗ್ರಭಾಗದಲ್ಲಿ ಬರೆದ ಕವಿತೆಯನ್ನು ಮನನ ಮಾಡಿದರೆ ಇದರ ಉತ್ತರ ಸ್ಪಷ್ಟವಾಗಿ ದೊರೆಯ ಬಹುದು 'ಸರಕಾರವು ತಣ್ಣಗಲಿಕ್ಕೆ ಬಂದಿರುತ್ತಾರೆ ಗಂಟುಮೂಟೆಯನ್ನು ಕಟ್ಟಿ ಬೋಟಿಯನ್ನು ಹತ್ತಿರುತ್ತಾರೆ ' ಎಂಬ ಸಿದ್ಧಾಂತದ ಮೇಲೆ ಮಲ್ಲಿನಾಥೀ ಟೀಕೆಯ ಹಾಗೆ ಇದಕ್ಕೂ ಒಂದು ಟೀಕೆಯು ಅಥವಾ ಸಾಯನಾಚಾರ್ಯರ ಭಾಷ್ಯವು ಬಂದರೂ ಬರಬಹುದು. ಇಂತಹ ಚಾತುರ್ಯದ ಟೀಕಾ ಭಾಷ್ಯಗಳನ್ನು ಬರೆಯುವದಕ್ಕೆ ಕಲಿಸುವ ಶಾಲೆಗಳಿದ್ದರೂ ಅಲ್ಲಿ ಹೋಗಿ ಕಲಿಯಲಿಕ್ಕೆ ನಾವು ತಯಾರ ಇದ್ದೇವೆ. ಅಂತಹ ಶಾಲೆಗಳ ಪತ್ತೆಯು ಕೊಂಗ್ರೆಸವರ ಹತ್ತರ ಇದ್ದರೆ ಅದನ್ನು ಕೊಟ್ಟರೆ ಜನರಿಗೆ ಒಂದು ಉಪಕಾರವಾದೀತು. ಯಾಕೆಂದರೆ

" ಸ್ವಯಮಪಿ ಲಿಖಿತಂ ಸ್ವಯಂ ನ ವಾಚಯತಿ "

ಎಂದಮೇಲೆ ಅದನ್ನು ಓದಿ ಅರ್ಥ ಹೇಳುವವರು ಯಾರಾದರೂ ಇದ್ದಾರೋ ಎಂತ ನೋಡುವದು ಕರ್ತವ್ಯವಲ್ಲವೇ? ನೀವು ದೇಶಸೇವಕರು ಇರಬಹುದು ನಾವು ಈಶಸೇವಕರು. ಈಶಸ್ಮರಣೆಮಾಡಿ ನಮ್ಮ ಕೆಲಸವನ್ನು ನಾವು ಮಾಡುತ್ತೇವೆ ಈತನ ಇಚ್ಛೆ ಇದ್ದ ಹಾಗೆ ಆಗುವುದು 'ಯುದ್ಧದಲ್ಲಿ ಸತ್ತರೆ ಸ್ವರ್ಗಕ್ಕೆ ಹೋಗುವೆವು ' ಇದು ನಿಜವಾದ ಮಾತು ಇದನ್ನು ಲಕ್ಷ ಸಾರಿ ಹೇಳಿರಿ ಯುದ್ಧಕ್ಕೆ ಸತ್ತು ಸ್ವರ್ಗಕ್ಕೆ ನಡುವೆ ಒಂದು "ರೆ' ಬಿಂದು ಬಿಟ್ಟಿತಲ್ಲ. ಈ ಯುದ್ಧವೆಂದರೆ ಉತ್ತರ ಕುಮಾರನ ಬಡಾಯಿಯ ಯುದ್ಧ ಇದು ನಿಜವಾದ ಯುದ್ಧವಿದ್ದು ಸಾಯುವದೇ ನಿಜವಾದರೆ ಎಷ್ಟು ಮಂದಿ ಯುದ್ಧಕ್ಕೆ ಬರುತ್ತಿದ್ದರೋ ನೋಡಬೇಕಿತ್ತು ಹಾಗೆ ಸತ್ತರೆ ಸ್ವರ್ಗವೂ ಪಡೆಯ ಬಹುದು ಹಾಗೆ ಸಾಯದೆ ಈಗ ನಡೆಸಿದ ದುರಾಗ್ರಹದ ಸತ್ಯಾಗ್ರಹವನ್ನು ಮಾಡಿದರೆ ಮಾತ್ರ ಯಾವ ಗತಿಯು ಬರುವುದೆಂಬುದನ್ನು ವಾಚಕರೇ ಊಹಿಸಲಿ. ಅವರಿಗೆ ಪಿಶಾಚ ಯೋನಿಗಿಂತ ಎರಡನೆಯ ಜನ್ಮವು ಬಂದೀತೇ ಹೇಗೆ? ನಮ್ಮ ಧರ್ಮಶಾಸ್ತ್ರಗಳ ಪ್ರಕಾರ ಬೇರೆ ಜನ್ಮವೇ ಸಾಧ್ಯವಿಲ್ಲ ಯಾರಾದರೂ ಈ ಸಂಸಾರದಲ್ಲಿಯ ಯಾತಾಯಾತಗಳನ್ನು ತಪ್ಪಿಸುವದರೆ ದೆಸೆಯಿಂದ ಮೋಕ್ಷವನ್ನು ಒಯುಸುತ್ತಾರೆ ಆದರೆ ನಮ್ಮ ಕೊಂಗ್ರೆಸದ ದುರಾಗ್ರಹಿಗಳು ಜೀರೆಯವರನ್ನು ಕಾಡುವದೆಸೆಯಿಂದ ಈ ಜನ್ಮದಲ್ಲಿ ಕಾಡಿದ್ದು ಸಾಕಾಗುವದಿಲ್ಲವೆಂದೇ ತಿಳಿದು ಭೂತ ಪಿಶಾಚಗಳ ಜನ್ಮವನ್ನೇ ಬಯಸಿದರು ಯಾರೇನು ಮಾಡಬೇಕು ಅವರವರ ಕರ್ಮಾನುಸಾರವಾಗಿಯೂ ವಾಸನಾನುಸಾರವಾಗಿಯೂ ಎರಡನೆಯ ಜನ್ಮವು ಬರುವುದು

" ಯಂಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್ ।
ತಂತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ " ॥

ಈ ಭಗವದುಕ್ತಿಪ್ರಕಾರ ಜೀವಂತ ಇರುವಾಗಲೇ ಭೂತ ಪಿಶಾಚಗಳ ಹಾಗೆ ಜೀರೆಯವರನ್ನು ಪೀಡಿಸುತ್ತಾ ಹೋದರೆ ಸತ್ತ ನಂತರ ಸಹ ಹಾಗೆಯೇ ಕಾಡಬೇಕೆಂತ ವಾಸನೆ ಇದ್ದು ಭೂತಪಿಶಾಚಗಳೇ ಆಗಬೇಕೆಂತ ಇಚ್ಛೆ ಇದ್ದರೆ ಅಂದವರಿಗೆ ವಾಸನೆಯಂತೆ ಫಲವು ದೊರೆಯದೆ ಇರುವದಿಲ್ಲ ಅಂಥವರಿಗೆ ಸ್ವರ್ಗವು ದೊರೆಯುವದಿಲ್ಲ ಮೋಕ್ಷವಾದರೂ ಹ್ಯಾಗೆ ದೊರೆಯಬೇಕು? ಇದನ್ನು ಸುಜ್ಞ ವಾಚಕರೇ ನೋಡಲಿ.

೫ ಇನ್ನು ಕೆಲವು ಮುಕ್ತಾಫಲಗಳು ಕೊಂಗ್ರೆಸದ ಹಸ್ತಪತ್ರಕದಲ್ಲಿ ದೊರೆಯುತ್ತವೆ " ಅಂಕೋಲೆಯು ಒಂದು ರಣಕ್ಷೇತ್ರವೆಂದು ತಿಳಿಯಿರಿ ಅಲ್ಲಿ ಉಭಯಪಕ್ಷಗಳ ಸೈನ್ಯವೂ ಜಟ್ಟುಗೂಡಿವೆಯೆಂದು ತಿಳಿಯಿರಿ ನಮ್ಮ ಸ್ವಪ್ನದಲ್ಲಿ ನಮ್ಮ ದೇಶದ ನಾನಾ ಭಾಗಗಳಿಂದ ಸೈನಿಕರು ಮಾತೃಭೂಮಿಯ ಮಾನ ಸಂರಕ್ಷಣೆಗಾಗಿ ತಮ್ಮ ರಕ್ತಧಾರೆಯನ್ನೆರೆಯಲು ಅಂಕೋಲೆಯಲ್ಲಿ ನೆರೆದಿರುವರೆಂದು ತಿಳಿಯಿರಿ ವಗೈರೆ " ಶಾಭಾಸ, ಶೂರರೇ ಧೀರರೇ ವೀರರೇ. ನಿಮ್ಮ ಕಲ್ಪನಾಮಯ ಸೃಷ್ಟಿಯಲ್ಲಿ ಇನ್ನೂ ಏನೇನು ತಿಳಿಯಬೇಕು. ನಿಮ್ಮ ಗಾಯಿ ಇದರ ಹುದುಗಗಳನ್ನು ಕಟ್ಟಿಕೊಂಡ ಉಪಯೋಗವು ಚೆನ್ನಾಗಿ ನಡೆಯಲಿ ಹಾಗೆ ಕಲ್ಪನಾಮಯ ಸೃಷ್ಟಿಯಲ್ಲಿ ಅರಸನಾದನೆಂತ ತಿಳಿದು ಹಾಗೆಯೇ ವಾಡಿಯ ತನಗೆ ಒಲಿಸಲಿಕ್ಕೆ ಬಂದಳೆಂತು ತಿಳಿದು ಕಾಲಿನಿಂದ ಒದ್ದು ತನ್ನ ನಣ್ಣಿನ ಮಡಕೆಯನ್ನು ಫಡಿಫಡಿ ಮಾಡಿದ ಅಲಿನಾಸ್ಕರ ಇವನ ಕತೆಯು ನೆನಪಾಗುತ್ತದೆ ಅಂಕೋಲೆಯನ್ನೇ ರಣಕ್ಷೇತ್ರ ಯಾರು ಮಾಡಿದರು ಇಡೀ ಹಿಂದುಸ್ಥಾನದಲ್ಲಿ ಅಥವಾ ಇಡೀ ಕರ್ನಾಟಕ ದೇಶದಲ್ಲಿ ಎರಡನೇಯ ಊರೇ ರಣಕ್ಷೇತ್ರದ ದೆಸೆಯಿಂದ ಸಿಗಲಿಲ್ಲವೋ ಏನು? ಅಂಕೋಲೆಯವರು ಅರ್ಜಿ ಮಾಡಿ ಈ ರಣಕ್ಷೇತ್ರದ ಮಾನವು ಜೀರೆಯವರಿಗೆ ಸಿಗಬಾರದು. ನಮಗೇನೇ ಸಿಗಬೇಕೆಂತ ಒತ್ತಾಯ ಮಾಡಿದರೋ ಹೇಗೆ? ಅಥವಾ ಅಂಕೋಲೆಯವರಷ್ಟು ಒಳ್ಳೆಯರು ನಿಮಗೆ ಎರಡನೆಯ ಕಡೆಯಲ್ಲಿ ಸಿಗಲಿಲ್ಲವೆಂತಲೇ ಇದನ್ನು ರಣಕ್ಷೇತ್ರ ಮಾಡಿದರೋ? ಇದನ್ನು ದೇವರ ಸಾಕ್ಷಿ ಇಟ್ಟು ಸ್ಪಷ್ಟವಾಗಿ ತಿಳಿಸಿರಿ ಇದನ್ನು ನೋಡಿದರೆ ಮೇಲಿನ ಅಗ್ರಭಾಗದಲ್ಲಿ ಬರೆದ ಕವಿತೆಯು ನೆನಪಾಗುತ್ತದೆ ಯಾರೋ ಒಬ್ಬರು ಗೇರನ್ನು ಕೊಯಿಸಲಿಕ್ಕೆ ಬೆಂಕಿಯ ಒಲೆಗೆ ಹಾಕಿದ್ದರು. ಅದನ್ನು ಮರದ ಮೇಲಿನಿಂದ ಒಂದು ಮಂಗನು ನೋಡಿತು. ಆ ಬೆಂಕಿಯಲ್ಲಿ ತನ್ನ ಕೈಯನ್ನು ಹಾಕಿ ಗೇರನ್ನು ತೆಗೆಯಲಿಕ್ಕೆ ಅದನ್ನು ಮಾಡಿದರ ತನ್ನ ಕೈ ಸುಟ್ಟೀತು ಎಂತ ಅದಕ್ಕೆ ಅರಿವು ಇತ್ತು ಅದನ್ನು ತಪ್ಪಿಸುವದರ ದೆಸೆಯಿಂದ ಹತ್ತರ ಇದ್ದ ಒಂದು ಬೆಕ್ಕನ್ನು ಕರೆದು ಸ್ನೇಹಭಾವದಿಂದ ಮಾತುಕಥೆ ಹೇಳಿ ಬೆಕ್ಕಿನ ಕೈಯಿಂದ ಆ ಗೇರನ್ನು ತೆಗೆಸಿತು ಕೈ ಸುಟ್ಟದ್ದು ಬೆಕ್ಕಿಗೆ ಗೇರು ಸಿಕ್ಕಿದ್ದು ಮಂಗಕ್ಕೆ ಹಾಗೆ ವೀರರು ಶೂರರು ಧೀರರು ಎಂತ ಹುರಿದುಂಬಿ ಎಲೆಗೊಟ್ಟಿದ್ದು ಅಂಕೋಲೆಯ ನಾಡವರಿಗೆ ಹುರಿದುಂಬಿಸುವವರು ಮಾತ್ರ ಹಿಂದೆ ಅನಾಮಧೇಯರಾಗಿ ನಿಂತು ಪಡದಿಯೊಳಗೆ ಅಥವಾ ಸಂಸ್ಥಾನದ ಒಳಗೆ ಕದ್ದು ನಿಂತು ಅಲ್ಲಿ ಅಂದಿಗೆಗ ಮೇಲೆ ಲಗಾ ಒಗೆಯುತ್ತಾ ಸುರಕ್ಷಿತರಾಗಿ ಇರುವರು ಹೀಗೆ ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಕಾದಾಡುವ ಬಂಟರು ತಮ್ಮ ತಮ್ಮ ಊರು ಜಿಲ್ಲೆ ಬಿಟ್ಟು ಅಂಕೋಲೆಗೆ ಮಾತ್ರ ಯಾತಕ್ಕೆ ಬರಬೇಕು? ಇದು ಭಾರತಮಾತೆಯರ ಕ್ಷೇತ್ರಸ್ಥಾನವಲ್ಲವೇ? ಭಾರತದೇಶವೆಂದರೆ ಒಂದು ಅಂಕೋಲೆಯೆಂತಲೇ ತಿಳಿಯಬೇಕೊ ಹ್ಯಾಗೆ? ಇದು ಕಲಿಯುಗದ ಪ್ರಭಾವ ಇವರ ವಿಚಾರವನ್ನು ವಾಚಕರೇ ಮಾಡಲಿ

ಒಬ್ಬ ದೇಶಬಂಧು.

A. P. Karwar

ಬಾಲವಿಲ್ಲದ ನರಿಯೋ? "ವಾ" ಅದು ಇದ್ದ ನರನೋ?

ಮೊದಲೆ ಮರ್ಕಟ ಮೇಲೆ ಮದ್ಯದ
ಮದವ್ಯಥೆಯು ಹಿಡಿದಿರಲು ವೃಶ್ಚಿಕ
ತುದಿಯ ಕಾಲನು ಕಚ್ಚಿದರೆ

[illegible] ವಾಚಕರೇ ಊಹಿಸಲಿ ಆ ಮರ್ಕಟವು ಕುಣಿದಾಡುವದು ಆ ಪ್ರಕಾರ ಕೊಂಗ್ರೆಸ ಲೇಖಕರ [illegible] ಅದನ್ನು ಹೆಚ್ಚಿಗೆ ವಿಸ್ತಾರ ಮಾಡಿ ಬರೆಯ ಬೇಕೆಂತಿಲ್ಲ. ಬಾಲವಿಲ್ಲದ ನರಿ ಯಾರು? ತಮಗೆ [illegible] ಇದ್ದ ಜಮೀನು ಕುತ್ತಿಗೆಯಾಟಾ ಸಾಲದಲ್ಲಿ ಮುಳುಗಿಸಿ ಸರಕಾರಕ್ಕೆ ತಿರ್ವೆ ಕೊಡುವ [illegible] ಮುಂದೆ [illegible] "ಸರಕಾರಕ್ಕೆ ತೀರ್ವೆಯನ್ನೇ ಕೊಡಬೇಡಿರಿ ಜಮೀನು ಕಳೆಕೊಳ್ಳಿರಿ, ನಮ್ಮ [illegible] ಎಂದು [illegible] ನರಿಗಳೊ? ಅಥವಾ ಯಾರು ಎಂದು ವಾಚಕರೇ ಊಹಿಸಲಿ. [illegible] ಯಾರು? [illegible] ಯಾರು? ಬಾಲವಿಲ್ಲದ ನರಿಯು ಒಂದೇ ಇತ್ತು ಅದೇ [illegible] ಉಪದೇಶ ಮಾಡುತ್ತಿತ್ತು. ಹಾಗೆ ಕೊಂಗ್ರೆಸನವರು [illegible] ಕಾಯದೇ ಭಂಗವನ್ನು ಪುಕಾರಿಸಿ ಕರನಿರಾಕರಣೆಯ ತತ್ವವನ್ನು ಬೋಧಿಸಿ ಜೈಲಿಗ [illegible] ಬಾಕಿ ಉಳಿದ ಜನರಿಗೆ ಬೋಧಿಸುವದು ಎಂದರೆ ಬಾಲವಿಲ್ಲದ ನರಿಯು ಬೋಧಿಸಿದ ಹಾಗೆಯೇ [illegible] ನಮ್ಮ ಕೂಡಾ ಜೈಲಿಗೆ ಬಂದು ನಿಮ್ಮ ಹೊಲಮನೆ ಮಕ್ಕಳು [illegible] ಸ್ವರ್ಗಸುಖ ಇದೆ. ಬನ್ನಿರಿ" ಇದೇ ಬಾಲವಿಲ್ಲದ ನರಿಯ ಉಪದೇಶ. [illegible] ನಿಮಗೆ [illegible] ಇದನ್ನು ನೀವೇ ನೋಡಿರಿ ಬಾಳೆಗೇಡಿಗಳ ಮಾತು ಸರಿ ಎನಿಸಿದರೆ ಹಾಗೆ ಮಾಡಿರಿ

[illegible] ನರಿಯ [illegible] ಆಕ್ಷೇಪನೆಂದರೆ ಸರ್ವಜ್ಞನ ಪದಗಳ ಮೇಲೆ ಕೊಂಗ್ರೆಸದವರು ಕುಂದಣ ಕವಿಗಳನ್ನು [illegible] ಹಾಗೆ ತೋರುತ್ತದೆ ಕುಂದಣ ಕವಿಯೆಂದರೆ ಹಿಂದಿನ ಸರ್ವಮಾನ್ಯ ಕವಿತೆಯನ್ನು ತೆಗೆದುಕೊಂಡು ಅದರ [illegible] ತಮ್ಮ ಸ್ವಂತಕ್ಕೆಯಿಂದ ಬಾಕಿ ಇದ್ದಾ ಬದಲಾಯಿಸಿ ತಮ್ಮ ಪ್ರಸಂಗಕ್ಕೆ ಅನುಕೂಲ ಮಾಡಿ ತೋರಿಸುವದು. ಇದಕ್ಕೆ ಕುಂದಣ ಕವಿತೆಯೆಂದು ಯಾಕೆ ಕರೆಯುತ್ತಾರೆ ಎಂದರೆ ಉಂಗುರದಲ್ಲಿ ವಜ್ರದ ಹರಳು ಇಟ್ಟು ಕುಂದಣ [illegible] ಆ ಹರಳನ್ನು ತೆಗೆದು ವಜ್ರದ ಹರಳಿನ ಬದಲಾಗಿ ಕೆಂಪು ವಗೈರೆ ಇತರ ಹರಳುಗಳ [illegible] ಜನರಿಗೆ ತೋರಿಸುವದು ಹಾಗೆಯೇ ಕೊಂಗ್ರೆಸಿನ ಕುಂದಣ ಕವಿಗಳು.

> "ಅಡಿಯ ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ ನರಕ
> ಅಡಿಗಡಿಗೆ ಅಶ್ವಮೇಧ ಫಲಮುಕ್ಕು ದೇಶಕಾರ್ಯಕೆ
> ಮಡಿಯಲೇಬೇಕು."

ಎಂದು ಕುಂದಣ ಕವಿತೆಯನ್ನು ಮಾಡಿದರು ಅದು ಹೇಗೆಂದರೆ ಈ ಮೇಲಿನ ಕವಿತೆಯು ಸರ್ವಜ್ಞನ ಪದಗಳಲ್ಲಿ ಬಂದಿರು[illegible] ಕವಿತೆಯಲ್ಲಿ "ಸ್ವಾಮಿಕಾರ್ಯಕೆ ಮಡಿಯಲೇ ಬೇಕು" ಎಂದು ಇರುತ್ತದೆ ಇದರಲ್ಲಿ ಕುಂದಣ ಕವಿಗಳು [illegible] 'ದೇಶ ಕಾರ್ಯಕೆ' ಎಂತ ಹಾಕಿ ಅಜ್ಞ ರೈತರ ಕಣ್ಣಿನಲ್ಲಿ ಧೂಳು ಒಗೆದು ಸರ್ವಜ್ಞನ ಪದದಲ್ಲಿ ಸ್ವಾಮಿ [illegible]ಕ್ಕೆ ರಾಜದ್ರೋಹಕ್ಕೆ ಆಧಾರ ಉಂಟೆಂದು ತೋರಿಸುವದೇ ಇವರ ಮುಖ್ಯ ಉದ್ದೇಶವು ಈ ಕುಂದಣ ಕವಿಯ [illegible] ಕುಯುಕ್ತಿಯನ್ನು ಹೊರಗೆಡವಿ ಕೊಂಗ್ರೆಸದ ಕುಯಂತ್ರಗಳ ವಿರುದ್ಧವೇ ಸರ್ವಜ್ಞನಿರುತ್ತಾನೆಂದು ತೋರಿಸಿದರೆ ಸರ್ವಜ್ಞನಮೇಲೆ ಇಷ್ಟು ಸಿಟ್ಟೇಕೆ? ಅಥವಾ ಕೊಂಗ್ರೆಸಿನ ವಿರುದ್ಧ ಇದ್ದ ಅವನ ಪದಗಳನ್ನು ಜನತೆಯ ಮುಂದಿಟ್ಟರೆ ಹೊಟ್ಟೆಕಿಚ್ಚೇಕೆ? ಅವರ ಅದಕ್ಕೂ ಕಾರಣ[illegible] ಕಂಡುಹಿಡಿದರೆ ಕೆಂಡದಂತಹ ಕೋಪವೆಂಬುದೇ?

[illegible] ಹೊರಡಿಸುವದು ಕೊಂಗ್ರೆಸದವರಲ್ಲವಂತೆ [illegible] ಇದು ಮೇಲಿಂದ ಮೇಲೆ ಒತ್ತಿ ಹೇಳಿದ್ದರಿಂದ [illegible] ಇದ್ದದ್ದು ಖರೆ ಆಗುವ ಪಕ್ಷದಲ್ಲಿ ಅದನ್ನು ನೂರು ಸಾರಿ ಅಲ್ಲ ಸಾವಿರ ಸಾರಿ ಹೇಳಲಿಕ್ಕೆ ಅಡ್ಡಿ ಇಲ್ಲ. ಈ ಕೊಂಗ್ರೆಸದ ಸತ್ಯಪ್ರಿಯತೆಯ ಒಂದೇ ಒಂದು ಉದಾಹರಣೆಯನ್ನು ಇಲ್ಲಿ ಕೊಡುತ್ತೇನೆ ಸಿದ್ದಾಪುರದ ಯುದ್ಧ ಮಂಡಳಿಯವರು ಪ್ರಸಿದ್ಧ ಮಾಡಿರುವ ತಾರೀಕು [illegible] ರವಿವಾರದ ಸಂಚಿಕೆಯೊಂದರಲ್ಲಿ ಈ ಕೆಳಗಿನ ಉದ್ಗಾರಗಳು ಇರುತ್ತವೆ

" ನೀವು ಈಗ ಕೂಂಡ ಸತ್ಯಾಗ್ರಹಿ ಮಾಲನ್ನು ಈಗಾಗಲಿ ಇನ್ನು ಹತ್ತು ವರ್ಷಗಳ ಮೇಲಾಗಲಿ ನಮ್ಮ ದೇಹದಲ್ಲಿ ಪ್ರಾಣವಿರುವ ವರೆಗೆ ಅದರ ಉಪಭೋಗ ತಗೆದು ಕೊಳ್ಳಲು ಎಂದೆಂದಿಗೂ ಬಿಡಲಿಕ್ಕಿಲ್ಲ ಇದು ನಮ್ಮ ದೃಢ ಪ್ರತಿಜ್ಞೆ! ನಾವು ಜೀವದಾನ ಬಿಟ್ಟು ಹೊರಟವರು ನಾವು ಸಾವಮಾನುಗಳನ್ನು ತಿರುಗಿ ತರೆದುಕೊಳ್ಳುವೆವು. ಇಲ್ಲವೆ ಈ ಜಗತ್ತಿನ [illegible] ಮಾಯವಾಗುವೆವು **ನಾವು ಈ ನಮ್ಮ ಪ್ರತಿಜ್ಞೆಯನ್ನು ಕೈಗೂಡಿಸದೆ ಸತ್ತರೆ ಭೂತ ಪಿಶಾಚಿಗಳಾದರೂ ನಿಮ್ಮನ್ನು ಕಾಡದೆ ಬಿಡಲಿಕ್ಕಿಲ್ಲ.** ಜನ್ಮ ಜನ್ಮಾಂತರಗಳಲ್ಲಿಯೂ ನಿಮಗೆ ನಮ್ಮ ವೈರ ಸಾಧಿಸಬೇಕೆಂಬ ಇಚ್ಛೆ ಇದ್ದರೂ ಪೂರ್ಣವಾಗಲಿ.'

ಹೀಗೆ ಸ್ಪಷ್ಟವಾಗಿ ಭೂತಪಿಶಾಚಿಗಳು ಆಗಿಯಾದರೂ ಕಾಡದೆ ಬಿಡಲಿಕ್ಕಿಲ್ಲ ಎಂದು ಬರೆದಿದ್ದರೂ ಕಾನಡಾ ಜಿಲ್ಲಾ ಕಾಂಗ್ರೆಸ ಕಮಿಟಿಯವರು ತಾ [illegible]ನೇ ದಿವಸದ "ಆಧುನಿಕ ಆಂಗ್ರೇಜೀ ಸರಕಾರ ಭೂತ' ಎಂಬ ಹಸ್ತ ಪತ್ರಕದಲ್ಲಿ ಈ ಕೆಳಗೆ ಬರೆದ ಪ್ರಕಾರ ಬರೆಯುತ್ತಾರಲ್ಲ!

[illegible] 'ನಮ್ಮ ಪ್ರತಿಜ್ಞೆ ಕೈಗೂಡದೆ ಸತ್ತರೆ ಭೂತಪಿಶಾಚಿಗಳಾಗಿಯಾದರೂ ನಿಮ್ಮನ್ನು ಕಾಡದೇ ಬಿಡಲಿಕ್ಕಿಲ್ಲ. ಎಂದು

529

“ಸರ್ಕಸದ ಮೃಗ”-ಕ್ಕೆ ತ್ರಿರ್ಕಸ ಚಾಬೂಕು

ಕೆಂಡುದನು ಆಡೆ ಭೂ-। ಮಂಡಲವು ಮುನಿಯುವದು।
ಕೊಂಡಾಡುತಿಚ್ಛೆ ನುಡಿದರೆ ಜಗವೆಲ್ಲ।
ಮುಂಡಾಡುತಿಹುದು ಸರ್ವಜ್ಞ॥

ನಿಜವಾಗಿ ಸರ್ವಜ್ಞ ಎಂಬ ಹೆಸರು ಸಾರ್ಥಕವಾದದ್ದು ವಿಸ್ತೃತ ಸ್ವಾನುಭವದಿಂದ ಬರೆದ ಮಾತುಗಳು ಸಿದ್ಧಾಂತಗಳೇ ಆಗಿವೆ. “ ನಗೆಯು ಬರುತಿದೆ ” ಎಂಬ ಒಂದು ವಿನೋದದ ಲೇಖವನ್ನು ನೋಡಿ ಒಬ್ಬ ಸ್ವಕ್ಷತ್ರಿಯ ಸತ್ಯಾಗ್ರಹಿಗೆ ತಲೆಗೆ ಪಿತ್ತವೇರಿ ಕಣ್ಣುಗಳು ಕೆಂಪಾಗಿ ಕೆಂಡವನ್ನು ಕಾರುತ್ತವೆ, ಇದನ್ನು ಕೂಡಾ ನೋಡಿ ನಗೆಯು ಬರುತಿದೆ.

2. ನಗೆ ಎಂಬದು ಒಂದು ಅಂಟುರೋಗದ ಜಾತಿಯ ವಿಕಾರವು. ಅದು ಕಾಂಗ್ರೆಸದ ಹಸ್ತಪತ್ರಕದಲ್ಲೇ ಮೊದಲಿಗೆ ಹಿಡಿತಕ್ಕೆ ಬಂತು. ಅದನ್ನು ಸ್ವಲ್ಪವಾಗಿಯೇ ಬೀರಿಯುವರು ತೆಕೊಂಡರೆ ಇಷ್ಟು ಹೊಟ್ಟೆನೋವು ಯಾಕೆ ? ಅದರೂ ಹೊಟ್ಟೆನೋವಿಗೆ ಅಲೋ ಔಷಧವಿರುತ್ತದೆ ಲೇಖಕರು ತಮ್ಮ ಪತ್ತೆಯನ್ನು ಕಳುಹಿಸಿಕೊಟ್ಟರೆ ಯೋಗ್ಯ ಔಷಧೋಪಾಯ ಮಾಡಬಹುದು.

3. ಈ ಲೇಖಕನಿಗೆ ಹೈನದಮೇಲೆ ಒಹಳೇ ಪ್ರಿತಿ ಎಂದು ತೋರುತ್ತದೆ.

ಜೋಳದಾ ಬೋನಕ್ಕೆ ಬೇಳೆಯಾ ತೊಗೆಯಾಗಿ।
ಕಾಳೆಮ್ಮೆ ಕರೆದ ಹೈನಾಗಿ ಬೆಳವಲ
ಮೇಳ ನೋಡೆಂದ ಸರ್ವಜ್ಞ.

ಬೆಳವಲ ಸೀಮೆಯ ಅಥವಾ ಮಲನಾಡಿನ ಹೈನು ತಿಂದು ವಾತುವಾತಿಗೆ ಕನಸಿನಲ್ಲಿ ಸಹ ಹೈನದ ನೆನಪಾಗುತ್ತದೆಂತ ತೋರುತ್ತದೆ ಅದೇ ಲೇಖಕನು ಸಮುದ್ರದಂಡೆಯಲ್ಲಿದ್ದರೆ ಮೀನಿನ ಕಲ್ಪನೆ ಬರುತ್ತಿತ್ತು. ಇದು ಅವನ ಅಂಗದೋಷವೋ ? ಅಥವಾ ಸಂಘದೋಷವೋ ? ತಿಳಿಯದು ರಂಗದೋಷಕ್ಕೆಮಾತ್ರ ಅಲ್ಲ. ಲೇಖಕನು ಯಥಾಶಾಂಗ ಹೈನು ತಿಂದು ದೊಳ್ಳಹೊಟ್ಟೆ ಮಾಡಿಕೊಂಡು ಬಡ ರೈತರಿಗೆ ಮಾತ್ರ ಹುರಿದುಂಬಿಸಿ ಅವರ ಮಕ್ಕಳಮರಿಗಳನ್ನು ಗೋಳಿಗೆ ಹಾಕುವದು ಎಲ್ಲಿಯ ನ್ಯಾಯ. ನ್ಯಾ: ಅದಳಿಯ್ಯ ಒಂದು ನ್ಯಾಯವಿದೆ “ ಪರದು ಖಂ ಶೀತಲಂ ” ಈ ಹೈನ ಎಂಬ ಶಬ್ದವನ್ನು ದೇಶಿಯೆಂಕಲೇ ತಿಳಕೊಂಡೆ. ಅದೂ ಒಂದುವೇಳೆ ತಪ್ಪಾಗುವ ಸಂಭವವಿದ್ದರೂ ಇರಬಹುದು. ಅದು ಖಾಸಾ ಇಂಗ್ರೇಜಿ ಶಬ್ದವಲ್ಲ. ಯಾಕೆಂದರೆ ಇಂಗ್ರೇಜಿ ಮಾಲಿನಮೇಲೆ ಬಹಿಷ್ಕಾರ ಹಾಕುವವರು ಇಂಗ್ರೇಜಿ ಶಬ್ದಗಳನ್ನು ಉಪಯೋಗಿಸುವರೋ ? ಶಕ್ಯವಿಲ್ಲ. ಅವರು ಸ್ವಕ್ಷತ್ರಿಯರಾದ ಸತ್ಯಾಗ್ರಹಿಗಳು. ಇವರಿಂದ ಇಂಥ ತಪ್ಪುಗಳು ಎಂದೂ ಸಂಭವಿಸುವದು ಶಕ್ಯವಿಲ್ಲ.

4. ಈ ಲೇಖಕನು ಎಲ್ಲಾ ಮಾಹಿತಿ ಕೊಡಲಿಕ್ಕೆ ತಯಾರ ಇದ್ದಾನೆ. ಅದನ್ನು ಯಾರ ಹೆಸರಲ್ಲಿ ಯಾವ ಊರಿಗೆ ಕಳುಹಿಸಿ ಕೊಡಬೇಕು ಎಂತ ಖುಲಾಸಾ ಬರೆದರೆ ಅದನ್ನು ಕಳುಹಿಸಿ ಕೊಡಲಿಕ್ಕೆ ಏನೂ ಅಡಚಣೆ ಇಲ್ಲ. ಅಜ್ಞಾತವಾಸದಲ್ಲಿದ್ದು ಶಿಖಂಡಿಯಹಾಗೆ ಅನಾಮಧೇಯನಾಗಿ ಈ ಪ್ರಶ್ನೆಗಳನ್ನು ಕೇಳಿದರೆ ಉಪಯೋಗವೇನು ?

5. ಇಷ್ಟು ಕಾರಭಾರ ನಡಿಸಿದ ನಂತರ ಲೇಖಕನ ವಿದ್ವತ್ತೆಯ ಪರೀಕ್ಷೆ ಪ್ರಾರಂಭವಾಗುವದು.

ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಮ್।
ನಹಿ ವಂಧ್ಯಾ ವಿಜಾನಾತಿ ಗುರ್ವೀಂ ಪ್ರಸವವೇದನಾಮ್॥

ತನ್ನ ಹಿಂದಿನ ವಾಕ್ಯಗಳ ಮೇಲೆ ಈಗ ದೊಡ್ಡ ಮಲ್ಲಿನಾಥೀ ಟೀಕೆಯು ಬಂದಿರುತ್ತದೆ. ವಾಹವ್ವಾ, ನಿಮ್ಮ ಟೀಕಾಕಾರರು ನೀವೊಬ್ಬರು ಮಲ್ಲಿನಾಥರಿದ್ದೀರಿ ಎಂತ ತಿಳಕೊಂಡರೂ ಸಿದ್ದಾಪುರದ ಅಜ್ಞ ರೈತರು ಎಷ್ಟರ ಮಟ್ಟಿಗೆ ಅದರ ಅರ್ಥವನ್ನು ಹಾಗೆ ಮಾಡುವರು ಎಂಬದು ಹೇಳಬಹುದೇನು ?

6. ಆಧುನಿಕ ಮಲ್ಲಿನಾಥರೇ ಸಿದ್ದಾಪುರದ ಯುದ್ಧಮಂಡಲದ ಬಡಬಡಿಕೆಯನ್ನು ನೋಡಿದ ಕೂಡಲೇ ಉತ್ತರಕುಮಾರನ ನೆನಪಾಯಿತೆಂದರೆ ಅದಕ್ಕೆ ಉಪ್ಪು ಖಾರ ಹಚ್ಚಿ ಸರಕಾರವೆಂದರೆ ದುರ್ಯೋಧನ, ಕಾಂಗ್ರೆಸ ಅಂದರೆ ಪಾಂಡವರು ಎಂತ ಟೀಕೆಯನ್ನು ಮಾಡಿ ವಿನೋದ ಮಾಡಿರುತ್ತೀರಲ್ಲ. ದುರ್ಯೋಧನನ ದೃಷ್ಟಿಗೆ ಜಗತ್ತೆಲ್ಲ ದುರ್ಯೋಧನನೆಂತಲೇ ಕಾಣಿಸುತ್ತಿತ್ತು. ಅದು ಜಗತ್ತಿನ ದೋಷವಲ್ಲ. ಅದು ದುರ್ಯೋಧನನ ದೃಷ್ಟಿದೋಷವೇ ಎಂತ ಹೇಳಬೇಕು. ಹಾಗೆ ನಿಮಗೆ ಸರಕಾರವು ದುರ್ಯೋಧನನೆಂತ ತೋರಿದರೆ ಅದು ಯಾರ ದೃಷ್ಟಿದೋಷ. ನಿಮ್ಮ ಪಾಂಡವರ ಉಪಮೆಯಂತು ಬಹಳೇ ಮನೋರಂಜಕವಾಗಿಯದೆ. ನಿಮ್ಮ ಭಾರತದಲ್ಲಿ ಪಾಂಡವರು ಆರು ಮಂದಿಗಳು, ಭೀಮಸೇನರು ಇಬ್ಬರು ಯಾಕೆಂದರೆ ಹಿಂದಿನ ಭೀಮಸೇನನು ಬಲಹೀನನಾಗಿ ಮುದುಕನಾಗಿರ ಬಹುದು, ಅವನ ಜೆಂಬಲಕ್ಕೆಂತ ಡುಪ್ಲಿಕೇಟ ಪ್ರತಿ ತಯಾರ ಮಾಡಿದಿರೇನು ಹೇಳಲಾರೆ. ಈ ಪದವಿಯು ಹಿಂದಿನ ಚಳವಳಿಯಲ್ಲಿ ಶೌಕತಅಲ್ಲಿ ಮಹಮ್ಮದ ಅಲ್ಲಿ ಈ ಬಂಧುದ್ವಯಕ್ಕೆ ಇತ್ತು ಒಬ್ಬ ಭೀಮಸೇನ ಮತ್ತೊಬ್ಬ ಅರ್ಜುನನೆಂತ ಹೇಳುತ್ತಿದ್ದವು. ಅವರು ಈ ನಿಮ್ಮ ಭಾರತದಿಂದ ಯಾಕೆ ಪದಚ್ಯುತರಾದರೆಂತ ಹೇಳುವಿರಾ ? ಮಹಾತ್ಮಗಾಂಧಿಯವರು ಧರ್ಮರಾಜನೆಂತ ಹೇಳುವಿರಿ. ಅದು ನಿಜವಾಗಿಯೂ ಇರಬಹುದು ಮತ್ತು ಯುಗಪರತ್ವದಿಂದ ಧರ್ಮವೂ ಬದಲಾಗಿರ ಬಹುದು. ಹಿಂದಿನ ಭಾರತದಲ್ಲಿ ದ್ವಾಪರ ಯುಗ ಇತ್ತು, ಈಗ ಕಲಿಯುಗ ಪ್ರಾರಂಭವಾಗಿಯದೆ. ಆಗಿನ ಕಾಲದಲ್ಲಿ ವರ್ಣಾಶ್ರಮಧರ್ಮದ ಪ್ರಾಬಲ್ಯವಿತ್ತು. ಆಗಿನ ಧರ್ಮರಾಜನು ಅದನ್ನು ಪಾಲಿಸಿದ ಈಗಿನ ಕಲಿಯುಗದಲ್ಲಿ ಎಲ್ಲ ವಿಪರೀತ ಧರ್ಮವೇ ದೃಷ್ಟಿಗೆ ಬೀಳುತ್ತದೆ. ವರ್ಣಾಶ್ರಮಧರ್ಮ ಮುರಿಯುವದು, ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಡುವದು. ಸ್ತ್ರೀಯರಕಡೆಯಿಂದ ಧಿಂಗಾಣಾ ಹಾಕಿಸುವದು. ಶೂದ್ರರಿಗೆ ವೇದಾಧಿಕಾರವನ್ನು ಕೊಡುವದು, ಅಸ್ಪೃಶ್ಯರೆಂತ ತಿಳುಕೊಂಡವರಿಗೆ ದೇವರಗುಡಿಯೊಳಗೆ ಹೊಕ್ಕು ಪೂಜೆ ಮಾಡಲಿಕ್ಕೆ ಬಿಡುವದು ವಗ್ಯೆರೆ ವಗ್ಯೆರೆ ಈಗಿನ ಕಾಲದ ಧರ್ಮ ಇದರ ಪುರಸ್ಕರ್ತನಾಗಿ ಮ॥ ಗಾಂಧಿಯವರು ಚಳವಳಿ ಮಾಡುವದರಿಂದ ಅವರಿಗೆ ಕಲಿಯುಗದ ಧರ್ಮರಾಜನೆಂತ ಯಾಕೆ ಹೇಳಬಾರದು, ಮತ್ತು ಆ ಯುಗದ ಪ್ರಭಾವದಿಂದಲೇ ಅವರು ಒಂದು ವಿಭೂತಿ ಎಂತ ತಿಳಿದು ಜನರು ಯಾಕೆ ಕುಣಿಯಬಾರದು, ಜವಾಹಿರ ನೇಹರು ಅರ್ಜುನನಂತೆ, ಸನ್ಯಾಸಿವೇಷದಿಂದ ಸಾ

ಭಕ್ತಿಯನ್ನು ಎಬ್ಬಿಸಿ ತಂದ ಸಂಗತಿ ಕಾಂಗ್ರೆಸ್ಸಿನವರಿಗೆ ಗೊತ್ತಿದ್ದರೂ ಗೊತ್ತಿರಬಹುದು. ಈ ಆರುಮಂದಿ ಪಾಂಡವರಿಗೆ ದ್ರೌಪದಿ ಯಾರು ! ಹಿಂದೆ ಒಂದು ಚಿತ್ರದಲ್ಲಿ ಹಿಂದುಸ್ಥಾನವನ್ನೇ ದ್ರೌಪದಿ ಎಂತ ವಹಾದಿ "ಅಲ್ಲಿ" ಬಂಧುಗಳು ಭೀಮಾರ್ಜುನರು ಎಂತ ತೋರಿಸಿದ್ದರು. ಅದು ರದ್ದು ಆಗಿ ದ್ರೌಪದಿಯು ಈಗ ಈ ಆರು ಮಂದಿ ಪಾಂಡವರಿಗೆ ಹೆಂಡತಿಯಾದಳೋ! ಅದರ ನಸಗೆ ತಿಳಿದರಮಟ್ಟಿಗೆ ಈ ಎಲ್ಲಾ ಪಾಂಡವರು "ವಂದೇ ಮಾತರಂ" ಎಂಬ ಘೋಷದಿಂದ ಹಿಂದುಸ್ಥಾನವನ್ನು ತಾಯಿ ಎಂದೇ ಸಂಬೋಧಿಸುತ್ತಾರಲ್ಲ. ಅಂದಮೇಲೆ ದ್ರೌಪದಿ ಯಾರು ತಿಳಿಯಲಿಲ್ಲ. ದರ್ಬಾರಾಯನು ಭಾರತದಲ್ಲಿ ಸವಿನಯ ಕಾಯದೆಭಂಗ ಮಾಡಿದನೋ ಹ್ಯಾಗೆ? ಅಥವಾ ಕರನಿರಾಕರಣೆಯನ್ನು ಬೋಧಿಸಿದನೋ ಹ್ಯಾಗೆ? ಅಥವಾ ನಿಃಶಸ್ತ್ರಯುದ್ಧವೆಂತ ಕಾಂಗ್ರೆಸಕ್ಕೆ ಹೇಳಿಗಿದ್ದನೋ ಹ್ಯಾಗೆ? ಈ ತರದ ಹಲವು ಪ್ರಶ್ನೆಗಳು ಉಪಸ್ಥಿತವಾಗುತ್ತವೆ ಆದರೂ ದೊಡ್ಡ ದೊಡ್ಡ ಹೆಸರು ಕೊಟ್ಟು ಅಜ್ಞ ರೈತರಿಗೆ ಕಣ್ಣಿನಲ್ಲಿ ಧೂಳು ಹಾಕುವ ಸತ್ಯಾಗ್ರಹಿಗಳ ಸತ್ಯಪ್ರಿಯತೆಯೋ? ಈ ಎಲ್ಲ ಹೆಸರುಗಳನ್ನು ಕೂಡುವಾಗ ಆಯಾ ವ್ಯಕ್ತಿಗಳಿಗೆ ಕೇಳಿ ಹೆಸರು ಕೊಟ್ಟರೋ ಹ್ಯಾಗೆ? ಯಾಕೆಂದರೆ ಗಾದೆ ಮಾತಿನಂತೆ

ಹೆಸರು ಕ್ಷೀರಸಾಗರಭಟ್ಟ, ಮಜ್ಜಿಗೆ ನೀರಿಗೆ ತತ್ವಾರ.

ಹೀಗ ಆಗಬಾರದು ಹೆಸರಿಗೆ ಯೋಗ್ಯ ಕೃತಿಗಳಾದರೆ ಭೂಷಣ ಇಲ್ಲದಿದ್ದರೆ ದೂಷಣ.

"ಬ್ರಿಟಿಷ ರಾಜನೀತಿಜ್ಞರು ಇನ್ನು ಭಾರತೀಯರ ಅಜ್ಞಾನದ ಲಾಭವನ್ನು ತಕ್ಕೊಂಡು ಇವರನ್ನು ಆಳುವದು ಶಕ್ಯವಿಲ್ಲವಾದ್ದರಿಂದ ತಾವು ಹಿಂದುಸ್ಥಾನದ ರಾಜ್ಯಸೂತ್ರಗಳನ್ನು ಹಿಂದುಸ್ಥಾನದ ನಿವಾಸಿಗಳಿಗೆ ಕೂಡಲೇ ಬಿಡಬೇಕಾಗುತ್ತದೆಂತ ಎಂದೋ ನಿರ್ಧರಿಸಿ ಬಿಟ್ಟಾರೆ?" ಈ ನಿರ್ಧಾರವನ್ನು ಎಂದು ಮಾಡಿದ್ದಾರೆ ಎಂದು ಹೇಳುವಿರಾ. ಈ ನಿರ್ಧಾರವು ಕಾಂಗ್ರೆಸ ಚಳವಳಿಯಿಂದ ಮಾಡಿದ್ದಲ್ಲ. ಲಾರ್ಡ ಮೆಕಾಲೆ ಯಾವಾಗ ಹಿಂದುಸ್ಥಾನಕ್ಕೆ ಜ್ಞಾನಸಾಮ್ರಾಜ್ಯವನ್ನು ಇಂಗ್ಲೀಷ ಭಾಷೆಯಲ್ಲಿ ಕೊಟ್ಟು ಜನರ ಅಜ್ಞಾನವನ್ನು ಓಡಿಸಿ ಸಜ್ಞಾನ ಮಾಡಬೇಕೆಂತ ನಿರ್ಧರಿಸಿದರೋ ಆವಾಗಲೇ ಈ ನಿರ್ಧಾರವು ಸಹ ಆಗಿತ್ತು. ಮತ್ತು ಅದೇ ಧೋರಣವನ್ನು ಸರಕಾರವು ಅವಲಂಬಿಸಿಯದೆ ಹಿಂದುಸ್ಥಾನವನ್ನು ಸದಾ ದೀರ್ಘಕಾಲ ಅಜ್ಞಾನದಲ್ಲಿಯೇ ಇಡಬೇಕೆಂದು ಅವರು ಮನಸ್ಸಿನಲ್ಲಿ ತಂದರೆ ಹಾಗೆ ಮಾಡಲಿಕ್ಕೆ ಅವರಿಗೆ ಏನು ಅಡಚಣಿ ಇತ್ತು ಆಗ ಕಾಂಗ್ರೆಸದ ಜನ್ಮ ಸಹ ಆಗಲಿಲ್ಲವಿತ್ತು.

ಕಾಂಗ್ರೆಸವು ಎಲ್ಲರನ್ನು ಸಮದೃಷ್ಟಿಯಿಂದ ನೋಡುತ್ತದಂತೆ ಅ-ಬ-ಬ. ಕಾಂಗ್ರೆಸಕ್ಕೆ ಈಗ ಮುಸಲಮಾನರಂತು ಬಹಿಷ್ಕಾರ ಹಾಕಿರುತ್ತಾರೆ. ಸದ್ಯಕ್ಕೆ ಕಾಂಗ್ರೆಸ ಅಂದರೆ ಮಹಾತ್ಮಾಗಾಂಧಿ ಮ॥ ಗಾಂಧಿ ಅಂದರೆ ಕಾಂಗ್ರೆಸ. ಕಂಡಾಬಿಟ್ಟಿ ಕಾಂಗ್ರೆಸಿನಲ್ಲಿ ಘಂಡಮೆಂಟಲ ರ್‍ಯಾಟ್ಸ (ಇಂಗ್ರೇಜಿ ಮಾಲಿಗೆ ಬಹಿಷ್ಕಾರ ಹಾಕುವವರು ಇಂಗ್ರೇಜಿ ಶಬ್ದಗಳಿಗೆ ಬಹಿಷ್ಕಾರ ಹಾಕಲಾರರು) ಸಾರಲ್ಪಟ್ಟಿತು. ಅದೇ ಕಾಂಗ್ರೆಸಿನಲ್ಲಿ ಇನ್ನೊಂದು ಠರಾವು ಪಾಸ ಆಗಿತ್ತೋ ಹೇಗೆ ಅದನ್ನು ದಯಪಾಲಿಸಿ ಹೇಳುವಿರಾ! ಅದು ಯಾವದೆಂದರೆ "ಬ್ರಿಟಿಷಸರಕಾರವು ಲಷ್ಕರದ ಹೆಸರಿನಿಂದ ಬಹಳೇ ರೂಪಾಯಿ ಖರ್ಚ ಮಾಡುತ್ತದೆ. ಅದು ತೀರ ಅನಾವಶ್ಯ. ಲಷ್ಕರೀ ಖರ್ಚ ಅಜಿಬಾತ ಕಿತ್ತಿ ತೆಗೆಯಬೇಕು ಮತ್ತು ನೆರೆಕರೆಯ ರಾಷ್ಟ್ರಗಳಿಗೆ ವ ಇಡೀ ಜಗತ್ತಿಗೆ ಪ್ರಸಿದ್ಧ ಮಾಡಬೇಕಲ್ಲ-ನಾವು ಹಿಂದೀ ಜನಾಂಗವು ಬೇರೆ ರಾಷ್ಟ್ರಗಳಮೇಲೆ ದಾಳಿಮಾಡಿ ಬರುವದಿಲ್ಲ ಬೇರೆ ರಾಷ್ಟ್ರಗಳು ಹಾಗೆಯೇ ನಮ್ಮ ಮೇಲೆ ದಾಳಿ ಮಾಡಿ ಬರಬಾರದು. ಇದು ಎಷ್ಟು ಸಮಂಜಸ ಠರಾವೋ ಅಷ್ಟೇ ಸಮಂಜಸ ಠರಾವು ಘಂಡಮೆಂಟಲ ರ್‍ಯಾಟಿನದ್ದು. ಹಾಗೆ ಸಮಾನ ಹಕ್ಕಿನ ಠರಾವ ಆದರೆ ಅದನ್ನು ಇಡೀ ರಾಷ್ಟ್ರವು ಪಾಸಮಾಡಿತೋ ಹ್ಯಾಗೆ. ಹಾಗೆ ಮಾಡಿದರೆ ಮೊನ್ನೆ ಸಿಂಹಸ್ಥಪರ್ವಣಿ ವೇಳೆಯಲ್ಲಿ ನಾಸಿಕದ ರಾಮಕುಂಡ ವಗೈರೆ ತೀರ್ಥಗಳನ್ನು ಅಸ್ಪೃಶ್ಯರು ಮುಟ್ಟಬಾರದು ಎಂತ ದಾವೆ ವಗೈರೆ ಆಗಿ ಮನಾಯಿ ಹುಕುಂ ಯಾಕೆ ಬೇಕಿತ್ತು. ಲಕ್ಷಾವಧಿ ಯಾತ್ರಿಕರು ಕೂಡಿದಾಗ ಅವರು ಒಮ್ಮನಸ್ಸಿನಿಂದ ಅಸ್ಪೃಶ್ಯರಿಗೆ ಯಾಕೆ ದೂರ ಮಾಡಿದರು. ಕಾಳಾರಾಮ ದೇವಸ್ಥಾನದಲ್ಲಿ ಅಸ್ಪೃಶ್ಯರ ಸತ್ಯಾಗ್ರಹ ನಡೆದಿರುವಾಗ ಕಾಂಗ್ರೆಸದವರು ಏನು ಮಾಡಿದರು. ಕಾಂಗ್ರೆಸಿನಲ್ಲಿ ಪ್ರಧಾನಿಗಳೆಂತ ಮೆರೆಯುತ್ತಿದ್ದ ಹಲವು ವೀರರು ಕಾಂಗ್ರೆಸಕ್ಕೆ ರಾಜೀನಾಮೆ ಕೊಟ್ಟು ಸತ್ಯಾಗ್ರಹದ ವಿರುದ್ಧ ಚಳವಳಿ ಮಾಡಿಲ್ಲವೇನು? ಸ್ವತಹಾ ಮ॥ ಗಾಂಧಿಯವರ ಕಡೆಗೆ ಎಷ್ಟೋ ಸನಾತನ ಧರ್ಮಾಭಿಮಾನಿಗಳು ಬಂದು ನಿಡಣೀ ಅಸ್ಪೃಶ್ಯರ ಬಗ್ಗೆ ಆದ ಠರಾವ ರದ್ದ ಮಾಡಿಸಬೇಕೆಂತ ಆಗ್ರಹ ಹಿಡಿದಿಲ್ಲವೇ? ಪೂನಾದಲ್ಲಿ ಪರ್ವತಿಯಲ್ಲಿ ಸತ್ಯಾಗ್ರಹವೇನಾಯಿತು, ಕಾಂಗ್ರೆಸದ ಠರಾವ ಮಾನ್ಯ ಆಗಿ ಜನರು ಅದನ್ನು ಅಮಲಿನಲ್ಲಿ ತಂದ ಉದಾಹರಣೆಗಳು ಇಡೀ ಹಿಂದುಸ್ಥಾನದಲ್ಲಿ ಎಷ್ಟಿರುತ್ತವೆ. ಒಂದುವೇಳೆ ಕಾಂಗ್ರೆಸಕ್ಕೆ ರಾಜ್ಯ ಸಿಕ್ಕಿತು. ಠರಾವಿನ ಬದಲಾಗಿ ಕಾಯಿದೆಯನ್ನೇ ಮಾಡಿದರು ಎಂದು ತಿಳಿಯುವ. ಆ ಕಾಯಿದೆಯನ್ನು ಬಹುಜನ ಸಮಾಜವು ಪಾಲಿಸುವರೇನು? ಪಾಲಿಸದಿದ್ದರೆ ಸತ್ಯಾಗ್ರಹನಡಿ ಸವಿನಯ ಕಾಯಿದೆ ಭಂಗ ಮಾಡುವರೇನು? ಇದು ಇಷ್ಟವೇ ಎಂತ ವಾಚಕರೇ ಊಹಿಸಲಿ

"ಬಾರಡೋಲಿಯಲ್ಲಿ ಧಟ್ಟನೆ ಚಳವಳಿಯು ನಿಂತುವಾದ್ದರಿಂದ ಅನೇಕರು ಸೇರಲಿಕ್ಕೆ ಸಾಧ್ಯವಾಗಲಿಲ್ಲವೆಂದು ನಿಜ" ಬಾಬಾಸ! ಈ ಕಟೂಳಿ ಜವಾಬು ನಮಗೆ ಉತ್ತಮ ಪುರಾವೆ. ಬಾರಡೋಲಿಯವರು ಅಸಭ್ಯಸ್ಥರಲ್ಲ. ಹಿಂದೆ ಎರಡು ಚಳವಳಿಗಳಲ್ಲಿ ಭಾಗ ತೆಗೆದುಕೊಂಡು ರವನಿಖಕರನ ಸ್ಪಿ ನಿರತ ವೀರರು. ಇವರಲ್ಲಿ ಕೆಲವರು ದೇಶತ್ಯಾಗ ಮಾಡಿ ಸಂಸ್ಥಾನದಲ್ಲಿ ಹೋಗಿದ್ದರೆಂದು ಕಾಂಗ್ರೆಸದವರು ಪ್ರಸಿದ್ಧ ಮಾಡಿದ ಕಾರಣ ಇವರಿಗೆ ಈ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳಲಿಕ್ಕೆ ಜಯ್ಯದ ತಯ್ಯಾರ ಮಾಡಿ ಲಕ್ಷಾವಧಿ ರೂಪಾಯಿ ಖರ್ಚ ಮಾಡುವ ಜರೂರಿ ಇದ್ದಿಲ್ಲ. ನಿಜವಾದ ಕಾರಣವೇನಂದರೆ ಹಿಂದಿನ ಚಳವಳಿಯಲ್ಲಿ ತಾವು ಹುಚ್ಚುತನ ಮಾಡಿ ಗೋಳಿಗೆ ಬಿದ್ದೇವೆ. ಇನ್ನು ಇದರ ಗೊಡವೆ ಬೇಡ ಎಂತ ಅನುಭವದಿಂದ ತೆಗೆದುಕೊಂಡ ಮಾರ್ಗವು. ಇದರ ಕಟು ಅನುಭವವು ಸಿದ್ದಾಪುರದ ಜನರಿಗೆ ಬರಲಿಕ್ಕೆ ಹತ್ತಿದ್ದದೆ ಅಲ್ಲಿ ಸಹ ಜಪ್ತಿ ಲಿಲಾವ ವಗೈರೆ ಆಗಿಯ ಎಂದು ಕೊಟ್ಟ ಸಂಖ್ಯೆಯನ್ನು ಎಷ್ಟರಮಟ್ಟಿಗೆ ಖರೆ ಅವೆ ಎಂತ ಹೇಳಲಾರೆ. ಆದರ ಸಂಖ್ಯೆಗಳು ಖರೆ ಇರುತ್ತವೆ ಎಂದು ನಂಬಿ ಹಿಡಿದರೂ, ಅವು ಏನು ದೊಡ್ಡ ಸಂಖ್ಯೆಗಳಲ್ಲ. ೧ ಆಣೆ ಬಾಕಿ ಇದ್ದರೂ ಒಂದು ಪ್ರಕರಣ ವಾಗುತ್ತದೆ. 4000 ರೂಪಾಯಿ ಇದ್ದರೂ ಒಂದು ಪ್ರಕರಣ ವಾಗುತ್ತದೆ ಹೀಗೆ ಲಿಲಾವ ಜಪ್ತಿ ಆಗಿ ವಸೂಲ ಆದ ರಕಂ ಎಷ್ಟು ಎಂತ ಮಾತ್ರ ಪ್ರಸಿದ್ಧವಾಗಲಿಲ್ಲ. ಆದರಮೇಲಿನಿಂದ ಅದು ಬಹಳೇ ಕಡಿಮೆ ಇರಬೇಕೆಂತ ತಿಳುಕೊಳ್ಳಬಹುದು.

ಗ್ರೇಟಬ್ರಿಟನಿನಿಂದ ಆಮದಾದ ಮಾಲಿನ ಬೆಲೆಯನ್ನು ಕೆಳಗೆ ಕೊಟ್ಟಿದ್ದೇನೆ. ಹಾಗೆಯೇ ಹಿಂದುಸ್ಥಾನದಿಂದ ಗ್ರೇಟಬ್ರಿಟನಿಗೆ ರಫ್ತಿಸಿದ ಮಾಲಿನ ಬೆಲೆಯನ್ನು ಕೊಡಲಿಲ್ಲ. ಅದು ಜಾಸ್ತಿ ಆಗಿದ್ದರೆ ಕಾಂಗ್ರೆಸದ ಚಳವಳಿಯು ಬಲವತ್ತರವೆಂದು ತಿಳಿಯಬಹುದು ಮಹಾ ಯುದ್ಧದ ನಂತರ ಪ್ರತಿ ಒಂದು ದೇಶದಲ್ಲಿ ಆರ್ಥಿಕ ಪರಿಸ್ಥಿತಿಯು ಕೆಟ್ಟುಹೋಗಿಯದೆ ಆದ್ದರಿಂದ ಜಗತ್ತಿನ ಎಲ್ಲ ದೇಶಗಳಲ್ಲಿ ವ್ಯಾಪಾರದ ಮಂದಿಯು ಬಂದಿರುತ್ತದೆ ಅದು ನಿಜವಾಗಿ ಕಾಂಗ್ರೆಸದ ಚಳವಳಿಯ ಮೂಲಕವಲ್ಲ. ಅದರ ಬದಲಾಗಿ ಕಾಂಗ್ರೆಸದ ಚಳವಳಿ ಇದ್ದರೂ ಬ್ರಿಟಿಷ ಸಾಮ್ರಾಜ್ಯದ ಸ್ಥಿತಿಯು ಉತ್ತಮವಿರುತ್ತದೆ ಹೋದ ವರ್ಷಕ್ಕಿಂತ ಈ ವರ್ಷ

ಲ್ಲಿ ಕಾಲದ ಬುದ್ಧಿಯು ಕಡಿಮೆಯಾಗಿ ಸರಕಾರಕ್ಕೆ ಬೇಕಾದಷ್ಟು ಅಥವಾ ಬೇಕಾದಕ್ಕಿಂತ ಹೆಚು ಕಾಲವು ಸೋಯಿವಾರ ದೊರೆಯುತ್ತದೆ.

" ಇಡೀ ಪ್ರಪಂಚವೇ ಸತ್ಯಾಗ್ರಹವು ಗಾಂಧಿಯವರು ಪ್ರಪಂಚದಲ್ಲಿ ತೋರಿಸಿಕೊಟ್ಟ ಅತ್ಯುತ್ತಮ ವಾಗಳವೆಂತ ಸಾರುತ್ತದೆ. ' " ಅಹೋರೂಪಮಹೋ ಧ್ವನಿಃ " ಇದು ಕಾಂಗ್ರೆಸದ ಭಕ್ತರು ಒಬ್ಬರಿಗೊಬ್ಬರು ಪ್ರಶಂಸೆ ಮಾಡುವರೀತಿಯಾದರೆ ಇನ್ನೂ ಉತ್ತಮ. ಇದನ್ನು ನೋಡಿ ನನಗೊಂದು ಕಥೆಯು ನೆನಪಾಗುತ್ತದೆ ಹಿಂದೆ ಒಬ್ಬ ಮನುಷ್ಯನು ಒಬ್ಬ ಮನುಷ್ಯನ ಖೂನ ಮಾಡಿದನಂತೆ. ಅವನು ವಕೀಲರ ಕಡೆಗೆ ಬಂದು ಸಲ್ಲೆ ಕೇಳಲು ಅವರು ಸಲ್ಲೆ ಕೊಟ್ಟರು ಮತ್ತು ಸಲ್ಲೆ ಪ್ರಕಾರ ನಡೆದರೆ ನೀನು ಬಿಡುಗಡೆ ಹೊಂದುತ್ತಿ. ಬಿಡುಗಡೆ ಯಾದರೆ ತನಗೆ ಬಕ್ಷಿಸು ಕೊಡಬೇಕೆಂದು ಮಾತೂ ನಡೆಯಿತು ಆ ಸಲ್ಲೆ ಪ್ರಕಾರ ಕೋರ್ಟಿನಲ್ಲಿ ಮಜಿಸ್ಟ್ರೇಟರು ಮಾಡಿದ ಪ್ರತಿಯೊಂದು ಪ್ರಶ್ನೆಗೆ ಆರೋಪಿಯ ಉತ್ತರ " ಬೆ ಎ ಎ ಬೆ ಎ ಎ. ' ನಿನ್ನ ಹೆಸರೇನು? " ಬೆ ಎ ಎ ಬೆ ಎ ಎ " ನಿನ್ನ ಅಪ್ಪನ ಹೆಸರು ಏನು? " ಬೆ ಎ ಎ ಬೆ ಎ ಎ " ನಿನ್ನ ಜಾತಿ ಯಾವದು? " ಬೆ ಎ ಎ ಬೆ ಎ ಎ. "

ಹೀಗೆ ಪ್ರತಿಯೊಂದು ಪ್ರಶ್ನೆಗೆ ಈ ಉತ್ತರ ಕೊಟ್ಟು ಹುಚ್ಚನಂತೆ ನಟಿಸಿದ್ದರಿಂದ ಆರೋಪಿಯು ಹುಚನಿದ್ದಾನೆಂದು ಬಿಟ್ಟು ಬಿಟ್ಟರಂತೆ. ಆಗ ವಕೀಲರು ಆರೋಪಿಯ ಕಡೆಗೆ ಒಂದು ಬಕ್ಷಿಸ ಬೇಡಿದ ಕೂಡಲೇ ಅವರಿಗೂ ಅದೇ ಉತ್ತರ " ಬೆ ಎ ಎ ಬೆ ಎ ಎ " ಎಂತ ಸಿಕ್ಕಿತು- ಹಾಗೆಯೇ ಗಾಂಧಿಯವರು ಈ ಉಪಾಯವನ್ನು ಶೋಧಿಸಿ ಜಗಕ್ಕೆ ಕೊಟ್ಟರು ಅದು ಕೇವಲ ಸರಕಾರದ ವಿರುದ್ಧ ಮಾತ್ರ ಉಪಯೋಗ ಮಾಡಬೇಕೆಂತ ಗಾಂಧಿಯವರ ವ ಕಾಂಗ್ರೆಸದವರ ವಿಚಾರ ಇದ್ದರೂ ಅದು ಕಾಂಗ್ರೆಸದ ವಿರುದ್ಧವೇ ಮಾಡಿದರೆ ಗಾಂಧಿಜಿಯವರು ಏನು ಹೇಳುವರು- ಇದನ್ನು ಸತ್ಯ ಸಮಾಜದವರು ಬ್ರಾಹ್ಮಣರ ವಿರುದ್ಧ ಮಾಡಿದರೆ, ಅಥವಾ ಅಸ್ಪೃಶ್ಯರು ಸನಾತನ ಧರ್ಮನಿಯಾಯಿಗಳ ವಿರುದ್ಧ ಮಾಡಿದರೆ, ಅಥವಾ ಕಾಂಗ್ರೆಸದವರು ಅಸ್ಪೃಶ್ಯರ ವಿಷಯವಾಗಿ ಮಾಡಿದ ಠರಾವಿನ ವಿರುದ್ಧ ಸನಾತನ ಧರ್ಮನಿಯಾಯಿಗಳಿಗೆ ಮಾಡಿದರೆ ಅದು ಉತ್ತಮವೇ ಎಂತ ಶಿಫಾರಸು ಮಾಡುವಿರಾ.

ರಾವಣ ಕಂಸ ದುರ್ಯೋಧನ ವಗೈರೆ ಪುರಾಣ ಪ್ರಸಿದ್ಧ ರಾಜರಿದ್ದರೂ ಅವರ ವಿರುದ್ಧ ಪ್ರಜೆಗಳು ಬಂಡ ಮಾಡಿ ಕರ ನಿರಾಕರಣೆ ಮಾಡಿದರು, ಸವಿನಯ ಕಾಯದೆಭಂಗ ಮಾಡಿದರು ಅಥವಾ ನಿಃಶಸ್ತ್ರ ಪ್ರತಿಕಾರ ಮಾಡಿದರು ಎಂತ ಯಾವ ಪುರಾಣದಲ್ಲಿಯೂ ಓದಿಯಲಿಲ್ಲ. ರಾವಣನು ಸೀತೆಯನ್ನು ತಂದ ಪಾಪಕ್ಕಾಗಿ ಬಲಿ ಬಿದ್ದನೇ ಹೊರತು ಪ್ರಜೆಗಳ ಸವಿನಯ ಕಾಯದೆಭಂಗಕ್ಕೆ ಬಲಿ ಬೀಳಲಿಲ್ಲ. ಹಾಗೆಯೇ ಕಂಸನಿಗೆ ಕೃಷ್ಣನು ಸಂಹಾರಕನೆಂತ ತಿಳಿದು ಕೃಷ್ಣನ ಮೇಲೆ ಬೇಕಾದ ದಕ್ಕ ಮೋಸ ಮಾಡಿ ಕಡೆಗೆ ಕೃಷ್ಣನು ಭವಿತವ್ಯತೆಯ ಪ್ರಕಾರ ಆಳಿಯನು ಮಾವನಿಗೆ ಕೊಂದನೇ ಹೊರತಾಗಿ ಗಾಂಧಿಜಿಯವರ ನಿಃಶಸ್ತ್ರ ಪ್ರತಿಕಾರದ ಹಾಗೆ ಪ್ರಜೆಗಳ ಒಂದಕ್ಕೆ ಬಲಿ ಬೀಳಲಿಲ್ಲ. ದುರ್ಯೋಧನನು ಸಹ ತನ್ನ ಭಾವಬಂದಕೀಯ ಮೂಲಕ ಭಾವಬಂದರ ಯುದ್ಧದಲ್ಲಿ ಸತ್ತನಲ್ಲದೆ ಪ್ರಜೆಗಳು ಸವಿನಯ ಕಾಯದೆಭಂಗಕ್ಕೆ ಬಲಿ ಬಿದ್ದನೇ? ಭೀಷ್ಮ ದ್ರೋಣಾದಿಗಳು ಧರ್ಮಶಾಸ್ತ್ರವೇತ್ತರು ತಮ್ಮ ಅರಸನು ಅನ್ಯಾಯಿ ಎಂದು ತಿಳಿದರೂ ಅವರು ರಾಜನಮೇಲೆ ಬಂಡ ಮಾಡಿದರೋ? ಸ್ವಾಮಿಕಾರ್ಯಕ್ಕೆ ಮಡಿಯಬೇಕು ಎಂತ ಹೇಳಿ ಅನ್ಯಾಯಿ ರಾಜನಿಗೆ ಸಹ ಸೇವೆ ಮಾಡಿ ರಾಜನಿಷ್ಠೆಯನ್ನು ತೋರಿಸಿದರಲ್ಲದೆ ರಾಜದ್ರೋಹದ ಕಲ್ಪನೆಯು ಸಹ ಅವರ ಮನಸಿನಲ್ಲಿ ಬಂದಿಲ್ಲ ಅಂಥವರ ವಂಶಜರೆನಿಸಿ ರಾಜದ್ರೋಹವನ್ನು ಯಾವ ಬಾಯಿಂದ ಬೋಧಿಸುತ್ತೀರಿ. ನೀವು ಮೇಲೆ ಅರ್ಜುನ ಪಾಂಡವರ ಉಪಮೆಯನ್ನು ಕೊಟ್ಟು ಗಾಂಧಿಜಿಯವರು ಧರ್ಮರಾಜನೆಂದು ಹೊಗಳಿದಿರಲ್ಲ, ಆ ಭಾರತದ ಪಾಂಡವರಿಗೆ ಶ್ರೀಕೃಷ್ಣ ಪರಮಾತ್ಮನ ಬೆಂಬಲವಿತ್ತು. ಇಲ್ಲದಿದ್ದರೆ ಅಶ್ವಮೇಧ ಪರ್ವದಲ್ಲಿ ಅದೇ ಅರ್ಜುನನ ಪರಾಕ್ರಮ ವೇನಾಯಿತು? ಶ್ರೀಕೃಷ್ಣನ ಅವತಾರ ಮುಗಿದ ಮೇಲೆ ಏನಾಯಿತು? ಭೀಮ ಅರ್ಜುನ ವಗೈರೆ ಹೆಸರನ್ನು ತೆಗೆದುಕೊಂಡು ಬಡಬಡಿಸಿದ ಕೂಡಲೆ ಭೀಮಾರ್ಜುನರ ಪರಾಕ್ರಮ ಬರುವದಿಲ್ಲ ಅದಕ್ಕೆ ಧರ್ಮಾಭಿಮಾನಿಯಾದ ಪರಮಾತ್ಮನ ಸಹಾಯ ಬೇಕಾಗುತ್ತದೆ ಇಲ್ಲದಿದ್ದರೆ ಎಲ್ಲಾ ನಿಮ್ಮ ಉತ್ತ ಚಳವಳಿ ನೀರಿನಲ್ಲಿ ಮಾಡಿದ ಹೋಮವೇ ಎಂತ ತಿಳುಕೊಳ್ಳಿರಿ. ಶ್ರೀ ವೇದವ್ಯಾಸ ಮುನಿಗಳು ಹೇಳಿದ ಹಾಗೆ

ಯತೋ ಧರ್ಮಸ್ತತೋ ಜಯಃ

ಸತ್ಯಾಗ್ರಹ ಎಂತ ಹೆಸರಿನಲ್ಲಿ ಅಸತ್ಯಾಚರಣ- ಸರಕಾರಕ್ಕೆ ಹುಚ್ಚರ ಹಾಗೆ ಬೈಯುವದು, ಅತ್ಯಾಚಾರ ಅನಾಚಾರ ಮಾಡುವದು ಇದೆಲ್ಲ ಧರ್ಮವೋ? ನೀವು ಹೇಳಿದ ಗಾದೆಯ ಮಾತಿನಂತೆ ಸೂರ್ಯನ ಕಡೆಗೆ ಉಗುಳಿದರೆ, ಆ ಉಗುಳು ತನ್ನ ಮೋರೆಯ ಮೇಲೆಯೇ ಬೀಳುವದು. ಇದು ನಿಜವಾದ ಮಾತೇ ಎಂತ ನನ್ನದೂ ನಂಬಿಕೆಯುಂಟು

ಪ್ರಿಯ ಮಿತ್ರನೇ ಭಗವದ್ಗೀತೆಯ ಶ್ಲೋಕಗಳನ್ನು ಓದಿದ ಕೂಡಲೇ ಅದು ತಂತೋತಂತ ಆಗು ಬೀಳುತ್ತದೆಂತ ತಿಳಿದಿಯಾ! ಧರ್ಮ ಸಂಸ್ಥಾಪನೆಯನ್ನು ಮಾಡಬೇಕಾದರೆ ಮತ್ತು ಪರಮಾತ್ಮನ ಅವತಾರ ವಾಗಬೇಕಾದರೆ, ವರ್ಣಸಂಕರ ಧರ್ಮ ಭ್ರಷ್ಟತೆ, ಅಧರ್ಮದ ಪ್ರಾಬಲ್ಯ ವಗೈರೆ ಆಗಬೇಕಾಗುತ್ತದೆ. ಕಲಿಪುರುಷನ ಸಹಾಯಕನಾಗಿ ಗಾಂಧಿಜಿಯವರು ಹೊಲೆಯರಿಗೆ ವೇದಾಧಿಕಾರ ಕೊಟ್ಟು ವರ್ಣಾಶ್ರಮ ಧರ್ಮ ಮುರಿದು ವರ್ಣಸಂಕರ ವಗೈರೆ ಮಾಡಿ ಇಡೀ ವೇದ ಪ್ರಣೀತ ಧರ್ಮವು ನಷ್ಟಾಂಶ ವಾಗಬೇಕು. ಅದು ಇನ್ನೂ ಆಗಿಲ್ಲ. ಅದು ಗಾಂಧೀಜಿಯವರು ಅಥವಾ ಅವರ ಸಮಾನ ಧರ್ಮರು ಮಾಡಿ ಕಲಿಯುಗದ ಪ್ರಾಬಲ್ಯವು ಪೂರಾ ವಿಕಾಸವಾದಾಗ ಮಾತ್ರ ಕೃಷ್ಣಪರಮಾತ್ಮನ ಅವತಾರವು ಆಗುವದು ಅದು ನಮ್ಮ ಪುರಾಣಗಳ ಪ್ರಕಾರ ಇನ್ನೂ ಬಹಳ ವರ್ಷಗಳ ನಂತರ ಬರುವದು, ಅದು ಕಲ್ಕಿ ಎಂತ ಹಿಂದಕ್ಕನೇ ಪ್ರಸಿದ್ಧಿಯಾಗಿರುತ್ತದೆ ಆಗ ಅವತಾರಿ ಪುರುಷನು ಕುದುರೆ ಮೇಲೆ ಏರಿ ಖಡ್ಗದಿಂದ ದುಷ್ಟರನ್ನು ಸಂಹಾರ ಮಾಡುವದಲ್ಲದೆ ನಿಃಶಸ್ತ್ರ ಪ್ರತಿಕಾರ ಮಾಡಿ ಜೇಲಿನಲ್ಲಿ ಬಿದ್ದುಕೊಂಡಲೆ ಧರ್ಮಸಂಸ್ಥಾಪನೆಯಾಗುವದಿಲ್ಲ ಎಂತ ನಿಜವಾಗಿ ನಂಬು. ಪಂಡಿತ ಮದನಮೋಹನ ಮಾಲವೀಯರು ಮಾಡಿದಹಾಗೆ ಇಡೀ ಮ್ಲೇಂಚ್ಛ ಶೂದ್ರಾದಿಗಳಿಗೆ ಗಾಯತ್ರೀಜಪ ಕೊಟ್ಟು ವೇದಾಧಿಕಾರ ಕೊಟ್ಟು ಬ್ರಾಹ್ಮಣರಲ್ಲಿ ಗಾಯತ್ರೀಜಪ ಮಾಡುವದು ಬಂದ ಆಗುವ ತನಕ ಅಂಥಾ ಅಧರ್ಮವು ಪ್ರಬಲಕ್ಕೆ ಬಂದು ಅವತಾರವಾಗುವ ಭೀತಿ ಇಲ್ಲ.

ಇದನ್ನೆಲ್ಲ ಓದಿ ವಿಚಾರ ಮಾಡಿದ ನಂತರ ಕುಚೇಷ್ಟೆ ಮಾಡಿ ಪ್ರತಿಷ್ಠೆಗೆ ಬರುವ ಹವ್ಯಾಸವನ್ನಾದರೂ ಬಿಟ್ಟುಬಿಡು.

" ಕಂಡುದನು ನುಡಿದರೆ ಕೆಂಡವಾಗುವದೇಕೆ ? "

" ಸತ್ಯಪ್ರಿಯ ಭಾರತೀಯ. "

M P Karwar.

ಸತ್ಯಾಗ್ರಹಿಗಳೋ ಪಿಶಾಚಿಗಳೋ!

ನಮ್ಮ ಈ ಜಿಲ್ಲೆಯ ಕೆಲವು ಕಾಂಗ್ರೆಸ ಸತ್ಯಾಗ್ರಹಿಗಳ ಕೀರ್ತನೆ ವರ್ಣಿಸಿದಷ್ಟು ಕಡಿಮೆ. ಸತ್ಯವೇ ತಮ್ಮ ಧರ್ಮವೆಂತಲೂ ಅಹಿಂಸಾತ್ಮಕ ಅಸಹಕಾರವೇ ತಮ್ಮ ತತ್ವವೆಂತಲೂ ಅನ್ನುವರು. ಆದರೆ ನಿಜವಾಗಿ ಇವರ ಆಚರಣೆಗಳನ್ನು ವಿಚಾರಿಸಿದರೆ ಇವರ ಧರ್ಮ ಹಾಗೂ ತತ್ವ ಬೇರೇ ಇರುವದು. ಇವರ ಮನಸ್ಸಿನಲ್ಲಿ ಒಂದು ಹೊರಗೊಂದು ಇದರಿಂದ ಇವರ ಮಾತಿಗಾಗಲೀ ಕೃತ್ಯಗಳಿಗಾಗಲೀ ವಿಚಾರಿ ಜನರು ಲಕ್ಷ ಕೊಡತಕ್ಕಂಥದಲ್ಲ. ಆದರೂ ಇವರು ನಮ್ಮ ಜಿಲ್ಲೆಯ ಕೆಲವು ಅಜ್ಞಾನಿ ಒಕ್ಕಲಿಗರಿಗೆ ಧಮಕಿ ಕೊಟ್ಟು ಅಯಥಾರ್ಥ ಹಾಗೂ ಹಿಂಸಾತ್ಮಕ ಕೃತ್ಯಗಳನ್ನು ನಡಿಸಹತ್ತಿದ್ದರಿಂದ ಅವರಕಡೆಗೆ ಲಕ್ಷ ಕೊಡಬೇಕಾಗಿದೆ.

ಕರನಿರಾಕರಣ ಬೋಧನೆ ಕೊಡುವವರು ಯಾವ ತರದ ಜನರು ಇದು ಇನ್ನು ತಿಳಿಯುವದಿಲ್ಲ. ಯಾಕಂದರೆ ಇವರು ತಮ್ಮ ಹೋರೆಗಳನ್ನು ಬೆಳಕಿಗೆ ತಾಣಿಸುವದಿಲ್ಲ. ಕೆಲವರಂತೂ ತಮ್ಮ ಜಮೀನಿಗಳ ಪೂರ ಕರ ವಗೈರೆ ಕೊಟ್ಟು ಬೇರೆಯವರಿಗೆ ಮಾತ್ರ ಮೋಫತ್ ಉಪದೇಶ ಕೊಡುವ ಧರ್ಮದ ಕೆಲಸದಲ್ಲಿ ತೊಡಗಿರುವರು. ಕರಪತ್ರಗಳಲ್ಲಿ ತೋರುವ ಕೆಲವು ವಾಕ್ಯಗಳಿಂದ ಇವರು ಕೊಡುವ ಬೋಧನೆಯು ಯಾವ ಪ್ರಕಾರದೆಂಬುವದು ಉಘಡವಾಗುವದು. ಎಷ್ಟೋ ಜನರು ಇವರ ಬೋಧನೆ ಬದಿಗಿಟ್ಟು ಕರಗಳನ್ನು ಕೊಟ್ಟಿರುವರು ಕೊಡದೇ ಇದ್ದವನಿಗೆ ಇವರು ಹೇಳುವದೇನಂದ್ರೆ " ನಮ್ಮ ದೇಹದಲ್ಲಿ ಒಂದು ರಕ್ತ ಕಣ ಇರುವ ವರೀಗೆ ನಿಮಗೆ ಸತ್ಯಾಗ್ರಹೀ ಜಮೀನು ದಕ್ಕಿಸಲಿಕ್ಕೆ ಕೊಡುವದಿಲ್ಲ. ಒರೇ ಪುಸ್ತಕದಲ್ಲಿ ಖಾತೇದಾರರ ಹೆಸರು ಬದಲಾಯಿಸಬಹುದು. ಆದರೆ ಅದನ್ನು ತಿದ್ದುಪಡಿ ಮಾಡಲು ಸ್ವರಾಜ್ಯ ಸರಕಾರಕ್ಕೆ ಕ್ಷಣ ಸಹ ಹಿಡಿಯಲಿಕ್ಕಿಲ್ಲ...... ಈ ಪರಕೀಯ ರಾಜ್ಯಕರ್ತರು ಗಂಟುಮೂಟೆ ಕಟ್ಟಿಟ್ಟಿದ್ದಾರೆ. ಬೋಟಗಳು ಚುಕ್ಕಾಣಿ ತಿರುಗಿ ತಯಾರಾಗಿ ನಿಂತವೆ. ಅವರು ಬೋಟಿಮೇಲೆ ಕಾಲಿಡುವದೇ ತಡವಾಗಿದೆ " ಇಂಥಾ ಶಬ್ದಗಳಿಂದಲೂ ತಮ್ಮ ಮೇಲೆ ವಿಶ್ವಾಸಪೂರ್ಣವಾಗಿ ಕೂಡ್ರಲಿಕ್ಕಿಲ್ಲೆಂಬ ವಿಚಾರದಿಂದಲೋ ಏನೋ ಇವರು ಇನ್ನೂ ಬೋಧಿಸುವ ಪಿಶಾಚಿಕ್ರಮ ಕೇಳಿರಿ.

" ನಾವು ಜೀವದ ಆಶೆ ಬಿಟ್ಟವರು. ನಾವು ಸಾಮಾನುಗಳನ್ನು ತಿರಿಗಿ ತೆಗೆದು ಕೊಳ್ಳುವೆವು ಇಲ್ಲವೇ ಈ ಜಗತ್ತಿನಿಂದ ಮಾಯವಾದೆವು. ಈ ನಮ್ಮ ಪ್ರತಿಜ್ಞೆಯನ್ನು ಕೈಗೂಡಿಸದೇ ಸತ್ತರೆ, ಭೂತ ಪಿಶಾಚಿಗಳಾಗಿಯಾದರೂ ನಿಮ್ಮನ್ನು ಕಾಡದೇ ಬಿಡಲಿಕ್ಕಿಲ್ಲ. " ಇದೇನೂ ಹುಡುಗಾಟಿಕೆಯೊ, ಸತ್ಯಾಗ್ರಹವೋ ತಿಳಿಯದು. ಅಥವಾ ಬೇರೆಯುವರಿಗೆ ಪ್ರೇರಣೆ ಮಾಡುವಂಥ ಯಾವತ್ತೂ ಸಾತ್ವಿಕ ವಿಚಾರಗಳು ಲೋಪವಾದದ್ದರಿಂದ ಇಂಥಾ ಅಸಭ್ಯ ಹಾಗೂ ಹಿಂಸಾತ್ಮಕ ವಿಚಾರಗಳು ಇವರಲ್ಲಿ ಮನೆ ಮಾಡಿಕೊಂಡಿರುವವೋ ಹ್ಯಾಗೆ ತಿಳಿಯದು. ಏನೇ ಇರಲಿ, ಸತ್ಯಾಗ್ರಹಿಗಳೆಂದು ಅನ್ನಿಸಿಕೊಳ್ಳುವವರು ಈ ತರದ ಅಸತ್ಯ ಹಾಗೂ ಡಾಂಬಿಕ ಶಬ್ದಗಳನ್ನು ಆಡ ಹತ್ತಿದಮೇಲೆ ಅವರಬಗ್ಗೆ ಎಳ್ಳಷ್ಟಾದರೂ ವಿಶ್ವಾಸ ಯಾ ಭಕ್ತಿ ಹುಟ್ಟಲಿಕ್ಕಿಲ್ಲ. ಆದರೂ ಇನ್ನು ಕೆಲವು ರೈತ ಜನರು ಇವರ ತಕ್ಕಿನದ ಜಾಲದಲ್ಲಿ ಬೀಳಲು ಉದ್ಯುಕ್ತರಾದದ್ದು ನೋಡಿ ಆಶ್ಚರ್ಯ ತೋರುವದು.

ಅಜ್ಞ ಒಕ್ಕಲಿಗರೇ! ಈ ತರದ ಹುಡುಗಾಟಿಕೆ ಸತ್ಯಾಗ್ರಹಕ್ಕೆ ಯಾ ಬೋಧನೆಗೆ ಮರುಳಾಗಬೇಡಿರಿ. ನಿಮ್ಮ ಸುತ್ತುಮುತ್ತು ನೋಡಿರಿ. ನಿಮ್ಮ ಇತರೇ ಯಾವತ್ತು ಜನರು ತಮ್ಮ ತಮ್ಮ ವ್ಯವಸಾಯ ನಡಿಸಿಕೊಂಡು ಕರ ವಗೈರೆ ಕೊಟ್ಟು ವಾಸಿಗಿರುವರು. ವಕೀಲರು, ವ್ಯಾಪಾರಿಗಳು, ಕಂಟ್ರಾಕ್ಟರರು ಹಾಗೂ ಇತರೇ ವ್ಯವಸಾಯಿ ಬಂಧುಗಳು ತಮ್ಮ ತಮ್ಮ ವ್ಯವಸಾಯವನ್ನು ಸಾಂಗ್ಯವಾಗಿ ನಡಿಸಿಕೊಂಡು ಒಂದಿರುವರು. ನೀವು ಮಾತ್ರ ಅವಿಚಾರದಿಂದ ಬಲಿಗೆ ಬೀಳುವ ಫಲವೇನು? ಬೇರೆ ಜಿ

ಲ್ಹೆಗಳಲ್ಲಿ ಕೂಡಾ ಇದೇ ಪ್ರಕಾರ ಜನರು ತೀರ್ವೆ ಕೊಟ್ಟಿರುವರು. ನೀವು ಈ ಪ್ರಕಾರ ಪರಿಸ್ಥಿತಿ ತಿಳಕೊಳ್ಳದೇ ಬೇರೆಯವರ ಮಾತಿಗೆ ಮರುಳಾಗಿ ನಿಮ್ಮ ಹೊಲಮನೆಗಳನ್ನು ಹಾಳಮಾಡಿಕೊಳ್ಳುವ ಮುಂಚೆ ವಿಚಾರ ಮಾಡ್ರಿ. ಒಮ್ಮೆ ನೀವು ತೀರ್ವೆ ಕೊಡದೇ ಹೊಲಮನೆ ಕಳಕೊಂಡ್ರೆ ಪುನಃ ಬೇರೆ ಸರಕಾರವು ಬಂದು ಖಾತೆ ಬದಲಾಯಿಸಿ ಕೊಟ್ರೇ ತಾಗಲಿ ಈ ಸತ್ಯಾಗ್ರಹಿಗಳು ಜಮೀನು ಸವಾಂಲಿನಲ್ಲಿ ಖರೇದಿಗೆ ಪಡಕೊಂಡ ಜನರ ಹತ್ರ ಜಗಳಾಗಿ ರಕ್ತಪಾತ ಮಾಡಿಸಿ ನಿಮಗೆ ಭೂಮಿ ಬಿಡಿಸಿ ಕೊಡುವರೆಂಬದಾಗಲೀ ನಿಮಿಷ ಮಾತ್ರ ನಂಬಬೇಡಿರಿ. ಕೊಂಗ್ರೆಸ ಸತ್ಯಾಗ್ರಹಿಗಳು ಖರೇ ತಿರುಕನ ರಾಜ್ಯದೊಳಗಿನ ಕಥೆಯಾಗಲೀ ಪಿಶಾಚಿ ಕಥೆಯಾಗಲೀ ಹೇಳಿರುವರು. ಇವರು ಅನ್ನುವಂತೆ ಸತ್ತ ನಂತ್ರ ಬೇರೆಯವರ ಮೇಲೆ ಭೂತ ಪಿಶಾಚಿಯಾಗಿ ಪರಿಣಾಮ ಮಾಡುವದು ಹ್ಯಾಗೂ ಇರಲಿ, ಈಗಲೇ ಅವರು ಭೂತಾದಿಗಳಂತೆ ವರ್ತಿಸ ಹತ್ತಿದ್ದಾರೆ. ಚುಕ್ಕಾಣಿ ತಿರುಗಿ ಇರುವ ಬೋಟಿಗಳು ನಮ್ಮ ರಾಜ್ಯಕರ್ತರ ಬಗ್ಗೆ ಅಲ್ಲಾ. ಆದ್ರೆ ಪ್ರಸಂಗ ಬಂದಾಗ ಪಲಾಯನ ಮಾಡುವ ಬಗ್ಗೆ ಈಗ ತಪ್ಪಿಸಿಕೊಂಡು ಪಿಶಾಚಿ ರೂಪದಿಂದ ಅಡ್ಡಾಡುವ ಈ ಸತ್ಯಾಗ್ರಹಿಗಳ ಬಗ್ಗೆ ಇರಬೇಕು. ಸುಮ್ಮನೇ ನೀವು ಇಂಥಾ ಹುಚ್ಚಾಟದಿಂದ ಮರುಳಾಗಬೇಡಿರಿ. ಅವರು ನಿಮ್ಮ ಸಹಾಯಕ್ಕೆ ಎಂದೂ ಬರಲಿಕ್ಕಿಲ್ಲಾ. ನಿಮ್ಮ ಕರ್ಮಕ್ಕೆ ನೀವೇ ಜವಾಬದಾರರಾಗುವಿರಿ. ನೀವು ನಿಮ್ಮ ಬದುಕು ಬಾಳು ಕಳಕೊಂಡು ನಿಮ್ಮ ಮರಿಮಕ್ಕಳು ಗೋಳಿಡುವಾಗ ಈ ಪಿಶಾಚಿ ಸತ್ಯಾಗ್ರಹಿಗಳು ಅದೃಶ್ಯವಾಗುವರೇ ಸರಿ. ಎಚ್ಚರಿಕೆ, ಎಚ್ಚರಿಕೆ! ನಮ್ಮ ಜನರು ತೀರ್ವೆ ಕೊಡದೇ ಇರುವದರಿಂದ ಮಾತ್ರದಿಂದಲೇ ದೇಶದ ಉದ್ಧಾರವಾಗಲಿಕ್ಕಿಲ್ಲಾ. ಇನ್ನು ನೀವು ಎಷ್ಟೋ ಮಾತುಗಳನ್ನು ಕಲಿಯಬೇಕು. ನಿಜವಾದ ಸಾಂಪತ್ತಿಕ ಅಡಚಣಿಗಳು ನಿಮ್ಮಲ್ಲಿ ಇದ್ರೆ ಅವುಗಳನ್ನು ನೀವು ರಾಜಕರ್ತರ ಮುಂದೆ ಇಟ್ಟು ನ್ಯಾಯಾಶ್ರಯ ಪಡಿಯಬಹುದು. ಈ ಸತ್ಯಾಗಹಿಗಳ ಗೋಜಿಗೆ ಬಿದ್ರೆ ನೀವು ಇನ್ನು ನಿಮ್ಮ ಸ್ಥಿತಿ ಕೆಡಿಸಿಕೊಳ್ಳುವಿರಿ. ಅವರು ತಾವು ದೇಶದ ಉದ್ಧಾರ ಮಾಡುತ್ತೇವೆಂತ ತಿಳಿಯಬಹುದು. ಆದ್ರೆ ಅವರ ತಿಳುವಳಿಕೆ ತಪ್ಪಿರುವದು. ತಾವು ಅಡಗಿಕೊಂಡು ಇರುತ್ತಾ ಹೆಂಣು ಮಕ್ಕಳಿಗೆ ಮುಂದೆ ಹಾಕಿ ಅವರಿಗೆ ತ್ರಾಸ ಕೊಡುವದರಲ್ಲಿ ಅವರಿಗೆ ಏನೂ ಭೂಷಣವಿಲ್ಲಾ. ಇದರಲ್ಲಿ ಅವರಿಗೆ ಯಾವ ತರದ ಪೌರುಷತ್ವ ಕಾಣುವದೋ ತಿಳಿಯದು. ದೈವವೇ! ಜ್ಞಾನ ಬುದ್ಧಿ ಇಲ್ಲದ ಅಬಲೆಯರಿಗೆ ಅನ್ಯಾಯ ಕ್ರಮಕ್ಕೆ ಹಚಿ ಅವರಿಗೆ ಕಷ್ಟಪಡಿಸಿ ಹಾಗೂ ಅಜ್ಞಾನಿ ಒಕ್ಕಲಿಗರಿಗೆ ದುರುಪದೇಶ ಕೊಟ್ಟು ಅವರ ಮನೆ ಮಾಡು ಹಾಳು ಮಾಡಿಸಿ ತಾವು ಮಾತ್ರ ಅಡಗಿಕೊಂಡು ಸುರಕ್ಷಿತ ಇರುವದಕ್ಕೆ ಈ ಸತ್ಯಾಗ್ರಹಿಗಳಿಗೆ ಯಾಕೆ ನಾಚಿಕೆ ಬರಲಾರದು! ಇಂಥ ಅಸತ್ಯ ಹಾಗೂ ಹಿಂಸಾತ್ಮಕ ಕೃತ್ಯಗಳಿಂದ ನಮ್ಮ ದೇಶದ ಉನ್ನತಿಯು ಅವಧಿಯು ಮಾತ್ರ ಮುಂದೆ ಮುಂದೆ ಹೋಗಿ ದೇಶದಲ್ಲಿ ಅಶಾಂತತೆ ಹಾಗೂ ತ್ರಾಸವಾದೀತೆಂಬುವದರಲ್ಲಿ ಸಂದೇಹವಿಲ್ಲಾ. ಇಂಥಾ ಸ್ವಾರ್ಥಿ ಹಾಗೂ ಬೇಜವಾಬದಾರಿ ಜನರ ಮಾತಿಗೆ ಮರುಳಾಗದೇ ನಮ್ಮ ಜಿಲ್ಹೆಯ ಅಜ್ಞಾನಿ ಒಕ್ಕಲಿಗರು ಇನ್ನಾದರೂ ತಮ್ಮ ಕಣ್ಣು ತೆರೆದು ಸತ್ಯ ಮಾರ್ಗವನ್ನು ಹಿಡಿಯಲೆಂದು ನಾವು ಈಶ್ವರನಲ್ಲಿ ಪ್ರಾರ್ಥಿಸುವೆವು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಹೇಳಿದಂತೆ ನಾವು ನಮ್ಮ ಉದ್ಧಾರ ನಮ್ಮಿಂದಲೇ ಮಾಡಿಕೊಳ್ಳಬೇಕಲ್ಲದೇ ನಾವು ಅಧೋಗತಿಗೆ ಹೋಗುವ ಮಾರ್ಗ ಕೈಕೊಳ್ಳಬಾರದು.

उद्धरेदात्मनात्मानं नात्मानमवसादयेत् । आत्मैव ह्यात्मनो बंधुरात्मैव रिपुरात्मनः ॥

(ನಾವೇ ನಮ್ಮನ್ನು ಮೇಲೆ ತರಬೇಕು. ನಮ್ಮನ್ನು ಅಧೋಗತಿಗೆ ತರಗೊಡಬಾರದು. ಯಾಕಂದ್ರೆ ಮನುಷ್ಯನು ತಾನೇ ಹಿತಕರ್ತನು ಮತ್ತು ತಾನೇ ತನ್ನ ವೈರಿಯೂ ಆಗುವನು॥.)

ಕಾನಡಾ ಜಿಲ್ಹಾ ತಾ॰ 4–8–1932.

" ತಮ್ಮ ಹಿತ ಚಿಂತಕ "

M. P. Karwar.